
ಕಲ್ಯಾಣ ಕಿರಣ



ನವಂಬರ್

ಕನ್ನಡ ರಾಜ್ಯೋತ್ಸವ

ಕಲ್ಯಾಣ ಕಿರಣ

ಸಂಪುಟ : ೩ ನವಂಬರ್ : ೧೯೭೭

ಸಂಚಿಕೆ : ೭ ಬಸವ ಶಕೆ : ೮೭೧

ಈ ಸಂಚಿಕೆಯಲ್ಲಿ ಏನಿದೆ ?



ಈ ತಿಂಗಳ ಮುಂಗಃಮೂರ್ತಿ

ಕೆ. ಆರ್. ಲಿಂಗಪ್ಪ

(ವ್ಯಕ್ತಿ ಪರಿಚಯ ಪುಟ ೫೯)

೧	ನುಡಿನೈವೇದ್ಯ	ಮಾತಾಜಿ	೧
೨	ನಿಮ್ಮ ಅನಿಸಿಕೆ	ಓದುಗರು	೨
೩	ಮಾತೃಹರಕೆ	ಸಂಪಾದಕೀಯ	೪
೪	ವಚನ ನವನೀತ	ಸದ್ಗುರು ಶ್ರೀಲಿಂಗಾನಂದಸ್ವಾಮಿಗಳು	೯
೫	ಸಮಸ್ಯೆ ಸಮಾಧಾನ	ಸಮಾಧಾನಿ	೧೧
೬	ಮಾತು ಜ್ಯೋತಿರ್ಲಿಂಗ	ಸಂಗ್ರಹ	೧೫
೭	ದೊಡ್ಡಮರ (ಕವನ)	ಗೋ.ರು.ಚ.	೧೬
೮	ವಿಶ್ವಕಲ್ಯಾಣ ಮಿಷನ್	ಶಿವರಾಯ ಚಂದ್ರಕಂಠಿ	೧೭
೯	ನವಸಮಾಜ ನಿರ್ಮಾಣ	ಹಳಪೇಟೆ ಚಿಂತಾಮಣಿ	೨೭
೧೦	ಕಲ್ಯಾಣ ಕಿರಣ ಸಂದರ್ಶನ	ಗೋ.ರು.ಚ.	೩೧
೧೧	ದೃಷ್ಟಾಂತ ಕಥೆ	ಮಾತಾಜಿ	೩೫
೧೨	ಪ್ರಶ್ನೋತ್ತರಮಾಲೆ	ಸುಯಿಧಾನಿ	೩೬
೧೩	ಬಸವ ಬೀಡಿನಿಂದ ಆಂಗ್ಲನಾಡಿಗೆ	ಮಾತಾಜಿ	೩೮
೧೪	ಚಿಜ್ಯೋತಿ ಚನ್ನಬಸವಣ್ಣ	ಸೋದರಿ ಕುಮುದಾ	೪೧
೧೫	ಚನ್ನಬಸವಣ್ಣನ ಜನ್ಮವೃತ್ತಾಂತ	ವರದಿ	೪೭

ಮುಖಪುಟ : ಕನ್ನಡನಾಡು ಅನುಭಾವದ ಬೀಡು

ಹಿಂಬದಿಯ ಹೊದಿಕೆ : ಬೆಂಗಳೂರಿನ ಬಸವ ಮಂಟಪ

ಕಲ್ಯಾಣ ಕಿರಣ

ಕನ್ನಡ ಮಾತೆಗೆ **ನುಡಿ-ನೈವೇದ್ಯ**

ಏರಲೇರಲಿ ಕನ್ನಡ ನುಡಿ ಬಾನೆತ್ತರಕೆ
ಹಸರಿಸಲೀ ಕನ್ನಡಮುಲಿ ಜಗಬಿತ್ತರಕೆ ‖ ಪಲ್ಲವಿ ‖


ಬಾನಂಗಣವನು ಬೆಡಗಿನಿಂದಲಿ ತುಂಬಿ
ಅಂಬುಧಿಯ ಬಿಂದುವೊಳು ಅಣುವಾಗಿ ಬೆರೆದು
ಬೀಸುವ ಗಾಳಿಯು ಬ್ರಹದೊಡಲೊಳು ಸೇರಿ
ಬೆಳೆಯುವ ಮಣ್ಣಿನ ಕಣಕಣದೊಳು ತೂರಿ ‖ ೧ ‖

ಈ ಕನ್ನಡ ನಾಡು ಬಾವನ್ನದ ಬೀಡು
ಈ ಕನ್ನಡ ನುಡಿ ಶ್ರೀವಾಣಿಯು ಉಲಿ
ಈ ನುಡಿಯ ದನಿಕೇಳಿ ನಾಚದಿಪುದೆ ವೀಣೆ ?
ಈ ಮಧುರ ಸೊಲ್ಲಿಗೆ ಸೋಲದಿಪ್ಪುದೆ ಕೋಕಿಲೆ ? ‖ ೨ ‖

ಬಸವ ಕನಕ ಪುರಂದರ ಗೊಮ್ಮಟ ಜಿನ ಸರ್ವಜ್ಞ
ನಡೆದ-ನುಡಿದ ಬೀಡಿದು ಸಿರಿಕಲೆಯ ಗುಡಿಯಿದು
ವಚನ-ನುಡಿಯು ಕ್ರಾಂತಿಗೀತೆ ಸಾರುತಿದೆ ಸಮತೆ
ನಾಡಕೊಡುಗೆ ಗಂಧಬತ್ತಿ ಸೂಸುತಿದೆ ಸೌರಭ ‖ ೩ ‖

ಕ್ರಾಂತಿಪುರುಷ ಬಸವನನ್ನು ಹೆತ್ತು ಹೊತ್ತ ಮಾತೆಗೆ
ಅರ್ತಿಯಿಂದ ಎತ್ತಿ ಆರತಿ ಉತ್ಸಹದಲ್ಲಿ ಹಾಡುವಾ
ಹಾರಿಸುತ ಎತ್ತರಕೆ ಕರುನಾಡ ಬಾವುಟವಾ
ಜಯತು ಜಯತು ಎನ್ನುವಾ, ಜಯಘೋಷ ಮಾಡುವಾ ‖ ೪ ‖

ನಿಮ್ಮ ಅನಿಸಿಕೆ



೧. ಕಲ್ಯಾಣ ಕಿರಣವು ಮಾನವನ ಮನಕ್ಕೆ ಚಿದ್ಬೆಳಗನ್ನೀಯಲಿ. (ಟೆಲಿಗ್ರಾಂ)

ಹ. ದೇ. ಚಂದನಗೌಡರು, ಧಾರವಾಡ.

೨. ಕಲ್ಯಾಣ ಕಿರಣದ ರವಿ, ರವಿವಾರದಂದು ಬಸವಮಂಟಪದಲ್ಲಿ ಉದಿಸುತ್ತಿರುವನು. ತನ್ನ ಜ್ಞಾನಕಿರಣಗಳಿಂದ ಲೋಕದ ತಿಮಿರವ ಕಳೆಯುವನೆಂಬ ಭರವಸೆ ಇದೆ; ಕಳೆಯಲೆಂಬ ಹಾರೈಕೆ ಇದೆ.

–ಗೋ. ರು. ಚನ್ನಬಸಪ್ಪ

೩. ಕಲ್ಯಾಣ ಕಿರಣ ಹೊರಡುವ ಸುದ್ದಿಯು ಅಚ್ಚರಿ-ಆನಂದದ ಸಮ್ಮಿಶ್ರ ಭಾವವನ್ನು ತಂದಿತು. ಕುತ್ಸಿತ ಲೇಖನಗಳನ್ನು ಓದಿ ನೊಂದು ಬೆಂದ ಮುಗ್ಧಭಕ್ತರ ಮನಕ್ಕೆ ಶಿವ ಮದ್ದಾಗಬಲ್ಲದಿದು ಎಂಬ ಸಮಾಧಾನ

–ಬಸವರಾಜ ತೆಂಬಾಕೆ, ಶಹಾಪುರ.

೪. ಕಲ್ಯಾಣ ಕಿರಣ ಪುನರಾರಂಭವಾಗಲಿರುವುದು ಸಂತಸದ ವಾರ್ತೆ. ಬಸವಣ್ಣನವರ ವಚನ ತತ್ತ್ವಗಳ ಸರಿಯಾದ ಸಮೀಕ್ಷೆ ಇಲ್ಲಿ ಸಿಗುವದೆಂಬ ಭರವಸೆ ನಮಗೆ. ನಿರಂತರವಾಗಿ ನಡೆದು ಬಲಗೊಂಡು ಬೆಳೆಯಲಿ.

–ಎಸ್. ಎಂ. ಅಂಗಡಿ, ಧಾರವಾಡ.

೫. ಪತ್ರಿಕೆಯ ಆರಂಭ ನಮಗೆಲ್ಲ ಹಬ್ಬ. ಸಂಸಾರದ ಸಾಗರದಲ್ಲಿ ಅರಿಷಡ್ವರ್ಗಗಳೆಂಬ ಅಲೆಗಳ ಹೊಡೆತಕ್ಕೆ ಸಿಕ್ಕು, ಮೋಹವೆಂಬ ಗುಂಡನ್ನು ಕಾಲಿಗೆ, ಲಿಂಗವೆಂಬ ಬೆಂಡನ್ನು ಕೊರಳಲ್ಲಿ ಕಟ್ಟಿಕೊಂಡು ತೇಲುತ್ತಾ ಮುಳುಗುತ್ತ ಈಜುತ್ತಿರುವಾಗ, ಗುಂಡನ್ನು ಕತ್ತರಿಸಿ ಬೆಂಡಿನ ಬಲದಿಂದ ಮುಕ್ತಿದಡವನ್ನು ಮುಟ್ಟುವಂತೆ ಕಲ್ಯಾಣ ಕಿರಣ ಮಾರ್ಗದರ್ಶನ ಮಾಡಲೆಂದಾಶಿಸಿ.

–ಮುಜ್ಜಿಗೆ ವಿರೂಪಾಕ್ಷಪ್ಪ, ಬಳ್ಳಾರಿ.

೬. ಕಲ್ಯಾಣ ಕಿರಣ ಬರುವುದೇ ಹರ್ಷದಾಯಕ ವಾರ್ತೆ. ಮಾತೆಯವರು ಪ್ರವಚನ ನೀಡುವಾಗ ತಾಜಾ ಜ್ಞಾನದ ಹಾಲು ಸಿಕ್ಕುವುದು ; ಆ ನಂತರ ಏನೂ ಇಲ್ಲ ಎಂದು ಸೊರಗುವಾಗಲೇ ಆ ತಾಯಿಯವರ ಕಂಪನಿಯಲ್ಲಿ ತಯಾರಾದ ಗಟ್ಟಿಗೊಳಿಸಿದ ಜ್ಞಾನದ ಕೆನೆ, ಕಲ್ಯಾಣ ಕಿರಣದ ಡಬ್ಬಿಯ ಮೂಲಕ ಬಂದರೆ ಯಾರಿಗಾಗದು ಆನಂದ?

–ದೇವಕಿ–ಸೂಳೀಭಾವಿ,
ಬಾಗಲಕೋಟೆ.

ಕಲ್ಯಾಣ ಕಿರಣ

ಮಾಸಪತ್ರಿಕೆ

Regd No. B.G. 356

ಸಂಸ್ಕೃತಿ, ಸಾಹಿತ್ಯ, ನೀತಿ ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು:

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ,
ಬೆಂಗಳೂರು–೫೬೦೦೧೦

ಕಲೆ :

ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್,
ಬೆಂಗಳೂರು–೫೬೦೦೫೩.

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).

* ಚಂದಾದಾರರು ಪತ್ರವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



ಭೂಮಿ ಮತ್ತು ಅದರ ಚಲನೆ

'ಸೃಷ್ಟಿಯು ಒಂದು ತೆರೆದಿಟ್ಟ ಪುಸ್ತಕ.' 'ನಿಸರ್ಗವು ಬಹು ದೊಡ್ಡ ಶಿಕ್ಷಕ.' ಹೀಗೆ ಹಲವಾರು ಉಕ್ತಿಗಳಿವೆ. ನಿರೀಕ್ಷಿಸುವವನಿಗೆ ನಿಸರ್ಗವು ಹೆಜ್ಜೆ ಹೆಜ್ಜೆಗೂ ಪಾಠವನ್ನು ಕಲಿಸುತ್ತದೆ. ಒಂದು ಉದಾಹರಣೆಯನ್ನು ಆರಿಸಿಕೊಳ್ಳೋಣ. ಪೃಥ್ವಿಯು ಜೀವಕೋಟಿಯನ್ನು ಧರಿಸಿದ, ಸತತವಾಗಿ ತಿರುಗುವ ಒಂದು ವಿಶೇಷ ಗೋಲು ಒಂದಾನೊಂದು ಕಾಲದಲ್ಲಿ ಸೂರ್ಯನಿಂದ ಸಿಡಿದು, ಉರಿಯುವ ಗೋಲವಾಗಿ, ನಂತರ ತಣ್ಣಗಾಗಿ, ಬೆಸಲಾಗಿ, ಜೀವಕೋಟಿಯನ್ನು ಹೆತ್ತ ಒಡಲು. ಇಂಥ ಪೃಥ್ವಿ ಸದಾಕಾಲ ತನ್ನ ಅಕ್ಷದ ಸುತ್ತಲೂ ತಿರುಗುತ್ತದೆ. ಬೇನೆ-ಬೇಸರಿಕೆಗಳಿಲ್ಲವೇನೋ ಎಂಬಂತೆ ಗಾಣವಾಡುತ್ತಿದೆ. ತನ್ನ ಅಕ್ಷದ ಸುತ್ತಲೂ ತಿರುಗುವುದಷ್ಟೆ ಅಲ್ಲದೆ ತನ್ನ ಜನ್ಮದಾತನನ್ನು ಮರೆಯದೆ, ಆ ಸೂರ್ಯನ ಸುತ್ತಲೂ ಸಂಚರಿಸುತ್ತದೆ. ಸೂರ್ಯನ ಸುತ್ತಲೂ ನಿರ್ಮಾಣವಾಗಿರುವ ವಲಯವನ್ನು ಉಲ್ಲಂಘಿಸಿ ಹೋಗದೆ ಆ ನಿಯಮಕ್ಕನುಗುಣವಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದೆಯೆಂದೇ ನಮಗೆ ಹಗಲು-ರಾತ್ರಿಗಳುಂಟು ; ಮಳೆ-ಬೆಳೆಗಳುಂಟು, ಋತು-ಸಂವತ್ಸರಗಳುಂಟು.

ಒಂದು ವೇಳೆ ಪೃಥ್ವಿಯು ತನ್ನ ಅಕ್ಷದ ಸುತ್ತಲೂ ತಿರುಗದೆ, ಮನಸ್ಸಿಗೆ ಬಂದಂತೆ 'ತೊಘಲಕ್' ಆಗಿ ತಿರುಗಿದ್ದರೆ, ನಮ್ಮ ಬಾಳೆಷ್ಟು ಅಸಹನೀಯವಾಗಬಹುದಿತ್ತು. ಅಥವಾ ತನ್ನ ಅಕ್ಷದ ಸುತ್ತಷ್ಟೆ ತಿರುಗಿ ರವಿ ಮಂಡಲದಿಂದ ಹೊರಗುಳಿದದ್ದರೆ ಆದು ಅನಾಮಧೇಯವಾಗಿ, ಅಲಕ್ಷಿತವಾಗಿ ಉಳಿಯಬಹುದಿತ್ತು. ಯಾವ ವರ್ತುಲದೊಳಕ್ಕೂ ಸಿಗದೆ, ಯಾವ ಕಟ್ಟು ಪಾಡಿಗೂ ಒಳಗಾಗದೆ, ಹಿಂಡನಗಲಿದ

ಗಜದಂತೆ, ಒಂಟಿ ಸಲಗದಂತೆ ಇರುವ ಎಷ್ಟೋ ನಕ್ಷತ್ರಗಳು, ಗೋಲಗಳು ನಭಾಂಗಣದಲ್ಲಿ ಇದ್ದರೂ, ಮಾನವನ ದೃಷ್ಟಿಗೆ ಗೋಚರವಾಗಿಲ್ಲ.

ನಿಸರ್ಗದ ಈ ಉದಾಹರಣೆಯನ್ನು ಬಾಳಿಗೆ ಅನ್ವಯಿಸಿ ನೋಡಿದರೆ ಅಮೂಲ್ಯವಾದ ಸತ್ಯವೊಂದು ಗೋಚರಿಸದಿರದು. ಈ ವಿಸ್ತಾರವಾದ ಪ್ರಪಂಚದಲ್ಲಿ ಅನೇಕ ಘಟಕಗಳಿವೆ. ವ್ಯಕ್ತಿ, ಕುಲ, ಸಮಾಜ, ರಾಷ್ಟ್ರ ಮತ್ತು ಮಾನವ ಕುಲ-ಕೋಟಿ ಇವೆಲ್ಲವೂ ಒಂದಕ್ಕೊಂದು ಅವಿನಾಭಾವದಿಂದ ಬಂಧಿಸಲ್ಪಟ್ಟಿವೆ. ಆ ಬಂಧನದ ಕಟ್ಟು ಬಿಚ್ಚಿದರೆ ಅಲ್ಲೋಲ-ಕಲ್ಲೋಲ.

ವ್ಯಕ್ತಿಯು ತನ್ನ ಮೂಲಭೂತ ಆದರ್ಶಗಳೆಂಬ ಅಕ್ಷದ ಸುತ್ತ ತಿರುಗುವುದೋ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ತನ್ನ ಸುತ್ತಲೂ ಬಳಸಿಕೊಂಡಿರುವ ಸಮಾಜದ ಹಿತಾಸಕ್ತಿಗಳ ಕಕ್ಷೆಯಲ್ಲಿ ತಾನು ತಿರುಗಬೇಕೆಂಬುದು. ಸತ್ಯಕ್ಕಿಂತ ಕಲ್ಯಾಣವು ಶ್ರೇಷ್ಠವಾದ ಕಾರಣ, ಸತ್ಯವು ಅಪ್ರಾಯೋಗಿಕವೋ, ಅವಾಸ್ತವಿಕವೋ ಇದ್ದಾಗ, ಸಮಾಜದ ಹಿತಾಸಕ್ತಿಯ ದೃಷ್ಟಿಯಿಂದ ಅದನ್ನು ಬದಿಗೊತ್ತ ಬೇಕಾಗುತ್ತದೆ. ಅದೇ ರೀತಿ ಸಮಾಜವು ತನ್ನ ಹಿತಾಸಕ್ತಿಗಾಗಿ ತಾನು ಕಾರ್ಯಗೈಯುತ್ತಲೇ ತನ್ನ ಸುತ್ತಲಿನ ರಾಷ್ಟ್ರದ ಮಂಡಲದಲ್ಲಿ ಸ್ಪರ್ಧೆಯಾಗಿ ತಿರುಗಬೇಕು. ಸಮಾಜಕ್ಕಿಂತಲೂ ರಾಷ್ಟ್ರವು ದೊಡ್ಡದು. ಹಿಂದೂ, ಮುಸ್ಲಿಂ, ಕ್ರೈಸ್ತ, ಲಿಂಗಾಯತ, ಸಿಖ್ ಇತ್ಯಾದಿ ಸಮಾಜಗಳು ತಮ್ಮ ಧರ್ಮಗಳನ್ನು ಸ್ತಂಭವಾಗಿರಿಸಿಕೊಡರೂ, ಅವು ರಾಷ್ಟ್ರಕಲ್ಯಾಣದ ವರ್ತುಲದಿಂದ ಹೊರಗುಳಿಯಬಾರದು. ಅದೇ ರೀತಿ ಪ್ರತಿಯೊಂದು ರಾಷ್ಟ್ರವು ತಾನು ಅಖಂಡ ಮಾನವ ಕುಲಕೋಟಿಯ ಒಂದಂಶ: ಮನುಕುಲ-ಮಾನವೀಯತೆ ಮಹತ್ವಪೂರ್ಣವೆಂದು ಅರಿದು ಬಾಳಬೇಕು.

ಈ ಮೂಲ ಸೂತ್ರವನ್ನು ಇರಿಸಿಕೊಂಡು ಲಿಂಗಾಯತ ಸಮಾಜದತ್ತ ಬರೋಣ. ಒಮ್ಮೊಮ್ಮೆ ನಿರೀಕ್ಷಿಸಿದಾಗ ಈ ಸಮಾಜವು ತನ್ನ ಅಕ್ಷದ ಸುತ್ತಲೂ ತಿರುಗದೆ, ತನ್ನ ಸುತ್ತಲಿನ ಪರಿಸರದ ಪರಿಜ್ಞಾನವಿಲ್ಲದೆ ತಿರುಗುತ್ತಿರುವ ಸಮುದಾಯವಾದ ಕಾರಣ ಇಲ್ಲಿ ಗೊಂದಲದ ಅನೈಕ್ಯತೆಯ ಪರಿಸ್ಥಿತಿಯನ್ನು ಕಾಣುತ್ತೇವೆ. ಹಾಗಾದರೆ ಯಾವುದನ್ನು ತನ್ನ ಅಕ್ಷವನ್ನಾಗಿ ಇರಿಸಿಕೊಳ್ಳಬೇಕು. ಕ್ರೈಸ್ತ ಧರ್ಮವು ಏಸೂಕ್ರಿಸ್ತನೆಂಬ ಅಕ್ಷದ ಸುತ್ತ, ಬೈಬಲ್‌ದ ಕಕ್ಷೆಯಲ್ಲಿ ತಿರುಗಿವರೆ, ಇಸ್ಲಾಂ ಸಮಾಜವು ಮೊಹಮ್ಮದ್ ಪೈಗಂಬರನನ್ನು ತನ್ನ ಅಕ್ಷವನ್ನಾಗಿರಿಸಿಕೊಂಡು ಕುರಾನ್ ಶಾಸ್ತ್ರದ ಕಕ್ಷೆಯಲ್ಲಿ ತಿರುಗುವುದು. ಅದೇ ರೀತಿ ಲಿಂಗಾಯತ ಸಮಾಜವು ಪ್ರಗತಿಪರ ವಿಚಾರವಾದಿ, ಮಂತ್ರ ಪುರುಷ, ವಿಶ್ವಗುರು ಬಸವಣ್ಣನವರ ಅಕ್ಷದ ಮೇಲೆ ನಿಂತು, ವಚನ ಸಾಹಿತ್ಯ ವರ್ತುಲದಲ್ಲಿ ಸುತ್ತಿದರೆ ಮಾತ್ರ ಇಲ್ಲಿ ವ್ಯವಸ್ಥೆ ಬರಲು ಸಾಧ್ಯ;

ಸಮಾಜವು ಒಕ್ಕೂಡುವ ಸಂಭವ. ಇಲ್ಲವಾದರೆ ಈಗಿರುವ ಜಾತಿ ವಿಂಗಡಣೆ, ಗುಂಪುಗಾರಿಕೆ, ವ್ಯಕ್ತಿ ಪೂಜಕ ಪಂಥ ಪೋಷಣೆ ಮುಂತಾದ ಆಚರಣೆಗಳು ಈ ಸಮಾಜಕ್ಕೆ ಮಾರಕಾಸ್ತ್ರಗಳಾಗದಿರವು.

ಓಬಿರಾಯನ ಕಾಲದ ರೂಢಿಗಳನ್ನು ಯಾಂತ್ರಿಕವಾಗಿ ಆಚರಿಸುತ್ತ, ಪ್ರಗತಿಪರ ವಿಚಾರವನ್ನು, ವಿಚಾರಿಗಳನ್ನು ಸಮಾಜ ಕಂಟಕರೆಂಬಂತೆ ನಿಂದಿಸುತ್ತ, ಸಮಸ್ಯೆಗಳ ಅರಿವಿಲ್ಲದೆ, ದೇಹವನ್ನು ಹೊರಗಿರಿಸಿ ಮುಖವನ್ನು ಪೊದೆಯಲ್ಲಿ ಮುಚ್ಚಿಕೊಂಡು ಶತ್ರುವಿನಿಂದ ಪಾರಾದೆನೆಂದು ಸಮಾಧಾನ ತಾಳುವ ಉಷ್ಟ್ರ ಪಕ್ಷಿಯಂತಾದರೆ ಪ್ರಯೋಜನವಿಲ್ಲ. ಬದಲಾಗುತ್ತಿರುವ ಪರಿಸರ–ಕಾಲಕ್ಕೆ ಹೊಂದಿಕೊಳ್ಳುವ ಧೋರಣೆ ತಾಳಬೇಕು. "ಹಾವಿನ ಡೊಂಕು ಹುತ್ತಕ್ಕೆ ಸಸಿನ" ಮೈಯನ್ನು ಹುತ್ತದ ರಚನೆಗೆ ತಕ್ಕಂತೆ ಬಾಗಿಸಿಕೊಳ್ಳುತ್ತ, ಮೈಮುರಿದುಕೊಳ್ಳದೆಯೇ, ಹುತ್ತದಲ್ಲಿ ಸಂರಕ್ಷಣೆ ಪಡೆಯುವ ಸರ್ಪದಂತೆ, ನೂತನ ವಿಚಾರಗಳಿಗೆ ಹೊಂದಿಕೊಳ್ಳುವ ವಿಧಾನವನ್ನು ಕಲಿಯಬೇಕು. ಜಾತಿ, ಮರಿಜಾತಿಗಳಾಗಿ ಸಮಾಜವು ಒಡೆಯದೆ, ತನ್ನ ಅಕ್ಷವಾದ ಬಸವಣ್ಣನವರಿಂದ ದೂರ ಸರಿಯದೆ ತತ್ತ್ವಯುಕ್ತವಾಗಿ ಬಾಳಬೇಕು. ಲಿಂಗಾಯತ ಸಮಾಜವು ತನ್ನ ಸಂರಕ್ಷಣೆ ಮಾಡಿಕೊಳ್ಳುತ್ತ, ಹಿತರಕ್ಷಣೆ ಬಯಸುತ್ತಲೇ ಸುತ್ತಲಿನ ಹಿಂದೂ ಸಮಾಜದ, ಭಾರತದ ಒಂದಂಗ ತಾನು ಎಂಬುದನ್ನು ಮರೆಯಲಾಗದು.

ಬಸವಣ್ಣನವರು ಇಂದು ಎಲ್ಲರಿಗೂ ಬೇಕಾದ ವ್ಯಕ್ತಿ. (ಜಾತಿವಾದ ಪೋಷಣೆ, ಪಟ್ಟಭದ್ರ ಹಿತಾಸಕ್ತಿ, ಸ್ವಾರ್ಥಸಾಧನೆ, ಅಪಾತ್ರಗೌರವಕ್ಕಾಗಿ ಹಾತೊರೆಯುವವರಿಗಷ್ಟೇ ಬಸವಣ್ಣನವರು ನುಂಗಲಾರದ ತುತ್ತು, ಮತ್ತು ಸಿಂಹಸ್ವಪ್ನ ಕುತ್ತು) ಸಮಾಜದಲ್ಲಿ ಒಳ್ಳೆಯ ಬದಲಾವಣೆ, ಉತ್ತಮ ಮೌಲ್ಯಗಳ ಪ್ರತಿಷ್ಠಾಪನೆಯಾಗಬೇಕಾದರೆ ಅವರು ಬೇಕು ಎಂಬುದು ಶ್ರೀ ಸಾಮಾನ್ಯರ, ಶ್ರಮಜೀವಿಗಳ ಮತ್ತು ಎಲ್ಲ ಪ್ರಗತಿಪರ ವಿಚಾರಿಗಳ ಆಕಾಂಕ್ಷೆ. ಅಂದಾಗ ಲಿಂಗಾಯತ ಸಮಾಜದಲ್ಲಿರುವ ವಿವಿಧ ಜಾತಿಯ ಗುಂಪುಗಳು ತಾವೇ ತಾವು, ತಮಗೆ ತಿಳಿದಂತೆ ನಡೆಯದೇ ತಮ್ಮೆಲ್ಲರ ಕಲ್ಯಾಣವು ಬಸವಣ್ಣನವರ ಪಥದಿಂದ ಸಾಧ್ಯವಿದೆ ಎಂದು ತಮ್ಮ ಶಕ್ತಿ–ಭಕ್ತಿಗಳನ್ನು ಅವರಸುತ್ತ ಕೇಂದ್ರೀಕರಿಸಬೇಕು.

ನೂರಾರು ಧರ್ಮಶಾಸ್ತ್ರಗಳನ್ನು, ವಿಚಾರಧಾರೆಗಳನ್ನು ತಲೆಯಲ್ಲಿ ತುಂಬಿಕೊಂಡು ಶಾಸ್ತ್ರಾಧಾರವಿಡಿದೇ ತಮ್ಮ ಅಸಂಬದ್ಧ ವಿಚಾರಗಳನ್ನು ಸಮರ್ಥಿಸಿಕೊಳ್ಳುತ್ತ ಸಾಗದೆ, ವಚನ ಸಾಹಿತ್ಯವನ್ನು ಮಾರ್ಗದರ್ಶಕ ದೀಪ್ತಿಯನ್ನಾಗಿ ಇರಿಸಿಕೊಳ್ಳಬೇಕು. ಧರ್ಮಾಂಧತೆಯನ್ನು ಬೆಳೆಸಿ ಜಾತೀಯತೆಯನ್ನು ತೊಡೆಯುವ, ದೈವೀಶ್ರದ್ಧೆಯನ್ನು ವರ್ಧಿಸಿ ಮೂಢ ನಂಬಿಕೆಗಳನ್ನು ಮರ್ದಿಸುವ, ವೈಚಾರಿಕ ಪಥದಗುಂಟ ಶಿವನಿಲ್ದಾಣಕ್ಕೆ ಕರೆದೊಯ್ಯುವ ಕ್ರಾಂತಿಕಾರಕ ಧರ್ಮ ಸಂಹಿತೆ ವಚನ ಸಾಹಿತ್ಯ. ಇಂಥ ಆಧಾರ ಶಾಸ್ತ್ರವನ್ನು ಬಿಟ್ಟು, ಮಾನವನಿಗೆ ಕಂಟಕಕಾರಿಗಳಾದ ಶಾಸ್ತ್ರಗಳನ್ನು ಆಧರಿಸಬಾರದು. ಅದನ್ನು ಹೀಗೆ ಹೇಳುತ್ತಿದ್ದಾರೆ ಪ್ರಭುದೇವರು: "ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ, ಸಕಲ ವೇದ ಶಾಸ್ತ್ರಗಳೆಂಬ ನೇಣಕಟ್ಟಿ ಭ್ರಾಂತಿಯೆಂಬ ಜೋಗುಳವ ಹಾಡುತ್ತಿದ್ದಾಳೆ ನೋಡಾ ಮಾಯೆಯೆಂಬ ತಾಯಿ. ನೇಣು ಹರಿದು, ತೊಟ್ಟಿಲು ಮುರಿದು ಜೋಗುಳ ನಿಂದಲ್ಲದೇ ಗುಹೇಶ್ವರನೆಂಬ ಲಿಂಗವ ಕಾಣಬಾರದು." ಮಾನವನ ಬುದ್ಧಿಯನ್ನು ಅಜ್ಞಾನದ ತೊಟ್ಟಿಲಲ್ಲಿ ಮಲಗಿಸಿ, ಮಾಯೆಯೆಂಬ ತಾಯಿ ಜನತೆಯ ಅಜ್ಞಾನದ ತೊಟ್ಟಿಲಿಗೆ ಶಾಸ್ತ್ರಗಳೆಂಬ (Scriptures) ಹಗ್ಗಗಳನ್ನು ಬಿಗಿದು, ಭ್ರಾಂತಿಯ ಜೋಗುಳ ಹಾಡುತ್ತಿದ್ದಾಳೆ. ಅಂದರೆ, ಸಾಮಾನ್ಯ ಮಾನವನ ಸಾಮಾನ್ಯ ಪ್ರಜ್ಞೆಗೂ (Common Sense) ಜಾತಿ ಭೇದ, ಮೂಢ ನಂಬಿಕೆ, ಕಾಕುಪೋಕು ದೇವತೆಗಳ ಉಪಾಸನೆ ಅಸಹ್ಯವಾಗಿ, ಅವಿವೇಕ ರಮಣೀಯವಾಗಿ ಕಾಣುತ್ತವೆ. ಆದರೆ ಅಂಥವನ್ನು ಸಮರ್ಥಿಸಿಕೊಳ್ಳಲೋಸುಗ ಶಾಸ್ತ್ರಗಳು ಹೆಣಗಾಡುತ್ತವೆ, ಹೋರಾಡುತ್ತವೆ. ಅದಕ್ಕಾಗಿ ಸುಳ್ಳನ್ನೇ ಸತ್ಯವೆಂಬ, ಅನ್ಯಾಯವನ್ನೇ ಸಮಾಜ ಹಿತವೆಂಬ ಭ್ರಾಂತಿ ಜೋಗುಳವನ್ನು ಹಾಡಿ, ಮನುಜ ಮತಿ(Human intellect) ಯನ್ನು ಮಲಗಿಸುತ್ತವೆ.

"ಹಗ್ಗ ಹರಿಯಬೇಕು, ತೊಟ್ಟಿಲು ಮುರಿಯಬೇಕು, ಜೋಗುಳ ನಿಲ್ಲಬೇಕು." ಅಂದರೆ, ಅನುಭವ ಸತ್ಯವಾದ ವಿಚಾರಗಳಿಗೆ ಶಾಸ್ತ್ರವು ಅನುಮೋದಿಸದಿದ್ದಾಗ ಅದರ ದಾಸ್ಯದಿಂದ ಹೊರಬರಬೇಕು. ಅಜ್ಞಾನದ ತೊಟ್ಟಿಲನ್ನು ಮುರಿದು ಮತಿಯ ಶಿಶುವನ್ನು ಸ್ವತಂತ್ರ ವಿಚಾರದ ಅಂಗಳದಲ್ಲಿ ಆಡಲು ಬಿಡಬೇಕು. ಅವಾಸ್ತವತೆಯನ್ನು ಶಾಸ್ತ್ರಾಧಾರದಿಂದ ಸಮರ್ಥಿಸುವ ಭ್ರಾಂತಿ ಜೋಗುಳಕ್ಕೆ ಪೂರ್ಣವಿರಾಮ ನೀಡಬೇಕು. ಆಗ ಮಾತ್ರವೇ ಸತ್ಯದರ್ಶನ ಸಾಧ್ಯ !

"ಮುಳ್ಳನ್ನು ತೆಗೆಯಲು ಮುಳ್ಳು ಬೇಕೇ ಬೇಕು;" ಅವಾಸ್ತವವಾದದ ಮುಳ್ಳನ್ನು ತೆಗೆದು ಜೀವನ ಸಿದ್ಧಾಂತವನ್ನು ಅಳವಡಿಸಬೇಕಾದರೆ ಇನ್ನೊಂದು ಕ್ರಾಂತೀಕಾರೀ ಸಾಹಿತ್ಯದ ಸಹಾಯ ಬೇಕು. ಬಂಧನದಿಂದ ಬಿಡಿಸಲು ಆಯುಧ ಬೇಕು. ಅಂಥ ದಿವ್ಯ ಸಾಧನ ವಚನ ಸಾಹಿತ್ಯ. ಹಾಗಾದರೆ ವಚನ ಸಾಹಿತ್ಯಕ್ಕೆ ಬಹಳಷ್ಟು ಮನವನ್ನು ಶರಣಾಗಿಸಿದರೆ ಅದೂ ದಾಸ್ಯವಲ್ಲವೆ ? ಧಾಸ್ಯ ಭಾವನೆಯ ಪ್ರೇರೇಪಣೆಗೆ ಅವಕಾಶವಿಲ್ಲಿಲ್ಲ. ಸೂರ್ಯನು ನಭೋಮಂಡಲದಲ್ಲಿ ಏರಿಬರುತ್ತಿದ್ದಂತೆಯೇ ಮಂಜಿನ ದಂಡು ಕರಗಲೇ ಬೇಕು. ಹಾಗೆ ವಚನ ಸಾಹಿತ್ಯ ಸೂರ್ಯನ ಪ್ರಖರ ಕಿರಣಗಳು ಮನದಲ್ಲಿ–ಮತಿಯಲ್ಲಿ ರಾರಾಜಿಸುತ್ತಿದ್ದಂತೆಯೇ ಮತಿದಾಸ್ಯಕ್ಕೆ ಮೊನೆಯಷ್ಟೂ ತಾವಿಲ್ಲ.

ಶಾಸ್ತ್ರಪ್ರಮಾಣಕ್ಕಿಂತ ಅನುಭವ–ಅನುಭಾವ ಪ್ರಮಾಣಕ್ಕೆ ಚಕ್ರವರ್ತಿ ಪಟ್ಟ ಗಟ್ಟಿದ ವಚನ ಶಾಸ್ತ್ರ ತನ್ನ ಸಂವಿಧಾನದಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಸಂಪೂರ್ಣ ಅವಕಾಶ ನೀಡಿದೆ. ಸ್ವಾನುಭವಕ್ಕೆ ವಿರುದ್ಧವಾದುದನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯಲು ಅಧಿಕಾರ ನೀಡುವುದು. ಅಂತೆಯೇ ಬಸವಣ್ಣನವರು ಹೇಳುವರು :

ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೇ ಅಯ್ಯಾ ?
ಮಾಲೆಗಾರನ ಕೇಳಿ ನನೆಯರಳುವುದೆ ?
ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯಾ ?


ರುಚಿಯನ್ನು ಮನ–ನಾಲಿಗೆಗಳು ಅನುಭವಿಸಿದಾಗ, "ಶಾಸ್ತ್ರಾಧಾರದ ಮೇಲೆ ನಿನಗಾಗಿರುವ ರಸಾನಂದವನ್ನು ತೋರಿಕೊಡು," ಎಂದು ಹಠ ಹಿಡಿಯುವುದು ಅಸಂಬದ್ಧ. ಮಾಲೆಗಾರನಿಗಾಗಿ ನನೆಯರಳದು, ನನೆಯರಳಿದಾಗ ಮಾಲೆಗಾರ ಅದನ್ನು ಮಾಲೆಕಟ್ಟಬೇಕು. ಹಾಗೆ ಶಾಸ್ತ್ರದ ಆಧಾರದ ಮೇಲೆ ಅನುಭವ ರೂಪಿಸಬಾರದು. ಅನುಭವ ಸಂಸಿದ್ಧವಾದುದನ್ನು ಶಾಸ್ತ್ರಕ್ಕೆ ಅಳವಡಿಸಬೇಕು. ಅನುಭವ ಪ್ರಮಾಣವೇ ಪರಮ ಶ್ರೇಷ್ಠ.

ಹೀಗೆ ಇಂದಿನ ಮನ್ವಂತರಕ್ಕೆ ಅನ್ವಯವಾಗುವ ವಿಚಾರಗಳನ್ನು ಮಂಡಿಸುವ, ಅನುಮೋದಿಸುವ ವಚನ ಸಾಹಿತ್ಯ ಸೌರಕಕ್ಷೆಯಲ್ಲಿ, ವಿಶ್ವಗುರು ಬಸವಣ್ಣನನ್ನೇ ಅಕ್ಷವಾಗಿರಿಸಿಕೊಂಡು ನಮ್ಮ ಸಮಾಜವು ಸುತ್ತಿದರೆ ಬಲಗೊಂಡು ಬೆಳೆದು, ಸುವ್ಯವಸ್ಥಿತವಾಗಿ ಬದುಕುವುದು.

ವಿನಯವಿಲ್ಲದ ವೀರತನ, ಕ್ರೂರತನ ;
ವೀರತನವಿಲ್ಲದ ವಿನಯ, ಹೇಡಿತನ.

— ಸ್ವಾಮಿಲಿಂಗಾನಂದ.

ಕಲ್ಯಾಣ ಕಿರಣ ಮಾಸಿಕಕ್ಕೆ
ಚಂದಾದಾರರಾಗಿರಿ !



— ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ದೇವೋಪಾಸನೆ

ಧ್ಯಾನಕ್ಕೆ ನಿಮ್ಮ ಶ್ರೀ ಮೂರ್ತಿಯೆ ಮುಖ್ಯವಯ್ಯಾ,
ಪೂಜೆಗೆ ನಿಮ್ಮ ಶ್ರೀ ಪಾದವೆ ಮುಖ್ಯವಯ್ಯಾ,
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ,
ಮುಕ್ತಿಗೆ ನಿಮ್ಮ ಘನಕೃಪೆಯೆ ಮುಖ್ಯವಯ್ಯಾ,
ನಿಮ್ಮಿಂದಧಿಕರನಾರನೂ ಕಾಣೆನಯ್ಯಾ.
ಕೂಡಲ ಸಂಗಮ ದೇವಾ, ನೀವು ಜ್ಞಾನಗುರುವಾದ ಕಾರಣ. (1188)

ಸೃಷ್ಟಿಗೆ ಕಾರಣನಾದ ಪರಮಾತ್ಮನಿಗೆ ಬೇರೊಂದು ಕಾರಣವು ಹೇಗೆ ಇರಲಾರದೋ ಹಾಗೆ ಒಂದು ವಿಶಿಷ್ಟ ಧರ್ಮ ಸಂಸ್ಥಾಪಕನಾದ ಪ್ರವಾದಿಗೆ ಬೇರೊಬ್ಬ ಗುರುವಿರದೆ, ಪರಮಾತ್ಮನೇ ಗುರುವಾಗಿರುತ್ತಾನೆಂಬುದು ಹಲವಾರು ಪ್ರವಾದಿಗಳ ಜೀವನವನ್ನು ಓದಿದಾಗ ನಮಗೆ ತಿಳಿದು ಬರುತ್ತದೆ. ಹೀಗೆ ಸ್ವಯಂಕೃತನಾದ ಮಹಾ ಪ್ರವಾದಿ ಬಸವಣ್ಣನಿಗೆ ದೇವನೇ ಗುರುವಾಗಿದ್ದನೆಂಬುದಕ್ಕೆ ಮೇಲಿನ ಸ್ವಯಂವಿರಚಿತ ವಚನವೇ ಸ್ಪಷ್ಟ ಸಾಕ್ಷಿ.

ಜಗದಗಲ, ಮುಗಿಲಗಲ, ಮಿಗೆಯಗಲ, ತನ್ನಗಲನಾದ ; ಅಪ್ರಮಾಣ, ಅಗೋಚರ, ಅಪ್ರತಿಮನಾದ ; ವಿಶ್ವವ್ಯಾಪಿ, ವಿಶ್ವತೋಮುಖಿ, ವಿಶ್ವತಃಪಾದನಾದ; ಪ್ರಣವಾರೂಢ, ಪ್ರಣವಸ್ವರೂಪ, ಪ್ರಣವ ಪ್ರಕೃತಿ ಸೌಂಜ್ಞನಾದ, ಏನು ಬೇಡಿದಡೂ ಕೊಡುವ ಮಹಾದಾನಿಯಾದ, ನಂಬಿ ಕರೆದಾಗ ಓ ಎನ್ನುವ, ಮಾತಾಪಿತರಹಿತನಾದ,

ಅಯೋನಿ ಸಂಭವನಾದ, ಮಂಗಲಮಯನಾದ ಪರಮಾತ್ಮನನ್ನು ವಿಶ್ವದಾಕಾರದಲ್ಲಿ, ಚುಳುಕಾದ ಗೋಲಾಕಾರದ ಸಾಕಾರದಲ್ಲಿ ಮೈಯಿಂದ ಪೂಜಿಸಲು, ಮಾತಿನಿಂದ ಪ್ರಾರ್ಥಿಸಲು, ಮನದಿಂದ ಧ್ಯಾನಿಸಲು ಹೇಳಿದ ಬಸವಣ್ಣನವರು ಮುಕ್ತಿಗೆ ದೇವರ ಕೃಪೆ (Grace of God)ಯೇ ಮುಖ್ಯವೆಂದು ಒತ್ತಿ ಹೇಳಿದ್ದಾರೆ. ಸೇಶ್ವರವಾದಿ (Theist) ಯಾದ ಬಸವಣ್ಣನವರು ಪೂಜೆ, ಪ್ರಾರ್ಥನೆ, ಧ್ಯಾನ ಎಂಬ ಮೂರೂ ಉಪಾಸನಾ ವಿಧಾನಗಳನ್ನು ಬಳಸಿಕೊಂಡು ಸಾಧಕನು ಸಿದ್ಧನಾಗಿ, ಸರ್ವಾಂಗಲಿಂಗಿಯಾಗಿ, ಪರಶಿವನಲ್ಲಿ ಒಡವೆರೆದು ಒಂದಾಗಬೇಕೆಂದು ಹೇಳುತ್ತಾರೆ.

ಬಸವಣ್ಣನವರು ಉಪಾಸಿಸಲು ಹೇಳಿರುವದು ಪರಾತ್ಪರ ವಸ್ತು ಪರಮಾತ್ಮನನ್ನೇ ವಿನಾ, ದೇವತೆಗಳನ್ನಲ್ಲಾ ! ಇದನ್ನು ಸ್ಪಷ್ಟವಾಗಿ ತಿಳಿಯಬೇಕಾದರೆ ಜಗತ್ತಿನ ಎಲ್ಲ ಧರ್ಮಗಳ ಉಪಾಸ್ಯ ವಸ್ತುಗಳನ್ನು ನಾವು ಅಭ್ಯಸಿಸಬೇಕಾಗುತ್ತದೆ. ಸ್ಥೂಲವಾಗಿ ಉಪಾಸ್ಯ ವಸ್ತುಗಳನ್ನು ಐದು ವಿಧವಾಗಿ ವಿಂಗಡಿಸಬಹುದು : 1) ಪೌರಾಣಿಕ ದೇವತಾ ಪೂಜೆ. ಉದಾ : ಗಣಪತಿ, ಷಣ್ಮುಖ, ಶನಿ, ವೆಂಕಟೇಶ್ವರ ಇತ್ಯಾದಿ; (2) ಭೂತಪೂಜೆ. ಉದಾ ; ಬೆಂಕಿ. ನೀರು, ಕಲ್ಲು, ಮರ ಇತ್ಯಾದಿ ; (3) ಪ್ರಾಣಿ ಪೂಜೆ. ಉದಾ : ಹಸುಪೂಜೆ, ನಾಗಪೂಜೆ, ಮೊಸಳೆ–ಹುಲಿ ಪೂಜೆ. ಆನೆ–ಕುದುರೆ ಪೂಜೆ ಇತ್ಯಾದಿ ; (4) ವಿಭೂತಿ ಪೂಜೆ. ಉದಾ : ಬುದ್ಧ–ಮಹಾವೀರರ ಪೂಜೆ, ಜೀಸಸ್–ನಾನಕರ ಪೂಜೆ, ಬಸವ–ಅರವಿಂದರ ಪೂಜೆ. ರಾಮಕೃಷ್ಣ–ವಿವೇಕಾನಂದರ ಪೂಜೆ ಇತ್ಯಾದಿ ; (5) ದೇವಪೂಜೆ, ಉದಾ : ಇಷ್ಟಲಿಂಗ ಪೂಜೆ. ಇದು ಬಸವ ಧರ್ಮದ ವೈಶಿಷ್ಟ್ಯ. ದೇವನನ್ನು ಮಹಮ್ಮದೀಯರು ಪ್ರಾರ್ಥಿಸುತ್ತಾರೆ ; ಪೂಜಿಸುತ್ತಿಲ್ಲ ; ವೈದಿಕರು ದೇವನನ್ನು ಪ್ರಾರ್ಥಿಸುತ್ತಾರೆ, ಧ್ಯಾನಿಸುತ್ತಾರೆ, ಪೂಜಿಸುವುದಿಲ್ಲ (ದೇವತೆಗಳನ್ನು, ಭೂತಗಳನ್ನು, ವಿಭೂತಿಗಳನ್ನು ಮಾತ್ರ ಪೂಜಿಸುತ್ತಾರೆ). ಜೈನರು–ಬೌದ್ಧರು ವಿಭೂತಿಗಳನ್ನು ಪೂಜಿಸಿ, ಪ್ರಾರ್ಥಿಸಿ, ಧ್ಯಾನಿಸುತ್ತಾರೆ. ಆದರೆ ಬಸವ ಧರ್ಮವು ಮಾತ್ರ ದೇವನನ್ನು ಮೈಯಿಂದ ಅಷ್ಟವಿಧದಿಂದ ಅರ್ಚಿಸಲು, ಮಾತಿನಿಂದ ಭಾವ ತುಂಬಿ ಪ್ರಾರ್ಥಿಸಲು, ಮತ್ತು ಅದೇ ದೇವನನ್ನು ಮನದಿಂದ ಧ್ಯಾನಿಸಲು ಹೇಳುತ್ತದೆ. ಹೀಗೆ ಜಗತ್ತಿನ ಮಾನವ ಕುಲಕೋಟಿಗೆ ಬಸವಣ್ಣನವರು ಕೊಟ್ಟ ಅಪೂರ್ವ ಕೊಡುಗೆ : ಸರ್ವಾಂಗಪೂರ್ಣ ದೇವೋಪಾಸನೆ.

★★

ಓದುಗರಿಗೆ ಸೂಚನೆ

ಮಾನ್ಯರೇ, ಅಕ್ಟೋಬರ್ ಕಲ್ಯಾಣ ಕಿರಣ ಸಂಚಿಕೆ ತೀರಿಹೋಗಿರುವುದರಿಂದ ಯಾರೂ ಆ ಪ್ರತಿಗಳಿಗಾಗಿ ಬೇಡಿಕೆ ಸಲ್ಲಿಸಬೇಡಿ. ಚಂದಾದಾರರಿಗೆ ನವೆಂಬರ್‌ದಿಂದ ಕಳಿಸಿಕೊಡುತ್ತೇವೆ.

—ವ್ಯವಸ್ಥಾಪಕ, **ಕಲ್ಯಾಣ ಕಿರಣ.**

ಸಮಸ್ಯೆ! ಸಮಾಧಾನ!

— ಅಲ್ಲಮಪ್ರಭು, ಹಾಸನ.

* ಹರಿಜನರ ಉದ್ಧಾರ ಹೇಗೆ ಸಾಧ್ಯ ?

★ ಹರಿಜನರು ಆರ್ಥಿಕವಾಗಿ ಅಭಿವೃದ್ಧಿಹೊಂದಬೇಕಾದರೆ ಮಾರ್ಕ್ಸಾಯತರಾಗಬೇಕು; ಸಾಮಾಜಿಕವಾಗಿ ಸುಧಾರಿಸಬೇಕಾದರೆ ಬುದ್ಧಾಯತರಾಗಬೇಕು; ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಉದ್ಧಾರವಾಗಬೇಕಾದರೆ ಬಸವಾಯತರಾಗಬೇಕು.

— ಮುರಿಗೆಪ್ಪಜ್ಜ, ಭದ್ರಾವತಿ.

* ಇಂದಿನ ತರುಣರೇಕೆ ನಾಸ್ತಿಕತೆಯತ್ತ ಹೆಚ್ಚು ವಾಲುತ್ತಿದ್ದಾರೆ ?

★ ಧಾರ್ಮಿಕ ಮೌಲ್ಯಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ, ಆಧುನಿಕ ಕಾಲಕ್ಕೆ ಅನ್ವಯವಾಗುವಂತೆ ಧಾರ್ಮಿಕ ಜನರು ಬೋಧಿಸದೆ ಸಾಂಪ್ರದಾಯಿಕ ಜಾಡಿನಲ್ಲೇ ಸಾಗಿದರೆ ವಿಚಾರಶೀಲ ಜನಾಂಗವು ಹೇಗೆ ತಾನೆ ಆಕರ್ಷಿತವಾದೀತು ?

— ಹುಚ್ಚಪ್ಪ, ದಾವಣಗೆರೆ.

* ಯಾವ ತಾತ್ತ್ವಿಕ ಹಿನ್ನೆಲೆಯೂ ಇಲ್ಲದ ಕೆಲವು ಧಾರ್ಮಿಕ ಪಂಥಗಳು, ವಿಚಾರಧಾರೆಗಳು ಕಳ್ಳಿಯಂತೆ ಹಬ್ಬಿ ಬೆಳೆಯುತ್ತಿವೆ. ಆದರೆ ಘನವಾದ ತಾತ್ತ್ವಿಕ ಹಿನ್ನೆಲೆಯಿದ್ದೂ ಸಹ ಲಿಂಗಾಯತ ಧರ್ಮವು ತನ್ನ ಅನುಯಾಯಿಗಳ ಮೇಲೆ ಏಕೆ ಪ್ರಭಾವ ಬೀರುತ್ತಿಲ್ಲ ?

★ ಧರ್ಮವು ಪ್ರಭಾವ ಬೀರಲು ಸಮರ್ಥವಾಗುವುದು ಧಾರ್ಮಿಕ ಕೇಂದ್ರಗಳು ಸರಿಯಾಗಿ ಪ್ರಚಾರ ಮಾಡಿದಾಗ. ಲಿಂಗಾಯತ ಧರ್ಮಕೇಂದ್ರಗಳಲ್ಲಿ ಬಹುಪಾಲಿನವು ವ್ಯಾಪಾರ ಕೇಂದ್ರಗಳಾಗಿರುವಾಗ, ಮುಮುಕ್ಷುಗಳ ಆಧ್ಯಾತ್ಮಿಕ ಹಸಿವೆಯನ್ನು ತಣಿಸುವ ಕರ್ತವ್ಯ ಮಾಡದಾಗ, ತತ್ತ್ವವು ಎಷ್ಟು ಘನವಾಗಿದ್ದರೂ

ಪ್ರಭಾವ ಬೀರಲಾರದು. ಜೋಗ್‌ನಿಂದ ವಿದ್ಯುತ್ ಪ್ರವಹಿಸುವ ಬೃಹತ ಲೈನ್‌ಗಳು ಮನೆಯ ಪಕ್ಕದಲ್ಲಿ ಇದ್ದಮಾತ್ರಕ್ಕೇ ಮನೆಯೊಳಗಿನ ಕತ್ತಲ್ ಹರಿಯದು.

— ಸುಶೀಲಾ, ಮಲ್ಲೇಶ್ವರಂ, ಬೆಂಗಳೂರು.

* ಧರ್ಮ (Religion) ಮತ್ತು ಪಂಥ (Cult) ಗಳಲ್ಲಿರುವ ವ್ಯತ್ಯಾಸವೇನು ?

★ ಪಂಥವು ಒಂದು ವ್ಯಕ್ತಿಯನ್ನೋ, ಒಂದು ತತ್ತ್ವವನ್ನೋ ಆಧರಿಸಿ ಬರುವುದು; ಅದೊಂದು ವಿಚಾರಧಾರೆ (A way of thinking) ಮಾತ್ರ. ಅದಕ್ಕೆ ಸಮಾಜಶಾಸ್ತ್ರವಿರದು. ಧರ್ಮವು ಬದುಕುವ ಬಗೆ (A way of living). ಅದಕ್ಕೆ ಸಿದ್ಧಾಂತ, ಸಾಧನೆ, ದರ್ಶನ, ಸಂಸ್ಕಾರ, ಸಮಾಜಶಾಸ್ತ್ರ, ನೀತಿಶಾಸ್ತ್ರ, ಅರ್ಥಶಾಸ್ತ್ರ, ಪರಂಪರೆ, ಸಂಸ್ಕೃತಿ ಮತ್ತು ಸಾಹಿತ್ಯಗಳೆಂಬ ದಶವಿಧ ಲಕ್ಷಣ ಗಳಿದ್ದು, ಸಮಾಜವನ್ನು ಸರ್ವಾಂಗೀಣವಾಗಿ ಉತ್ಥಾನಿಸಬಲ್ಲುದು.

— ಎಸ್. ನಿರ್ಮಲಾ, ಬೆಂಗಳೂರು.

* ಲಿಂಗಾಯತ ಸಮಾಜವು ಏಕೆ ಪ್ರಗತಿಯಾಗುತ್ತಿಲ್ಲ ?

★ ಸಮಾಜದ ಹಿತಚಿಂತಕರು, ತ್ಯಾಗಿಗಳು, ಧರ್ಮಕ್ಕಾಗಿ ಬಾಳನ್ನು ಮುಡುಪಿಡು ವವರನ್ನು ನಿಂದಿಸುತ್ತಿರಿ; ವ್ಯಾಪಾರಿ ಮನೋಭಾವದ, ಜಾತಿಭಾವವನ್ನು ಪ್ರಚೋದಿಸುವ, ಗುಂಪುಗಾರಿಕೆ ಬೆಳೆಸುವಂತಹ ಧರ್ಮಾಧಿಕಾರಿಗಳನ್ನು ಹೊಗಳುತ್ತಾ ಹೋಗಿರಿ; ಸಮಾಜವು ಇನ್ನೂ ಬಲಗೊಂಡು ಬೆಳೆಯುತ್ತದೆ !

— ತಿಪ್ಪೇಸ್ವಾಮಿ, ಚಳ್ಳಕೆರೆ.

* ನಾನು ಮಾತೆಯವರ ಕಲ್ಯಾಣಕ್ರಾಂತಿ ಪುಸ್ತಕ ಓದಿ ಪ್ರಭಾವಿತನಾದೆ. ಏನಾದರೂ ಸಮಾಜ ಸೇವೆ ಮಾಡಬೇಕೆಂದು ದಲಿತ ಸಮಾಜದವರನ್ನು ಹತ್ತಿರ ಸ್ವಾಗತಿಸಿ, ಅವರಿಗೆ ಪ್ರಾರ್ಥನೆ, ಪ್ರವಚನ ಮಾಡಹೊರಟರೆ ನನ್ನ ಸುತ್ತಲಿನ ಜನ ತುಂಬಾ ಹಿಂಸೆ ಕೊಡುತ್ತಿರುವರು. ನಾನೇನು ಮಾಡಲಿ ?

★ ಫಲವಿರುವ ಮರಕ್ಕೆ ಕಲ್ಲುಹಾಕುವರು, ಬರಡು ಮರಕ್ಕೆ ಹಾಕರು. ಭಕ್ತಿಯುಳ್ಳ ವರನ್ನು ಬೈವರು, ಭಕ್ತಿಯಿಲ್ಲದವರ ಬೈಯರು. ಏನೂ ಮಾಡಬೇಡಿ; ನಿಮ್ಮ ಆದರ್ಶ ಪಥದಲ್ಲಿ ನೇರವಾಗಿ ಸಾಗಿರಿ–ಶರಣರ ಜೀವನವನ್ನು ಆದರ್ಶವಾಗಿರಿಸಿ ಕೊಂಡು.

— ಗುರುಪುತ್ರ ನೇಳಗೆ, ಕುನ್ಮಾರಪಳ್ಳಿ, ಔರಾದ.

* ಒಂದೆರಡು ತಿಂಗಳ ಹಿಂದೆ ಬಂದಾಗ ನಿಮ್ಮ ಸಂಸ್ಥೆಯನ್ನು ಭಾರೀ ಹೊಗಳುತ್ತಿದ್ದ

ವನೊಬ್ಬ ಈಗ ಬೈಯತೊಡಗಿರುವನು. ಏಕೆ ?

★ ನರಿಗೆ ದ್ರಾಕ್ಷಿ ಸಿಗದಿದ್ದಾಗ ಹುಳಿ ಎನ್ನುವುದು ಸ್ವಾಭಾವಿಕ. ಏನೇನೋ ನಂಬಿಸಿ ಸ್ವಾರ್ಥ ಸಾಧಿಸಲು ಬಂದವರಿಗೆ ಅವಕಾಶ ಸಿಗದಿದ್ದಾಗ, ಅವರು ಬೈಯು ವುದರಲ್ಲಿ ಆಶ್ಚರ್ಯವೇನಿದೆ ?

— ಸುಶೀಲಾ ಕೃಷ್ಣಯ್ಯ, ಬೆಂಗಳೂರು.

* ಹಿಂದೂ ಸಮಾಜದ ಶಿಥಿಲತೆಗೆ ಕಾರಣವೇನು ?

★ ಕಾರಣಗಳು ಹಲವಾರಿವೆ. ಅತಿ ಮುಖ್ಯವೆಂದರೆ ೧. ಎಲ್ಲ ಹಿಂದೂಗಳಿಗೂ ಕಡ್ಡಾಯವಾಗಿ ಒಂದು ಬಗೆಯ ಧಾರ್ಮಿಕ ದೀಕ್ಷೆ ಇಲ್ಲದಿರುವುದು ೨. ವಾರಕ್ಕೊಮ್ಮೆಯಾದರೂ ಒಂದು ಜಾಗದಲ್ಲಿ ಸಮಾವೇಶವಾಗಿ ಧಾರ್ಮಿಕ ಪ್ರಾರ್ಥನೆ-ಚಿಂತನೆ ಮಾಡದಿರುವುದು.

— ಪ್ರಕಾಶ ಗಂದಿಗುಡೆ, ಔರಾದ.

* ಲಿಂಗಾಯತ ಸಮಾಜವು ಈ ದುರ್ದೆಸೆಗೆ ಇಳಿಯಲು ಕಾರಣವೇನು ?

★ ಧರ್ಮಗುರು ಬಸವಣ್ಣನವರನ್ನು ಕೇಂದ್ರಶಕ್ತಿಯನ್ನಾಗಿ ಇರಿಸಿಕೊಳ್ಳದಿರುವುದು; ವಚನ ಸಾಹಿತ್ಯ ಪಥದಿಂದ ದೂರಸರಿದು ಮತ್ತೆ ಪ್ರಗತಿ ವಿರೋಧಿ ಸಂಪ್ರದಾಯ ಜಾಡ್ಯದಲ್ಲಿ ಸಿಕ್ಕಿಬಿದ್ದಿರುವುದು.

— ಪಾರ್ವತಿ ಶಿವಣ್ಣ, ಚಿಕ್ಕಮಗಳೂರು.

* ಬಸವಣ್ಣನವರು ಗುರುವೇ ಅಲ್ಲ, ಕೇವಲ ಭಕ್ತರು. ಯಾವ ಪೀಠಕ್ಕೂ ಅಧಿ ಕಾರಿಯಾಗಲಿಲ್ಲ ಎಂದು ಒಬ್ಬ (ಗುರುಗಳು)ರು ನಮ್ಮೂರಲ್ಲಿ ಪುರಾಣ ಹೇಳು ವಾಗ ನುಡಿದರು. ಇದು ನಿಜವೇ ?

★ ನರಿಗೆ ಪಟ್ಟಗಟ್ಟಿದ ಮಾತ್ರಕ್ಕೇ ಮೃಗೇಂದ್ರನಾಗದು. ಮೃಗೇಂದ್ರನಿಗೆ ಯಾರೂ ಪಟ್ಟಗಟ್ಟಬೇಕಿಲ್ಲ. ಬಸವಣ್ಣನವರು ಮಹಾಗುರು, ಜಗದ್ಗುರು. ಚಿನ್ನದ ಪಾಲಕಿಯನ್ನೇರಿ, ವಜ್ರವೈಢೂರ್ಯಗಳ ಕಿರೀಟವಿಟ್ಟು, ಸುವರ್ಣ ಸಿಂಹಾಸನ ಹತ್ತಿ ವೈಭವಿಸಿದ ಗುರುವಲ್ಲ; ಜನತೆಯ ಹೃದಯ ಪಾಲಕಿ ಏರಿ, ಪರಮ ಸದ್ಭಕ್ತಿಯ ಸಿಂಹಾಸನ ಹತ್ತಿ, ಅಪೂರ್ವ ಜ್ಞಾನದ ಕಿರೀಟ ಧರಿಸಿ, ಮಾನವೀಯ ಮೌಲ್ಯಗಳ ಅರಿವು ಮಾಡಿಕೊಡುತ್ತಾ ಜನಸಾಮಾನ್ಯರನ್ನು ದೈವೀಸಾಮ್ರಾಜ್ಯದ ಸಾರ್ವ ಭೌಮರನ್ನಾಗಿ ಮಾಡಲು ಯತ್ನಿಸಿದ ಜಗದ್ಗುರು.

— ಕೃಷ್ಣವೇಣಿ ಸಿದ್ಧಪ್ಪ, ಹಾಸನ.

* ಕಾಯಕದಿಂದ ಕೈಲಾಸ, ಮತ್ತು ಬಸವಣ್ಣನವರು ಹೇಳಿದ ಕಾಯಕವೇ ಕೈಲಾಸ

ಈ ಉಕ್ತಿಗಳಲ್ಲಿರುವ ತಾತ್ತ್ವಿಕ ವ್ಯತ್ಯಾಸವೇನು ?

★ 'ಕಾಯಕದಿಂದ ಕೈಲಾಸ' ಎಂದು ಕಾಯಕ ಮಾಡಿ ನಂತರ ಕೈಲಾಸಕ್ಕೆ ಅನ್ವೇಷಣೆ ಮಾಡುವುದು ಮುಂದಿನ ತಾರೀಖು ಹಾಕಿದ ಚೆಕ್ ಇದ್ದಂತೆ; ಕಾಯಕವನ್ನು ಮಾಡುತ್ತಲೇ ಕೈಲಾಸದ ಲಕ್ಷಣವಾದ ಸಂತೃಪ್ತಿಯನ್ನು ಹೊಂದುವುದು ನಗದು ಹಣ ಪಡೆದಂತೆ.

— ಎಲ್. ಶಿವಾನಂದ, ಧಾರವಾಡ.

* ಕೆಲವರು ಜೀವನದ ಆದಿಯಿಂದ ಅಂತ್ಯದವರೆಗೂ ಅನ್ಯರ ನಿಂದೆಯಲ್ಲೇ ಕಾಲಕಳೆದು ಬದುಕನ್ನು ವ್ಯಯಮಾಡಿಕೊಳ್ಳುವರಲ್ಲಾ. ಏಕೆ ?

★ ಕೋಡಗ ವೇಡಿಸ ಬೇಡವೆಂದಡೆ ಮಾಣದಯ್ಯಾ; ತೋಡುವ ಹೆಗ್ಗಣ ಮಾಳಿಗೆ ಎಂದರೆ ಮಾಣದಯ್ಯಾ. ಗಾಡಿಗ ದೂಷಕನವರಿವರನಾಡುವುದೇ ನೇಮ. ಕೂಡಲ ಸಂಗಮದೇವಾ, ಇದವರ ಕಾಯಕವಯ್ಯ! (ಬಸವಣ್ಣನ ವಚನ 978)

— ಅರುಣಾ, ರಾಜಾಜಿನಗರ, ಬೆಂಗಳೂರು.

* ದೇವರು ಹೆಣ್ಣೋ–ಗಂಡೋ ?

★ ದೇವರು ಅವನೂ ಅಲ್ಲ, ಅವಳೂ ಅಲ್ಲ, ಅದು (That) ಮಾತ್ರ.

— ಇಂದುಶೇಖರ ಓಂಕಾರಸ್ವಾಮಿ, ಬೆಂಗಳೂರು.

* ಒಂದು ಜನಪ್ರಿಯ ವಾರಪತ್ರಿಕೆ ಓದುವಾಗ 'ದೇವರು ಎಲ್ಲಿದ್ದಾನೆ' ಎಂಬ ಪ್ರಶ್ನೆಗೆ, 'ಪಾಪಿಗಳ ತಲೆಯಲ್ಲಿ' ಎಂಬ ಉತ್ತರ ನೋಡಿದೆ. ಇದು ನಿಜವೆ ?

★ ದೇವರ ನಿಜವಾದ ತಿಳುವಳಿಕೆ ತಲೆಯಲ್ಲಿ ಸೇರುತ್ತಿದ್ದಂತೆಯೇ ಯಾವನೂ ಪಾಪಿಯಾಗಿ ಉಳಿಯನು; ಪಾಪಾತ್ಮ ಮಹಾತ್ಮನಾಗತೊಡಗುವುದು ದೈವೀನಂಬುಗೆ ಸೇರತೊಡಗುತ್ತಲೇ ! 'ಪಾಪಿಗಳ ತಲೆಯಲ್ಲಿ ದೇವರು' ಎಂದು ನಂಬಿದರೆ, ದೇವರನ್ನು ನಂಬಿ ಲೋಕಹಿತ ಗೈದ ಏಸು, ಮೊಹಮ್ಮದ್, ಶಂಕರ, ಬಸವ, ವಿವೇಕಾನಂದ, ಗಾಂಧೀಜಿ, ಅರವಿಂದ, ಇಂಥ ಮಹಾನುಭಾವರೆಲ್ಲ ಪಾಪಿಗಳ ಸಾಲಿನಲ್ಲಿ ಸೇರಿ; ಅಂತಃಸಾಕ್ಷಿ ಸತ್ತವರು, ಕುಡುಕರು, ಲಂಚಬಡುಕರು, ನಾಸ್ತಿಕರಾಗಿಬಿಟ್ಟರೆ ಪುಣ್ಯಾತ್ಮರ ಸಾಲಲ್ಲಿ ಸೇರಬೇಕಾದೀತು. ಶ್ರೀಗಂಧದಂತೆ ತಮ್ಮನ್ನು ತಾವು ಸವೆಸಿಕೊಂಡು ಲೋಕಸಂಗ್ರಹಕ್ಕಾಗಿ ಬದುಕಿದ ಬಹುಪಾಲು ಮಹಾತ್ಮರ ಕೇಂದ್ರಶಕ್ತಿ "ದೈವೀಶ್ರದ್ಧೆ"!

ಮಾತು ಜ್ಯೋತಿರ್ಲಿಂಗ

ತಾನು ಅಭ್ಯಾಸಮಾಡದೆ ಅಧ್ಯಾಪಕ ಇತರರಿಗೆ ಕಲಿಸಲಾರ ; ತಾನು ಉರಿಯದ ದೀಪ ಇನ್ನೊಂದು ದೀಪವನ್ನು ಉರಿಸಲಾರದು.

—ರವೀಂದ್ರನಾಥ ಠಾಕೂರ.

ಸದ್ಗುಣ ಎನ್ನುವುದು ಸುಗಂಧದಂತೆ : ಉರಿದಾಗ. ಅರೆದಾಗ ಅದರ ಸುವಾಸನೆ ಹೆಚ್ಚು. **—ಫ್ರಾನ್ಸಿಸ್ ಬೇಕನ್.**

ಶಕ್ತಿ ಸಾಧಿಸದಿದ್ದುದನ್ನು ಶಾಂತಿ ಸಾಧಿಸಬಲ್ಲುದು. **—ಎಡ್ಮಂಡ್ ಬರ್ಕ್.**

ಸಹನೆಯೆಂಬುದು ಕಹಿವೃಕ್ಷ ; ಆದರೆ ಅನುಭವಿಸುವವನಿಗೆ ಕಷ್ಟವಾದರೂ ಅದು ಕೊಡುವುದು ಸಿಹಿಫಲಗಳನ್ನು. **—ಜರ್ಮನ್ ಗಾದೆ.**

ಮೋಸದಿ ಜೀವಿಯ ಘಾಸಿ ಮಾಡಿದ ಫಲ ಕಾಶಿಗೆ ಹೋದರೆ ಬಿಟ್ಟೀತೆ ?
ಶ್ರೀಶನ ಭಕ್ತರ ದೂಷಿಸಿದ ಫಲ ಕಾಸುಕೊಟ್ಟರೆ ಬಿಟ್ಟೀತೆ ?

—ಪುರಂದರದಾಸರು.

(ಸಂಗ್ರಹ : **ಸುಶೀಲಾ ಟೀಚರ್**)

ಉದಯಾಸ್ತಮಾನವೆಂಬ ಕೊಳಗದಲ್ಲಿ ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ ಬೇಗ ಬೇಗ ಶರಣೆನ್ನಿ. **—ಅಕ್ಕಮಹಾದೇವಿ.**

ಪ್ರಕೃತಿಯು ನಮ್ಮ ಸ್ನೇಹಿತರನ್ನು ಪ್ರೇಮಿಸಲು ಕಲಿಸುತ್ತದೆ. ಧರ್ಮವು ನಮ್ಮ ಶತ್ರುಗಳನ್ನು ಪ್ರೀತಿಸಲು ಕಲಿಸುತ್ತದೆ. **—ಥಾಮಸ್ ಫುಲ್ಲರ್.**

ಮಾತು (ಮತ್ತು ಬರವಣಿಗೆ) ನುಡಿಯುವವನ ಆತ್ಮಕ್ಕೆ ಕೈಗನ್ನಡಿ. ಮಾತನಾಡುವ ಮಟ್ಟದಲ್ಲಿ ಅವನ ವ್ಯಕ್ತಿತ್ವವಿರುತ್ತದೆ.

—ಪಬ್ಲಿಲಿಯಸ್ ಸೈರಸ್.

ತಾನಿರುವಂತೆಯೇ ಲೋಕವಿರುವದು ಎಂದು ತಿಳಿಯುವದು ಮನುಷ್ಯ ಸ್ವಭಾವ. ತಾನು ಪ್ರಚಂಡ ಕಾಮಿ, ದುರ್ಬಲ ಮನದವನಾಗಿದ್ದರೆ ಎಲ್ಲರೂ ಕಾಮಿಗಳಾಗಿ ಕಂಡು, ಸಂಯಮ ಅಸಾಧ್ಯವೆಂದೇ ನಿರ್ಧರಿಸುತ್ತಾನೆ. ತಾನು ಕೊಲೆಗಡುಕ ಸ್ವಭಾವದವನಿದ್ದರೆ ಅವನಿಗೆ ಸಜ್ಜನರ ಸಾತ್ವಿಕತೆಯ ಕಲ್ಪನೆ ಸಹ ಬರದು.

—ಅನುಭವ ವಾಣಿ.

(ಸಂಗ್ರಹ : **ಎಂ. ಗಂಗಮ್ಮ**)

ದೊಡ್ಡ ಮರ

—ಗೋ. ರು. ಚ.

ನಮ್ಮ ಮನೆಯ ಹಿಂದೊಂದು ದೊಡ್ಡ ಮರ :
—ಬಹಳ ವರ್ಷಗಳಿರಬಹುದು.
ಹಗಲು ರಾತ್ರಿ ಅದರ ಸದ್ದೇ ಸದ್ದು–"ಜೀಕು ಜೀಕು ;"
ನಮ್ಮ ಮನೆಯಲ್ಲಿ ಯಾರಿಗೂ ತಿಳಿದಂತಿಲ್ಲ
ಅದರ ಹುಟ್ಟಿದ ತಾರೀಖು !
ನಮ್ಮ ಅಜ್ಜಿಗೆ ಆ ಮರದ ಮೇಲೆ ಅತ್ಯಂತ ಪ್ರೀತಿ !
(ಅಜ್ಜಿಗೆ ಬೇಕಾದ ವಸ್ತುವೆಂದು,
ಆಕೆಗೆ ಬೇಸರವಾದೀತೆಂದು,
ಮನೆ ಮಂದಿಗೂ ಅದೇ ಪ್ರೀತಿ !)
ನಮ್ಮಜ್ಜಿ, ದಿನಕೊಮ್ಮೆಯಾದರೂ ಆ ಮರವ ನೋಡಬೇಕು ;
ನೋಡಿ ಮುಟ್ಟಿ ಬರಬೇಕು.
ಇಲ್ಲದಿದ್ದರೆ ಹೊಟ್ಟೆಗೆ ಅನ್ನ ಹೇಗೆ ಸೇರಬೇಕು ?
ಒಂದು ಕಾಲದಲ್ಲಿ ಚೆನ್ನಾಗಿದ್ದ ಮರ,
ಎಲೆ, ಹೂ, ಹಣ್ಣು—ಎಲ್ಲ ಕೊಟ್ಟ ದೊಡ್ಡ ಮರ !
ಆದರೆ,
ಕಾಲನ ಗಾಳಿ ಬೀಸಿ ಎಲೆಯುದುರಿವೆ,
ಹಸಿ ಆರಿದೆ. ಅದು ಈಗ—
ಬಿಸಿಲಿಗೆ ನೆರಳೂ ಅಲ್ಲ : ಮಳೆಗೆ ಮರೆಯೂ ಅಲ್ಲ !
ಇದು ಅಜ್ಜಿಗೂ ಗೊತ್ತು !
ಆದರೂ ಆ ಹಿತ್ತಲ ಮರದ ಪ್ರೀತಿ ಬಿಟ್ಟಿಲ್ಲ !
ಅದರಲ್ಲೋ, ಹುಡುಕಿದರೂ ಇಷ್ಟು ಹಸಿಯಿಲ್ಲ ;
ಮತ್ತೆ ಚಿಗುರುವ ಲಕ್ಷಣವಂತೂ
ಇಲ್ಲವೇ ಇಲ್ಲ.
ಮಳೆಗಾಳಿಗೆ ಬೀಳುವ ಮುನ್ನ
ಬಿದ್ದು ಮನೆಗೆ "ಜಕಂ" ಮಾಡುವ ಮುನ್ನ
ಕಡಿದು, ತೊಲೆ ಕಂಭ ಕಿಟಕಿಗೆ ಬಳಸೋಣವೆಂದರೆ
ಅಜ್ಜಿ ಒಪ್ಪುವುದಿಲ್ಲ.



ವಿಶ್ವಕಲ್ಯಾಣ ಮಿಷನ್

(ರಿಜಿಸ್ಟರ್ಡ್ ಚಾರಿಟಬಲ್ ರಿಲಿಜಿಯಸ್ ಟ್ರಸ್ಟ್)

ಬಸವ ಮಂಟಪ, 24, 2ನೇ ವಿಭಾಗ, ಕಾರ್ಡ್‌ರೋಡ್,
ರಾಜಾಜಿನಗರ, ಬೆಂಗಳೂರು–560010.

—ಶಿವರಾಯ ಚಂದ್ರಕಂಠಿ



ಗುರೂಜಿ



ಮಾತಾಜಿ

ವಿಶ್ವ ಕಲ್ಯಾಣ ಮಿಷನ್ ಪರಿಚಯ

ಹನ್ನೆರಡನೆಯ ಶತಮಾನದಲ್ಲಿ, ವಿಶ್ವಗುರು ಬಸವಣ್ಣನವರು ವ್ಯಕ್ತಿ–ಸಮಾಜಗಳ ಉತ್ಥಾನಕ್ಕಾಗಿ, ಮಾನವ ಸಮುದಾಯದ ಸುಂದರ ಒಕ್ಕೂಟವನ್ನು ರಚಿಸುವ ಮಣಿಹವನ್ನು ಹೊತ್ತು ನೂತನ ಪರಂಪರೆಯ ಆದ್ಯರಾದರು. ಭಾರತೀಯ ಸಮಾಜದ ಹಲವು ಸಂಕಷ್ಟಗಳಿಗೆ ಪರಿಹಾರ ಒದಗಿಸುವ ಯೋಜನೆಗಳನ್ನು ಹಾಕಿಕೊಂಡರಲ್ಲದೆ, ವ್ಯಕ್ತಿಯ ಆತ್ಮೋದ್ಧಾರ, ಸಮಾಜ ಸಂಘಟನೆ, ರಾಷ್ಟ್ರದ ಸಮುನ್ನತಿ, ಮನುಕುಲದ ಕಲ್ಯಾಣವನ್ನು ಸಾಧಿಸಬಲ್ಲ ವಿಶ್ವಧರ್ಮ ಸಂವಿಧಾನವನ್ನು ವಚನ ಸಾಹಿತ್ಯ ರೂಪದಲ್ಲಿ ಕೊಟ್ಟರು.

"ಬಸವಣ್ಣನವರೇ ಆದಿಯಾಗಿ ಅಸಂಖ್ಯಾತ ಶರಣರು, ಭರತ ಭೂಮಿಯ ನಭದಲ್ಲಿ ಕಾಣಿಸಿಕೊಂಡಿರುವ ಅಸಂಖ್ಯಾತ ಮಹಾಂತರು, ಜಗತ್ತಿನಲ್ಲಿ ಆಗಿಹೋಗಿರುವ ಇನ್ನೂ ಹಲವಾರು ಸಂತರು, ಮನುಜಕುಲ ಬದುಕಲು ನೀಡಿದ ತತ್ತ್ವಗಳನ್ನು ಜನಮನಕ್ಕೆ ಮುಟ್ಟಿಸಿ, ಕರ್ತಾರನ ಕಮ್ಮಟ ಶಾಲೆಯಾದ ಈ ಜಗತ್ತಿನಲ್ಲಿ ಸಾರ್ಥಕವಾದ ಬಾಳನ್ನು ಬಾಳಲು ಸಹಾಯಮಾಡಬೇಕು" ಎಂದು ಸಂಕಲ್ಪಿಸಿ, ಧಾರ್ಮಿಕ-ನೈತಿ ಮೌಲ್ಯಗಳ ಮೇಲೆ ಸಮಾಜದ ಪುನರ್ರಚನೆಯಾಗಬೇಕೆಂದು ಬಯಸಿ, ರೂಪುಗೊಂಡಿದೆ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು.

ಈ ಸಂಸ್ಥೆಯು ಪಬ್ಲಿಕ್ ರಿಲಿಜಿಯಸ್ ಚಾರಿಟಬಲ್ ರಿಜಿಸ್ಟರ್ಡ್ ಟ್ರಸ್ಟ್ ಇದ್ದು, ತಾನಿರಿಸಿಕೊಂಡ ಹಲವಾರು ಧ್ಯೇಯಗಳ ಪೂರೈಕೆಗೆ ಅನವರತ ದುಡಿಯುತ್ತಿದೆ. ಇಲ್ಲಿಯವರೆಗೆ ಸಾಧಿಸಿದ ಕಾರ್ಯಕ್ರಮಗಳ ಸಿಂಹಾವಲೋಕನವನ್ನು ಮತ್ತು ಮುಂದೆ ಸಾಧಿಸಲೆಂದು ಇರಿಸಿಕೊಂಡಿರುವ ಯೋಜನೆಗಳ ಪಕ್ಷಿನೋಟವನ್ನು ಈ ಲೇಖನದಲ್ಲಿ ಕೊಡಲಾಗುತ್ತಿದೆ.

ಪ್ರವಚನ ಪಿತಾಮಹರು, ಪ್ರತಿಭಾನ್ವಿತರು, ಅಪೂರ್ವವಾಗ್ಮಿಗಳು ಆಗಿರುವ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಜಗದ್ಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಜನಿಸಿ, ವಿಶ್ವಧರ್ಮದ ತತ್ತ್ವಗಳನ್ನು ನಾಡಿನಾದ್ಯಂತ ಪ್ರವಚನಗಳಿಂದ, ಸಾಹಿತ್ಯದಿಂದ ಪ್ರಸರಿಸುತ್ತಿರುವ ಪೂಜ್ಯ ಲಿಂಗಾನಂದ ಸ್ವಾಮಿಗಳವರು ಈ ಸಂಸ್ಥೆಯ ಆಧಾರ ಸ್ತಂಭವಾಗಿದ್ದಾರೆ. ಧಾರ್ಮಿಕ ಪ್ರಪಂಚದಲ್ಲಿ ಅವಕಾಶ ಒದಗಿಸಿದರೆ ಹೆಣ್ಣೂ ಕೂಡ ತನ್ನ ಸಾಧನೆಯಿಂದ ಗುರುವಾಗಬಲ್ಲಳು, ಜಗದ್ಗುರುವಾಗಬಲ್ಲಳು ಎಂಬ ಬಸವಾದಿ ಶರಣರ ತತ್ತ್ವದ

ಸತ್ವವನ್ನು ೨೦ನೇ ಶತಮಾನದಲ್ಲಿ ವಿಶ್ವಕ್ಕೆ ಮನಗಾಣಿಸುವುದಕ್ಕಾಗಿ ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮವನ್ನು ಸಂಸ್ಥಾಪಿಸಿದ ಕ್ರಾಂತಿಯೋಗಿಗಳು. ಪೂಜ್ಯರು ಇಂದು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಅಧ್ಯಕ್ಷರಾಗಿದ್ದು, ತನು–ಮನ–ಧನಗಳಿಂದ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೂ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪೀಠಾಧ್ಯಕ್ಷೆಯರೂ, ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಸಂಸ್ಥಾಪಕರೂ ಆಗಿರುವ ಪೂಜ್ಯ ಶ್ರೀ ಜದ್ಗುರು ಮಾತಾಜಿಯವರು ಈ ಸಂಸ್ಥೆಯ ದಿವ್ಯ ಚೇತನವಾಗಿದ್ದಾರೆ. ಪುಣ್ಯಮಯ ಭರತಭೂಮಿಯಿಂದ ಹಿಮಾಲಯದ ಉತ್ತುಂಗ ಶೃಂಗವನ್ನು ದಾಟಿ, ಕಡಲಿನಾಚೆಯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಭಾರತೀಯ ಸಂಸ್ಕೃತಿ–ಧರ್ಮ–ತತ್ತ್ವಜ್ಞಾನ ಕುರಿತು ಆಂಗ್ಲ ಭಾಷೆಯಲ್ಲಿ, ಆಂಗ್ಲ ನಾಡಿನ ಜನತೆಗೆ ಬೋಧನೆ ಮಾಡಿರುವ ಪೂಜ್ಯರು ಇಂದು ಸಾಹಿತ್ಯ, ಪ್ರವಚನಗಳಿಂದ ಜನಸೇವೆಗೈಯುತ್ತ, ಬಸವ ಗುರುಕುಲ, ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ **(Prabhudeva College of Divinity)** ಮುಂತಾದವುಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ.

ಪರಮ ಪೂಜ್ಯ ಸದ್ಗುರುಗಳ ಮತ್ತು ಪೂಜ್ಯ ಜಗದ್ಗುರು ಮಾತೆಯವರ ಮನದಲ್ಲಿ ರೂಪುಗೊಂಡ ವಿಶ್ವಕಲ್ಯಾಣ ಮಿಷನ್, ಮೊದಲು ತನ್ನ ಧಾರ್ಮಿಕ ಚಟುವಟಿಕೆಗಳನ್ನು ಆರಂಭಿಸಿ, ಬಲಗೊಂಡು, ಜನತೆಯ ಅಭಿಮಾನದಿಂದ ವೃದ್ಧಿಗೊಂಡು, ೧೯೭೭ ರ ಜನೆವರಿಯಲ್ಲಿ ರಜಿಸ್ಟರ್ಡ್ ಟ್ರಸ್ಟಾಯಿತು.

ಸಾಧಿಸಿದ ಕಾರ್ಯಕ್ರಮಗಳ ಸಿಂಹಾವಲೋಕನ

೧. ವಿಶ್ವಧರ್ಮ ಪ್ರವಚನ ಕಾರ್ಯಕ್ರಮ :

"ಧರ್ಮದೆಡೆಗೆ ಜನ ಬರದಾಗ ಧರ್ಮವನ್ನೇ ಅವರೆಡೆಗೆ ಒಯ್ಯಬೇಕು." ಎಂಬ ಘೋಷಣೆಯನ್ನು ಹೊತ್ತು ನಾಡಿನಾದ್ಯಂತ ವಿಶ್ವಧರ್ಮ ಪ್ರವಚನಗಳನ್ನು ಏರ್ಪಡಿಸುತ್ತಿದೆ. "ಜ್ಞಾನ ನೇತ್ರದಾನ ಶಿಬಿರ" (Spiritual Eye Camp) ಎಂಬಂತೆ ತಿಂಗಳು ಗಟ್ಟಳೆ ಏರ್ಪಡಿಸಲಾಗುವ ಕಾರ್ಯಕ್ರಮಗಳು ಅಜ್ಞಾನದ ಪೊರೆಯನ್ನು ತೆಗೆಯುವಲ್ಲಿ, ಅಂಧಶ್ರದ್ಧೆ–ಕಂದಾಚಾರ ನಂಬುಗೆ ಮುಂತಾದ ದೃಷ್ಟಿದೋಷವನ್ನು ಸರಿಪಡಿಸುವಲ್ಲಿ, ಸಮ್ಯಕ್ ದೃಷ್ಟಿಶಕ್ತಿಯನ್ನು ತೀವ್ರಗೊಳಿಸುವಲ್ಲಿ ಸಹಾಯಕವಾಗುತ್ತವೆ. ಸಹಸ್ರಾರು ಜನ ಜ್ಞಾನಾಮೃತವನ್ನು ಪಾನಮಾಡಿ ಸಂತೃಪ್ತಿ ಭಾವನೆಯನ್ನು

ವ್ಯಕ್ತಪಡಿಸಿದ್ದಾರೆ, ಆತ್ಮೋದ್ಧಾರದ ಪಥದಲ್ಲಿ ಸಾಗಿದ್ದಾರೆ. ಇಂಥ ಪ್ರವಚನಗಳು ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೋಕು ಕೇಂದ್ರಗಳಲ್ಲಿ ನಡೆಯುತ್ತ ಬಂದಿದ್ದು, ಕರ್ನಾಟಕದ ಎಲ್ಲ ಭಾಗಗಳಿಗೂ ಆಧ್ಯಾತ್ಮಿಕ ತತ್ವವನ್ನು ಮುಟ್ಟಿಸುವ ಮನೀಷೆಯುಂಟು ಈ ಸಂಸ್ಥೆಗೆ.

ಪರಮ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳವರು ಮತ್ತು ಪರಮ ಪೂಜ್ಯರಾದ ಜಗದ್ಗುರು ಮಾತಾಜಿಯವರೇ ಅಲ್ಲದೆ ಈ ಸಂಸ್ಥೆಯಲ್ಲಿ ಅಭ್ಯಸಿಸಿದ ಅನೇಕ ಬೋಧಕರು ಗ್ರಾಮಾಂತರ ಪ್ರದೇಶಗಳಲ್ಲಿ ಬೋಧೆಯ ಕಾಯಕ ಗೈಯುತ್ತ ಸಂಚರಿಸುತ್ತಿದ್ದಾರೆ.

೨. ಸುಯಿಧಾನ ಸುಗ್ರಂಥಮಾಲೆ

'ಪ್ರವಚನವು ವರ್ಷಾಧಾರೆಯಂತೆ. ಈ ಜ್ಞಾನದ ಸುಜಲ ಸದಾ ಕಾಲವು ಉಪಯೋಗವಾಗಬೇಕಾದರೆ ಸಾಹಿತ್ಯದ ಆಣೆಕಟ್ಟಿನಲ್ಲಿ ಅದನ್ನು ಸಂಗ್ರಹಿಸಿ, ಪುಸ್ತಕಗಳೆಂಬ ನಾಲೆ-ಕಾಲುವೆಗಳ ಮುಖಾಂತರ ಜನಮನಕ್ಕೆ ಹರಿಸಬೇಕು', ಎಂಬ ಸಂಕಲ್ಪದೊಡನೆ ನಲವತ್ತಕ್ಕೂ ಮೀರಿದ ಪುಸ್ತಕಗಳನ್ನು ಪ್ರಕಟಿಸಿದೆಯಲ್ಲದೇ, ಇನ್ನೂ ಅನೇಕ ಉದ್ಗ್ರಂಥಗಳನ್ನು, ಬಸವ ಗೀತೆ, ಬಸವ ಧರ್ಮ ದರ್ಶನವೆಂಬ ಶಾಸ್ತ್ರೀಯ ಕೃತಿಗಳನ್ನು, ಎಳೆಯ ಮಕ್ಕಳಿಗಾಗಿ ಶರಣರ ಕಿರುಪರಿಚಯಗಳನ್ನು ಪ್ರಕಟಿಸುವ ಉದ್ದೇಶ ತಾಳಿದೆ.

೩. ಕಲ್ಯಾಣ ಕಿರಣ ಮಾಸಪತ್ರಿಕೆ

ಕುಳಿತಲ್ಲಿನಿಂದಲೇ ಜನರಿಗೆ ತತ್ತ್ವದರ್ಶನ, ಜ್ಞಾನ ಬೋಧೆಯನ್ನು ಮಾಡಲು ಮತ್ತು ಜನರು ಧಾರ್ಮಿಕ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುವಂತೆ ಕಾರ್ಯಗೈಯಲು ಕಲ್ಯಾಣ ಕಿರಣ ಎಂಬ ಮಾಸ ಪತ್ರಿಕೆಯೊಂದನ್ನು ನಡೆಯಿಸುತ್ತಿದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೃಹತ್ತಾಗಿ ಬೆಳೆಯುತ್ತಿದ್ದು, ಇದು ಏರ್ಪಡಿಸುವ ವಿಶ್ವಧರ್ಮ ಪ್ರವಚನ ಕಾರ್ಯಕ್ರಮಗಳು ನಾಡಿನಾದ್ಯಂತ ಪರಿಣಾಮಕಾರಿಯಾಗಿ ಪ್ರಭಾವ ಬೀರುತ್ತಿವೆ. ಇಂಥ ಕಾರ್ಯಕ್ರಮಗಳ ವರದಿಯನ್ನು ನೀಡುವುದು, ಸಮಾಜದ ಅಭಿವೃದ್ಧಿಗಾಗಿ ಸಂಸ್ಥೆಯು ಹಾಕಿಕೊಳ್ಳುವ ನೂತನ ಬಗೆಯ ಯೋಜನೆಗಳನ್ನು ಸಮಾಜ ಬಾಂಧವರಿಗೆ ತಿಳಿಯಪಡಿಸುವುದು ಪತ್ರಿಕೆಯ ಉದ್ದೇಶಗಳಲ್ಲೊಂದು. ವಾರ್ಷಿಕ ಚಂದಾ ರೂ. ೧೨-೦೦ ಇರುವ ಈ ಜ್ಞಾನಸಂಪುಟ ವೈಚಾರಿಕ, ಹಾರ್ದಿಕ, ಧಾರ್ಮಿಕ ಮೌಲ್ಯಗಳ ಪರಿಚಯವನ್ನು ಮನಂಬುಗುವಂತೆ ಮಾಡಿಕೊಡುವುದು.

೪. ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ

ಶೀಷೆಗಳಲ್ಲಿರುವ ಔಷಧಿಗಳು ಮೈಯಲ್ಲಿ ಇಳಿಯಬೇಕಾದರೆ ವೈದ್ಯರು ಬೇಕು,

ಮತ್ತು ಸಿರಿಂಜ್ ಬೇಕು. ಧರ್ಮಶಾಸ್ತ್ರಗಳಲ್ಲಿರುವ ಶಿವಮದ್ದು ಬಾಳನ್ನೆದುರಿಸುವ ಶಕ್ತಿಯನ್ನೀಯಬೇಕಾದರೆ ಧರ್ಮಬೋಧಕರೆಂಬ ವೈದ್ಯರು, ಪ್ರವಚನವೆಂಬ ಸಿರಿಂಜ್, ಬೋಧನ ಕಲೆಯೆಂಬ ವೈದ್ಯಕೀಯ ಜ್ಞಾನ ಬೇಕಾಗುತ್ತದೆ. ವಚನ ಸಾಹಿತ್ಯದಲ್ಲಿ ಮತ್ತು ಇನ್ನಿತರ ವಿಶ್ವದ ಧಾರ್ಮಿಕ ಸಾಹಿತ್ಯದಲ್ಲಿ ಹುದುಗಿರುವ ಆಧ್ಯಾತ್ಮಿಕ ಮೌಲ್ಯಗಳನ್ನು ಜನಮನಕ್ಕೆ ಇಳಿಸಲು ಸಹಾಯಕವಾಗಲು ಒಂದು ಧಾರ್ಮಿಕ ತರಬೇತಿಯನ್ನಾರಂಭಿಸಲಾಗಿದೆ. ಈ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯದಲ್ಲಿ ಒಂದು ವರುಷದ ಡಿಪ್ಲೋಮವಾಗಿ 'ಧರ್ಮಶಾಸ್ತ್ರ ಪ್ರವೇಶ' ಎಂಬ ಶಿಕ್ಷಣ ನೀಡಲಾಗುತ್ತಿದೆ. ಕನಿಷ್ಠಾರ್ಹತೆ ಎಸ್. ಎಸ್. ಎಲ್. ಸಿ. ಧರ್ಮಪ್ರಸಾರ, ಸಮಾಜಸೇವೆ–ಈ ಉಭಯರಂಗಗಳಲ್ಲಿ ದುಡಿಯುವ ಆಸಕ್ತಿ ಇರುವವರಿಗೆ ಪ್ರವೇಶ ಉಂಟು. ಆಯ್ಕೆಯಾದ ಅಭ್ಯರ್ಥಿಗಳಿಗೆ ಉಚಿತ ಊಟ, ವಸತಿ, ಅಧ್ಯಯನಾವಕಾಶ. ಎಲ್ಲಾ ಜಾತಿ ಮತ ಪಂಥದ ಮುಮುಕ್ಷುಗಳಿಗೆ ಪ್ರವೇಶ ಮತ್ತು ಸಮಾನ ಆದರವಿದೆ.

೫. ಬಸವ ಮಂಟಪ ನಿರ್ಮಾಣ

ವಿಮಾನಗಳು ಏರಲು, ಇಳಿಯಲು ನಿಲ್ದಾಣಬೇಕು. ದೈವಾನುಗ್ರಹ ಇಳಿಯಲು ಮತ್ತು ಮಾನವ ಆತ್ಮೋತ್ಥಾನ ಮಾಡಿಕೊಳ್ಳಲು ಅಧ್ಯಾತ್ಮಾಲಯಗಳು ಬೇಕು. ಅಂತೆಯೇ ಪವಿತ್ರ ಕರ್ತವ್ಯವನ್ನು ಪೂರೈಸುತ್ತಿದೆ ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪವೆಂಬ ಅಧ್ಯಾತ್ಮ ಮಂದಿರದಲ್ಲಿ. ಭಾನುವಾರದಂದು ಬೆಳಗಿನ ೧೦ ರಿಂದ ೧೨ ರ ವರೆಗೆ ನಡೆಯುವ ಸಾಮೂಹಿಕ ಪ್ರಾರ್ಥನಾ ಸಭೆ ಅತ್ಯಂತ ಮಂಗಳಮಯ. ಭಕ್ತಿ ಪ್ರಚೋದಕ ಶಾಂತಿದಾಯಕ ಒಕ್ಕೂಟವಾಗಿರುತ್ತದೆ. ಧರ್ಮ ಜೀವನದಲ್ಲಿ ಶ್ರದ್ಧೆಯಿರುವ ಮುಮುಕ್ಷು ಭಾವದ ಸದ್ಭಕ್ತರು ಸುಂದರ, ಪ್ರಶಾಂತ ಪರಿಸರದ ಬಸವ ಮಂಟಪದಲ್ಲಿ ಆಸನಾಸ್ಥಿತರಾಗಿ ಓಂಕಾರ ಝೇಂಕಾರ ಗೈಯುತ್ತಾ, ಒಕ್ಕೊರಲಿನಿಂದ ಪ್ರಾರ್ಥಿಸುವ ತನ್ಮಯಭಾವ ಉದ್ವಿಗ್ನಗೊಂಡ ಯಾವುದೇ ಮನವನ್ನು ಶಾಂತಗೊಳಿಸದಿರದು. ಈ ಪ್ರಾರ್ಥನಾಸಭೆಯಲ್ಲಿ ಭಾಗವಹಿಸಿದವರಿಗೆ ಹನ್ನೆರಡನೆಯ ಶತಮಾನದ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ನಡೆದ ಅನುಭವ ಮಂಟಪ ನೆನಪಿಗೆ ಬಾರದಿರದು. ಅಂದು ಬಸವಣ್ಣನವರು ಕಾಯಧಾರಿಗಳಾಗಿ ಇದ್ದರೆ, ಇಂದು ಮಂಟಪದ ಮಧ್ಯದಲ್ಲಿರುವ ಸಾತ್ವಿಕ ಕಳೆಯ ಬಸವ ಭಾವಚಿತ್ರ ಆ ಸನ್ನಿಧಿಯನ್ನೊದಗಿಸುತ್ತದೆ. ಪ್ರಭುದೇವರನ್ನು ಚಿತ್ರಪಟಲಕ್ಕೆ ತರುವ ಸದ್ಗುರುಗಳು, ಮಹಾಮಾತೆ ಅಕ್ಕಮಹಾದೇವಿಯ ಸಾತ್ವಿಕಾಂಶವೇ ಆದ ಪೂಜ್ಯ ಮಾತೆಯವರು, ಬಸವ ಮಂಟಪದ ಎರಡೂ ಬದಿಗಳಲ್ಲಿ ಪೀಠಸ್ಥರಾದರೆ ನಮಗೆ ಸುತ್ತಲೂ ನಿರ್ಮಾಣಗೊಳ್ಳುವುದು ಆ ದಿವ್ಯ ಲೋಕ. ಬಸವ ಮಂಟಪವು ಪ್ರತಿ ಸೋಮವಾರ ಜರುಗಿಸುವ ಸಾಮೂಹಿಕ ಪೂಜಾ ವಿಧಾನವು ಪೂಜೆ–ಧ್ಯಾನ ಮುಂತಾದ ವೈಯಕ್ತಿಕ ಅರ್ಚನೆಯ ಬಗೆಯನ್ನು

ಕಲಿಸುವ ಪ್ರಾಯೋಗಿಕ ಕಾರ್ಯಕ್ರಮ. ಪ್ರತಿ ಭಾನುವಾರ ಪ್ರಾರ್ಥನಾ ನಂತರ ನಡೆಯುವ ಪೂಜ್ಯರ ಪ್ರವಚನಗಳು ಜ್ಞಾನಾಪೇಕ್ಷಿಗಳಿಗೆ ಅಮೃತಬಿಂದುಗಳು.

೬. ಯೋಗಾಸನ ತರಬೇತಿ

ಸುಪ್ರಭಾತ ಆರುವರೆ ಗಂಟೆಗೆ ಪ್ರತಿನಿತ್ಯ ನಡೆಯುತ್ತದೆ ಯೋಗಾಸನ ತರಬೇತಿ ಕಾರ್ಯಕ್ರಮ. ಶರೀರ ದಾರ್ಢ್ಯತೆ ಮತ್ತು ಮನೋದಾರ್ಢ್ಯತೆ ಎರಡನ್ನೂ ಕಲಿಸುವ ಬಯಕೆ ಈ ಸಂಸ್ಥೆಯದು. ಒಂದೊಂದು ತಿಂಗಳಿನ ಕೋರ್ಸಿನಂತೆ ಮೂರು ಹಂತದಲ್ಲಿ ಕಲಿಸಲಾಗುತ್ತಿದೆ.

೭. ದಿವ್ಯಾನುಭವ ಶಿಬಿರ

ಗಳಿಕೆ ಮತ್ತು ಬಳಕೆ, ನುಡಿ ಮತ್ತು ನಡೆ ಇವುಗಳಲ್ಲಿ ಸಮತೋಲನ ಬೇಕು. ಅನ್ಯರಿಗೆ ದಾನ ಕೊಡಬೇಕಾದರೆ, ಹಂಚಬೇಕಾದರೆ ತಾನು ಮೊದಲು ಗಳಿಸಬೇಕಷ್ಟೇ. ಹಾಗೆ ಜ್ಞಾನಾನುಭವಗಳನ್ನು ಗಳಿಸಿಕೊಡುವ ಶಿಬಿರಗಳಲ್ಲಿ ಭಾಗವಹಿಸಿ ಜಿಜ್ಞಾಸುಗಳು ನೈತಿಕ ಮತ್ತು ಆಧ್ಯಾತ್ಮಿಕವಾಗಿ ಪರಿಪುಷ್ಟವಾಗಲೆಂಬ ಮನೀಷೆಯಿಂದ, ಬದುಕಿಗೆ ನಿರ್ದಿಷ್ಟ ರೂಪುರೇಷೆ ಕೊಡಲು, ಪ್ರತಿವರ್ಷ ಏಪ್ರಿಲ್ ಹದಿನೈದರಿಂದ ಮೇ ೧೫ ರ ವರೆಗೆ ದಿವ್ಯಾನುಭವ ಶಿಬಿರವನ್ನು ಏರ್ಪಡಿಸಲಾಗುವುದು. ರಸ್ತೆಯಲ್ಲಿ ಓಡಿ ಧೂಳು ತಿಂದ ಕಾರನ್ನು ಸರ್ವೀಸ್ ಗ್ಯಾರೇಜಿಗೆ ಕಳಿಸಿ ಪುನಶ್ಚೇತನಗೊಳಿಸುವಂತೆ, ಇಂದ್ರಿಯ ಲೋಕದ ಪಥದಲ್ಲಿ ಓಡುವ ಬಾಳ ಗಾಡಿಯನ್ನು ಆಗಾಗ ಪುನಶ್ಚೇತನಗೊಳಿಸಲು ಸಹಾಯಕವಾಗುವುದು ಈ ಶಿಬಿರ ಪ್ರವೇಶ ಮತ್ತು ತರಬೇತಿ.

ದಿವ್ಯಾನುಭವ ಶಿಬಿರದಲ್ಲಿ ಭಾಗವಹಿಸುವ ಜಿಜ್ಞಾಸುಗಳಲ್ಲಿ ಯಾವುದೇ ಬಗೆಯ ಜಾತಿ–ಮತ–ಪಂಥಗಳ ತಾರತಮ್ಯವಿಲ್ಲ. ಶಿಬಿರ ತರಬೇತಿಯ ಅವಧಿಯಲ್ಲಿ ಯೋಗಾಸನಾಭ್ಯಾಸ, ಪೂಜೆ, ಧ್ಯಾನ, ಶಾಸ್ತ್ರಾಧ್ಯಯನ, ವಿಚಾರ ಗೋಷ್ಠಿ ಮತ್ತು ಪ್ರವಚನಗಳನ್ನು ಕ್ರಮಬದ್ಧವಾಗಿ ಯೋಜಿಸಲಾಗಿದೆ.

ಪರಮ ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳವರ ಸನ್ನಿಧಿಯಲ್ಲಿ, ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆಯುವ ಈ ದಿವ್ಯಾನುಭವ ಶಿಬಿರದ ಉದ್ದೇಶ ಕೆಳಕಂಡಂತಿದೆ.

೧. ಭಾರತೀಯ ಧರ್ಮ–ಸಂಸ್ಕೃತಿಗಳ ಸ್ಥೂಲ ಪರಿಚಯ ಮಾಡಿ ಕೊಡುವುದು.
೨. ಶಿಸ್ತು, ನೈತಿಕ ಪ್ರಜ್ಞೆ, ಆಧ್ಯಾತ್ಮ ಪ್ರವೃತ್ತಿಯ ಪ್ರೇರೇಪಣೆ.
೩. ಆಧ್ಯಾತ್ಮಿಕ ಸಾಧನೆಯ ಬಗ್ಗೆ ಮಾರ್ಗದರ್ಶನ.

೪. ಶಾಸ್ತ್ರಗಳ ಮತ್ತು ಸಿದ್ಧಾಂತಗಳ ಅಧ್ಯಯನ.
೫. ಪ್ರಶಾಂತ ವಾತಾವರಣದಲ್ಲಿ ಆದರ್ಶ–ಸರಳ ಜೀವನದ ಪೋಷಣೆ.

ಸಾಮಾನ್ಯವಾಗಿ ಶಿಬಿರವನ್ನು ಬೆಂಗಳೂರಿನ, ವಿಶ್ವಕಲ್ಯಾಣ ಮಿಷನ್ ಕೇಂದ್ರ ಕಟ್ಟಡದಲ್ಲಿ ನಡೆಸಲಾಗುವುದು. ವಸತಿಗೆ ಬೇರೆ ಕಟ್ಟಡಗಳನ್ನು ಶಿಬಿರಾರ್ಥಿಗಳ ಸಂಖ್ಯೆಯನ್ನು ಅನುಸರಿಸಿ ಆರಿಸಲಾಗುವುದು. ಕೆಲವೊಮ್ಮೆ ಬೆಂಗಳೂರಿನ ಹೊರಗಿನ ಪ್ರಕೃತಿಯ ಸ್ಥಾನಗಳಲ್ಲಿ ಸಹ ಶಿಬಿರವನ್ನು ಏರ್ಪಡಿಸಲಾಗುವುದು. ಈ ಸಲ ೧೯೭೭ಮೇನಲ್ಲಿ ಹಾಸನದಲ್ಲಿ ತುಂಬಾ ಚೆನ್ನಾಗಿ ದಿವ್ಯಾನುಭವ ಶಿಬಿರವು ನಡೆಯಿತು.

೮. ವಿಚಾರಗೋಷ್ಠಿ

ಹನ್ನೆರಡನೆಯ ಶತಮಾನದಲ್ಲಿ ಜಾತಿರಹಿತ, ವರ್ಗ–ವರ್ಣರಹಿತ, ಸಮತಾವಾದೀ ಮಾನವೀಯ ಮೌಲ್ಯಗಳ ಮೂಲಕ ಮನುಕುಲವನ್ನುದ್ಧರಿಸುವ ಪ್ರಗತಿಪರ–ಕ್ರಾಂತಿಕಾರೀ ಧರ್ಮವೊಂದನ್ನು ಕ್ರಾಂತಿಯೋಗಿ ಬಸವಣ್ಣನವರು ನೀಡಿದರು. ಆದರೆ ಇಂದು ಆ ಮೂಲ ಧರ್ಮಕ್ಕೆ ತದ್ವಿರುದ್ಧವಾದ ಆಚರಣೆಗಳು ತುಂಬಿ, ಲಿಂಗಾಯತ ಸಮಾಜವು ಜಾತಿವಾದ, ವರ್ಣ–ವರ್ಗವಾದಗಳಿಂದ ಘಾಸಿಗೊಳ್ಳುತ್ತಿದೆ. ಈಗ ವಿಚಾರವಂತರೂ, ಮಾನವತಾವಾದಿಗಳು, ಸಮತಾವಾದಿಗಳು, ಪ್ರಗತಿಪರ ದೃಷ್ಟಿಕೋನದವರು ಒಂದೆಡೆ ಸೇರಿ ಸಮಗ್ರವಾಗಿ ಚಿಂತನೆಮಾಡಿ, ಹಳೆಯ ಸಮಾಜದ ಪುನರ್ನಿರ್ಮಾಣ ಅಥವಾ ನವ ಸಮಾಜದ ಸಂಘಟನೆಯ ಬಗ್ಗೆ ಆಳವಾದ ಚಿಂತನೆಮಾಡಬೇಕಾಗಿದೆ. ಕೇವಲ ಉತ್ಸವವನ್ನು ಮಾಡಲೆಳಸುವ ಅಥವಾ ಔಪಚಾರಿಕ ಸಭೆಗಳನ್ನಲ್ಲ; ಪ್ರಾಯೋಗಿಕ ಚಿಂತನಶೀಲ ಸಭೆಗಳನ್ನು ನಡೆಸುವ ಉದ್ದೇಶದಿಂದ ಸಮಾಜದ ಬಗ್ಗೆ ಸಾಕಷ್ಟು ಚಿಂತನೆ ಮಾಡಿರುವ ವಿಚಾರವಂತರ ಸಮಾವೇಶವಾಗಬೇಕೆಂದು ಈ ಸಂಸ್ಥೆ ಆಗಾಗ ವಿಚಾರ ಗೋಷ್ಠಿಗಳನ್ನು ಏರ್ಪಡಿಸುತ್ತದೆ. ಆಗ ಎಲ್ಲರಿಗೂ ಸ್ವತಂತ್ರ ವಿಚಾರ ಮಾಡಲು ಮತ್ತು ತಮ್ಮ ಸಲಹೆ ನೀಡಲು ಅವಕಾಶ ಕಲ್ಪಿಸುತ್ತದೆ. ಅಂಥ ಒಂದು ಅಭೂತ ಪೂರ್ವ ವಿಚಾರಗೋಷ್ಠಿಯು ೧೯೭೭ ಅಗಸ್ಟ್ ೧೩, ೧೪ ಮತ್ತು ೧೫ ರಂದು ರಾಜಾಜಿನಗರ ಬಡಾವಣೆಯಲ್ಲಿರುವ "ಬಸವ ಮಂಟಪ"ದಲ್ಲಿ ಯಶಸ್ವಿಯಾಗಿ ಈಡೇರಿತು.

೯. ಅನುಭವಗೋಷ್ಠಿ

ನಾಡಿನ ಪ್ರಸಿದ್ಧ ಸಾಹಿತಿಗಳನ್ನು, ಚಿಂತನ ಶೀಲರನ್ನು, ಅನುಭಾವಿಗಳನ್ನು ಆಮಂತ್ರಿಸಿ, ಬಸವ ಮಂಟಪದಲ್ಲಿ ಅವರ ಅಮೃತವಾಣಿಯನ್ನು ಜನತೆಯು ಆಲಿಸಲು ಅವಕಾಶ ಮಾಡಿಕೊಡುತ್ತದೆ. ಹೆಸರಾಂತ ವ್ಯಕ್ತಿಗಳನ್ನು, ಸಮಾಜ ಸೇವಕರನ್ನು ಆಗಾಗ ಸನ್ಮಾನಿಸುತ್ತದೆ.

೧೦. ಶರಣರ ಜಯಂತಿ ಆಚರಣೆ

ಉನ್ನತ ಸಂದೇಶವನ್ನು ಜಗತ್ತಿಗೆ ನೀಡಿಹೋದ ಶರಣರನ್ನು, ಸಂತರನ್ನು ಗೌರವಿಸುವ ಸಲುವಾಗಿ ಅವರ ಜಯಂತಿಗಳನ್ನು ತಾತ್ತ್ವಿಕವಾಗಿ ಆಚರಿಸುವುದು ಮಾತ್ರವಲ್ಲದೆ, ರಾಷ್ಟ್ರೀಯ ಹಬ್ಬಗಳನ್ನು ರಾಷ್ಟ್ರದ ನೇತಾರರ ಜನ್ಮದಿನೋತ್ಸವಗಳನ್ನು ಆಚರಿಸುತ್ತದೆ.

೧೧. ಸಾಮೂಹಿಕ ಪ್ರಸಾದ (Community Dinner)

ಆಧ್ಯಾತ್ಮ ಜೀವಿಗಳಲ್ಲಿ ಬಂಧುಭಾವವನ್ನು ಬೆಳೆಸುವ ಸಲುವಾಗಿ ಆಗಾಗ ಸಾಮೂಹಿಕ ಭೋಜನ ಏರ್ಪಡಿಸುತ್ತದೆ. ಮುನ್ನವೇ ಗೊತ್ತುಪಡಿಸಿದಂತೆ ವಿಶಿಷ್ಟ ಬಗೆಯ ದಿನಸುಗಳ ಪಾಕಮಾಡಿ, ಎಲ್ಲರೂ ಸಮಾವೇಶವಾಗಿ ಅದನ್ನು ಬೆರೆಸಿ, ಸಾಮೂಹಿಕ ಪೂಜೆ, ತೀರ್ಥ–ಪ್ರಸಾದಗಳ ನಂತರ ಸಹಪಂಕ್ತಿಯಲ್ಲಿ ಕುಳಿತು ಪ್ರಸಾದ ಸ್ವೀಕರಿಸಲಾಗುವುದು. ಕೆಲವೊಮ್ಮೆ ಎಲ್ಲರೂ ಒಟ್ಟಾಗಿ ಹಣಹಾಕಿ ಬಸವ ಮಂಟಪದಲ್ಲೇ ಪ್ರಸಾದ ಮಾಡಿಸಿ, ಸಹಪಂಕ್ತಿ ಭೋಜನ ಮಾಡುವುದೂ ಉಂಟು.

೧೨. ಶಿವಾನುಭವ ಪ್ರವಾಸ

ಪ್ರಕೃತಿ ಸ್ಥಾನಗಳಿಗೆ, ಶಾಂತ–ರಮ್ಯ ತಾಣಗಳಿಗೆ, ಶರಣರ ಕ್ಷೇತ್ರಗಳಿಗೆ ಸದ್ಭಕ್ತರನ್ನು ಒಟ್ಟುಗೂಡಿಸಿಕೊಂಡು ಹೋಗುವ ಪರಿಪಾಠ ಉಂಟು. ಹೀಗೆ ಬಹುಬಗೆಯ ಕಾರ್ಯಕ್ರಮ ಹಾಕಿಕೊಂಡು ವಿಶ್ವಕಲ್ಯಾಣ ಮಿಷನ್ ಅಪೂರ್ವ ಸಂಸ್ಕಾರ ನೀಡಿ, ಜನತೆಯ ಜಾಗೃತಿಯನ್ನು ಮಾಡುತ್ತಲಿದೆ.

ಮುಂದಿನ ಯೋಜನೆಗಳ ಪಕ್ಷಿನೋಟ.

೧. ಬಸವ ತತ್ತ್ವ ಪರಿಷತ್

ಇಲ್ಲಿಯವರೆಗೆ ಸಾಧಿಸಿದ ಕಾರ್ಯಕ್ರಮಗಳು ಅತ್ಯಲ್ಪವೆಂದು, ಇನ್ನೂ ಸಾಧಿಸಬೇಕಾದುದು ಬಹಳವಿದೆ, ಎಂದು ಮನಗಂಡ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಸಮತಾವಾದಿ, ಮನುಕುಲೋದ್ಧಾರಿ, ವಿಶ್ವಗುರು ಬಸವಣ್ಣನವರ ತತ್ವಗಳ ಅನುಷ್ಠಾನಕ್ಕಾಗಿ "ಬಸವ ತತ್ತ್ವ ಪರಿಷತ್ತು" ಎಂಬ ಜಾತ್ಯತೀತ ಧಾರ್ಮಿಕ ಮಂಡಳಿಯನ್ನು ರಚಿಸುವ ಉದ್ದೇಶ ತಾಳಿದೆ. ಲಿಂಗಾಯತ ಸಮಾಜ, ಅಖಂಡ ಹಿಂದೂ ಜನಾಂಗ, ಭಾರತೀಯ ಧಾರ್ಮಿಕ ಪಂಥಗಳನ್ನು ಹಿನ್ನೆಲೆಯಾಗಿರಿಸಿಕೊಂಡು, ಜಾತಿ, ವರ್ಣ, ವರ್ಗ ರಹಿತ ಒಂದು ಆಧ್ಯಾತ್ಮಿಕ ಒಕ್ಕೂಟವನ್ನು ರಚಿಸಿ, ಧರ್ಮ ಜಾಗೃತಿ ಗೈಯ್ವ ಮನೀಷೆ ತಾಳಿದೆ. ಈ ಸಂಸ್ಥೆಯು ಸಾಹಿತ್ಯ, ಶಿಕ್ಷಣ, ತತ್ತ್ವ ನಿರ್ಣಯ, ಧರ್ಮಪ್ರಚಾರ,

ಸಮಾಜ ಸೇವೆ ಎಂಬ ಐದು ಕ್ಷೇತ್ರಗಳಲ್ಲಿ ದುಡಿದು ಕಾರ್ಯನಿರ್ವಹಿಸಬೇಕೆಂಬ ಮಣಿಹ ಹೊಂದಲಿದೆ.

ಬಸವ ತತ್ತ್ವ ಪರಿಷತ್ತು ವ್ಯಕ್ತಿಗತ ಸಂಸ್ಥೆಯಾಗದೆ, ಸಾರ್ವಭೌಮ ಪ್ರಾತಿನಿಧಿಕ ಮಂಡಲಿಯಾಗಿ ಎಲ್ಲ ಜಾತಿ–ಮತಗಳಿಂದ ಸಮತಾವಾದಿಗಳನ್ನು, ಬಸವ ತತ್ತ್ವ ನಿಷ್ಠರನ್ನು ಆರಿಸಿಕೊಂಡು ದುಡಿಮೆಗೆ ಕಂಕಣ ಕಟ್ಟಲಿದೆ. ಎಲ್ಲ ಜಿಲ್ಲೆಗಳಿಂದ ಪ್ರತಿನಿಧಿಗಳನ್ನು ಆಯ್ಕೆಮಾಡಿ ವರ್ಷಕ್ಕೊಮ್ಮೆ ಧರ್ಮ ಜಾಗೃತಿಗಾಗಿ ಸಮ್ಮೇಳನವನ್ನು, ಶಿಬಿರಗಳನ್ನು ನಡೆಸುವ ಉದ್ದೇಶ ಹೊಂದಿದೆ. ಉತ್ತಮ–ಸಂಶೋಧನಾತ್ಮಕ ಸಾಹಿತ್ಯವನ್ನು ಪ್ರಕಟಿಸುವ ಉದ್ದೇಶ ಹೊಂದಲಿದೆ.

೨. ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ ರಚನೆ

ಧರ್ಮಪ್ರಸಾರಕರನ್ನು ತರಬೇತಿ ಗೊಳಿಸುವ ಯೋಜನೆಯಾಗಿ ಆರಂಭಗೊಂಡಿರುವ ಧರ್ಮಶಾಸ್ತ್ರ ಪ್ರವೇಶ ತರಗತಿ ಸದ್ಯದಲ್ಲಿ ೧೫ ಜನ ವಿದ್ಯಾರ್ಥಿಗಳಿಗೆ ಅವಕಾಶ ನೀಡಿ, ಬಸವ ಮಂಟಪದಲ್ಲಿ ನಡೆಯುತ್ತಿದೆ. ಈ ವಿದ್ಯಾಲಯಕ್ಕೆ ಒಂದು ಸ್ವತಂತ್ರ ಕಟ್ಟಡ, ಪ್ರಸಾದ ನಿಲಯ ಮತ್ತು ಗ್ರಂಥಾಲಯ ನಿರ್ಮಿಸುವ ಯೋಜನೆ ಇದೆ. ಒಂದು ವರುಷದ ಧರ್ಮಶಾಸ್ತ್ರ ಪ್ರವೇಶ ಡಿಪ್ಲೋಮಾ ನಂತರ, ಧರ್ಮಶಾಸ್ತ್ರ ಪರಿಚಯ ಎಂಬ ಮೂರು ವರುಷಗಳ ಪದವಿಯ ಅಭ್ಯಾಸ ಮಾಡಿಸುವ ಬಯಕೆ ಇದೆ. ಒಂದು ದೊಡ್ಡ ನಿವೇಶನವನ್ನು ಪಡೆದು ಅಲ್ಲಿ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸುವ ಅಭೀಪ್ಸೆಯುಂಟು. ಇಲ್ಲಿ ಕ್ರಮಬದ್ಧವಾಗಿ ಧಾರ್ಮಿಕ ಶಿಕ್ಷಣ ಮತ್ತು ಬೋಧಕ ತರಬೇತಿ ನೀಡುವ ಬೃಹತ್ ಯೋಜನೆ ಇದೆ.

೩. ನಾಡಿನಾದ್ಯಂತ, ಕಡೆಯ ಪಕ್ಷ ಜಿಲ್ಲಾ ಕೇಂದ್ರಗಳಲ್ಲಿ 'ಬಸವ ಮಂಟಪ' ರಚನೆ ಮಾಡುವುದು. ಭಾರತದ ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿ ಬಸವಮಂಟಪ ರಚನೆ ಮಾಡುವುದು.

೪. ಬಸವಣ್ಣನವರ ಮತ್ತು ಇತರ ಶರಣರ ವಚನಗಳನ್ನು, ಭಜನೆಗಳನ್ನು, ಗ್ರಾಮೋಫೋನ್ ಪ್ಲೇಟ್ಸ್ ಮಾಡಿಸುವುದು. (ಅಂದಾಜು ಖರ್ಚು ೫೦೦೦–೦೦)

೫. ಸಾಮೂಹಿಕ ಪ್ರಾರ್ಥನೆಯಲ್ಲಿ ಏಕರೂಪತೆ ತರಲು ಗ್ರಾಮೋಫೋನ್ ಪ್ಲೇಟ್ಸ್ ಮಾಡಿಸುವುದು. (ಅಂದಾಜು ಖರ್ಚು ೫೦೦೦–೦೦)

೬. **"ಬಸವಗೀತೆ"** ಎಂಬ ಬಸವಣ್ಣನವರ ವಚನಗಳನ್ನು ಸಂಕಲನ ಮಾಡಿ, ಪರಿಷ್ಕರಿಸಿ, ಭಾವಾರ್ಥದೊಡನೆ ಕೊಡುವುದು. ಜನಸಾಮಾನ್ಯರೂ ಓದಬಹುದಾದಂತೆ ಕಡಿಮೆ ಬೆಲೆಯಲ್ಲಿ ದೊರೆಯುವಂತೆ ಮಾಡುವುದು. ೧೦,೦೦೦ ಪ್ರತಿಗಳ ಪ್ರಕಟಣೆಗೆ ಅಂದಾಜು ಖರ್ಚು ೧,೦೦೦೦೦ ರೂ. (ಒಂದು ಲಕ್ಷ ರೂ)

೭. "**ಬಸವ ಧರ್ಮ ದರ್ಶನ**" ಎಂಬ ಅಧಿಕೃತ ಧರ್ಮಗ್ರಂಥವನ್ನು ಪ್ರಕಟಿಸುವುದು. ಅಂದಾಜು ವೆಚ್ಚ ಒಂದು ಲಕ್ಷ ರೂಪಾಯಿಗಳು.

೮. ಕರ್ನಾಟಕದ ರಾಜಧಾನಿ ಬೆಂಗಳೂರಲ್ಲಿ ಬಸವ ಧರ್ಮದ ಉಗಮ ಮತ್ತು ಪ್ರಗತಿಯನ್ನು, ವಿವಿಧ ಶರಣರುಗಳ ಜೀವನ-ಸಂದೇಶಗಳನ್ನು ಚಿತ್ರಿಸಬಲ್ಲ ಒಂದು ಮ್ಯೂಸಿಯಮ್ ರಚನೆ.

೯. ಅನಾಥರಾದ ಶ್ರೀಮಂತ ವೃದ್ಧರ ಕ್ಷೇಮ-ಸಂರಕ್ಷಣೆಗಾಗಿ ವೃದ್ಧಾಲಯ ರಚನೆ.

೧೦. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಕ್ಕಳನ್ನು ತರಬೇತಿಗೊಳಿಸಿ ಶಿಕ್ಷಣ ಕೊಡುವ "**ಬಸವ ಗುರುಕುಲ ಸ್ಥಾಪನೆ**"

ಹೀಗೆ ಇನ್ನೂ ಹತ್ತಾರು ಯೋಜನೆಗಳು ಸಂಸ್ಥೆಯ ಕಣ್ಮುಂದೆ ಇವೆ. ಅವು ಸಫಲಗೊಳ್ಳುವುದು ಸಾರ್ವಜನಿಕರ ಔದಾರ್ಯ ಸಹಕಾರಗಳಿಂದ. ಅಂತೆಯೇ ಸಾರ್ವಜನಿಕರಲ್ಲಿ ಒಂದು ಮನವಿ:

ಸಿರಿಬಂದ ಕಾಲದಲಿ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು–ಕೈಲಾಸ
ನೆರೆಮನೆಯುಕ್ಕು ಸರ್ವಜ್ಞ !

ಕಲ್ಯಾಣ ಕಿರಣದೊಡನೆ

'ಸಂದರ್ಶನ'

ನಡೆಸಿದವರು :–ಗೋ. ರು. ಚನ್ನಬಸವಪ್ಪ

ಪ್ರಶ್ನೋತ್ತರ–೧

ಕಲ್ಯಾಣ ಕಿರಣ, ಏಕೆ ನಿನ್ನ ಜನನ ?
ಏಕೆ ಎಂತು ಎಂಬುದೇಕೆ ?
ಜ್ಯೋತಿ ಸಹಜ ಪ್ರೇರಣ !
ಬೇಕು ಬೇಡ ಪ್ರಶ್ನೆಯೇ ?
ಬಸವ ಧರ್ಮ ಕಾರಣ !

ಕಲ್ಯಾಣ ಕಿರಣ ಎತ್ತ ನಿನ್ನ ಪಯಣ?
ಅತ್ತ ಇತ್ತ ಎಂಬುದೇಕೆ ?
ಸುತ್ತಮುತ್ತಲಿಲ್ಲೇ ಇರುವೆ ;
ಕತ್ತಲೆಡೆಗೆ ನಿತ್ಯ ಬೆಳಕ
ಹೊತ್ತು ನಾನು ಸಿದ್ಧವಿರುವೆ !

ಕಲ್ಯಾಣ ಕಿರಣ ಎಲ್ಲಿ ನಿನ್ನ ನಿಲ್ದಾಣ ?
ಅಲ್ಲಿ ಇಲ್ಲಿ ಎಂಬುದೇಕೆ ?
ಎಲ್ಲೆಲ್ಲಿಯೂ ಸುಳಿಯುತಿರುವೆ !
ಸಲ್ಲದಂಥ ನಡೆಗೆ ನುಡಿಗೆ
ಬಿಲ್ಲು ಒಡ್ಡಿ ಬಾಣ ಬಿಡುವೆ !

ಕಲ್ಯಾಣ ಕಿರಣ ಎಂದು ನಿನ್ನ ಮರಣ?
ಅಂದು ಇಂದು ಎಂಬುದೇಕೆ ?
ಎಂದೆಂದೂ ಹೊಂದುತಿರುವೆ ;
ಚಂದ್ರ ಸೂರ್ಯರೊಡನೆ ಇದ್ದು
ಎಂದಿನಂತೆ ಬೆಳಗುತಿರುವೆ !

ಪ್ರಶ್ನೋತ್ತರ–೨

ಕಲ್ಯಾಣ ಕಿರಣ ಹೇಗೆ ನಿನ್ನ ಬಾಲ್ಯ ?
ಹಾಗೆ ಹೀಗೆ ಎಂದೇನಿಲ್ಲ
ಹೇಗಾದರೂ ಆಡಿಕೊಂಡಿರುವೆ !
(ಆಟದಲಿ ಬಿದ್ದರೂ
ಎದ್ದು ಮತ್ತಾಡುವೆ !)
ಹೋಗಿ ಬರುವರನೆಲ್ಲ
ತಾಗಿಕೊಂಡೇ ಇರುವೆ !

ಕಲ್ಯಾಣ ಕಿರಣ ಎಂತು ನಿನ್ನ ಯೌವ್ವನ ?
ಅಂತು ಇಂತು ಎಂತೇನಿಲ್ಲ
ಎಂತಾದರೂ ಹೋರಾಡುವೆ ;
(ನಿಂತು ಕೊಂಡಿದ್ದರೂ
ಬಾಗಿ ಕೈಮುಗಿವೆ !)
ಚಿಂತೆ ಬೆಸನಗಳೆಲ್ಲ ಕಂತೆ ಕಟ್ಟಿಡುವೆ !

ಕಲ್ಯಾಣ ಕಿರಣ ಎಷ್ಟು ನಿನ್ನ ವಾರ್ಧಕ್ಯ ?
ಅಷ್ಟು ಇಷ್ಟು ಎಂದೇನಿಲ್ಲ
ಎಷ್ಟಿದ್ದರೂ ಇಷ್ಟಪಡುವೆ ;
(ಮೃಷ್ಟಾನ್ನವಿದ್ದರೂ
ಶ್ರೇಷ್ಠಬಸವ ನೆನವೆ)
ಸೃಷ್ಟಿ ಸಾರ್ಥಕ ಮಾಡಿ
ಸ್ಪಷ್ಟವಾಗಿರುವೆ !

(ಸಂದರ್ಭ : **ಕಲ್ಯಾಣ ಕಿರಣ ಬಿಡುಗಡೆಯ ಸಮಾರಂಭದಲ್ಲಿ ೨—೧೦—೭೭ ರಂದು**)

ವೀರಶೈವರು ಮತ್ತು ಹೊಸ ಸಮಾಜ ವ್ಯವಸ್ಥೆ

೧೫-೮-೭೭ **ಹಳಪೇಟೆ ಚಿಂತಾಮಣಿ, ಧಾರವಾಡ.**

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ವಿಶ್ವ ಕಲ್ಯಾಣ ಮಿಷನ್ನಿನ ಆಶ್ರಯದಲ್ಲಿ ನಡೆದ ಈ ಧಾರ್ಮಿಕ ವಿಚಾರ ಗೋಷ್ಠಿಗಳ ಕೊನೆಯ ಹಂತದ ಇಂದಿನ ಗೋಷ್ಠಿಯಲ್ಲಿ ವಿಷಯ ಮಂಡಿಸುವ ಅವಕಾಶ ನನಗೆ ದೊರತಿದೆ. ಆದಕ್ಕಾಗಿ ಇದರ ಸಂಚಾಲಕರಿಗೆ ಮೊದಲೇ ನಾನು ಧನ್ಯವಾದಗಳನ್ನರ್ಪಿಸುವೆ.

ಇಂದಿನ ಮನ್ವಂತರದಲ್ಲಿ ಕ್ರಾಂತಿಕಾರೀ ಬಸವ ತತ್ವದ ತಳಹದಿಯ ಮೇಲೆ ಹೊಸ ಸಮಾಜ ನಿರ್ಮಾಣ ಮಾಡುವ ವಿಚಾರಕ್ಕೆ ಮುನ್ನ, ಇದು ಧಾರ್ಮಿಕ ವಿಚಾರ ಗೋಷ್ಠಿಯಾದುದರಿಂದ ಧರ್ಮದ ಬಗ್ಗೆ, ಧರ್ಮದ ನಿನ್ನೆ, ಇಂದು, ನಾಳೆಗಳ ಬಗ್ಗೆ ಮಾಡುವುದು ಅಪ್ರಸ್ತುತವಾಗಲಿಕ್ಕಿಲ್ಲ.

ಇಂದು ಕುಡಿಗಟ್ಟಿದ ಧರ್ಮಜ್ಯೋತಿಯನ್ನು ಪ್ರಜ್ವಲಿಸುವಂತೆ ಮಾಡಬೇಕಾದರೆ ಅದರ ನಿಜ ಸ್ಥಿತಿಯನ್ನು ಮೊದಲು ತಿಳಿದುಕೊಳ್ಳುವದವಶ್ಯ. ನಮ್ಮ ದೇಶದಲ್ಲಿ ಧರ್ಮವೆಂದರೆ ಅದೊಂದು ಜೀವನದ ಕ್ರಮ ಎಂದಿದ್ದುದು ಹೋಗಿ, ಧರ್ಮವೆಂದರೆ ಕೇವಲ ರೂಢಿಗಳು, ಕರ್ಮ ಕಾಂಡಗಳು ಎಂಬ ಭಾವನೆಯು ಅದು ಹೇಗೋ ಬಂದು ಬಿಟ್ಟಿದೆ. ಇದರಿಂದ ಧರ್ಮವು ಕ್ಷೀಣವಾಗಿದೆ. ಕೆಲವೆಡೆ ವಿಕೃತವಾಗಿದೆ. ಹೀಗಾಗೆ ಧರ್ಮವು ನಾಸ್ತಿಕತೆಕ್ಕಿಂತ ಹೆಚ್ಚಿನ ಕೇಡಿಗೆ ಕಾರಣವಾಗುತ್ತಿದೆ. ಅಧರ್ಮವೇ ಧರ್ಮದ ಹೆಸರಿನಲ್ಲಿ ಮೆರೆಯುವಂತಾಗುತ್ತಿದೆ. ಇಂಥದನ್ನು ಹೋಗಲಾಡಿಸಿ ನಿಜವಾದ ಧರ್ಮದ ಬಗ್ಗೆ ಜನರಲ್ಲಿ ಜಾಗ್ರತ ಮಾಡುವ ಕಾರ್ಯವನ್ನು ಆತ್ಮಾನುಭೂತಿ ಪಡೆದವರು (ಸ್ಪಿರಿಚುಯಾಲಿಸ್ಟ್ಸ) ಮಾಡಬೇಕಾಗುತ್ತದೆ. ಧರ್ಮ ಜಾಗೃತಿ ಮಾಡುವ ಶಕ್ತಿಯು ಅಂಥವರಲ್ಲಿ ಇರುತ್ತದೆ.

ಧರ್ಮ ಜಾಗೃತಿ ಮಾಡುವ ಶಕ್ತಿಯನ್ನು ಅನೇಕರು ಧರ್ಮಗ್ರಂಥಗಳಲ್ಲಿ ಹುಡುಕುತ್ತಾರೆ. ಅಂತೆಯೇ ಧರ್ಮ ಗ್ರಂಥಗಳುನ್ನು ಸೃಷ್ಟಿಸಿ ಜನರನ್ನು ದಿಕ್ಕು ಗೆಡಿಸುವ ಪ್ರಯತ್ನ ನಡೆಯುತ್ತದೆ, ಅಥವಾ ಇದ್ದ ಧರ್ಮ ಗ್ರಂಥಗಳನ್ನು ತಿದ್ದಿ ತಮಗೆ ಬೇಕಾದುದನ್ನು ಅದರಲ್ಲಿ ತುರುಕುವ ಪ್ರಯತ್ನ ನಡೆಯುತ್ತದೆ. ಋಗ್ವೇದದ ಒಂದು ಸಾಲಿನಲ್ಲಿ (× 18+7) ಅಗ್ರೇ ಎಂದಿದ್ದುದನ್ನು ತಿದ್ದಿ, ಅಗ್ನೆ ಎಂದು ಮಾಡಿ ವಿಧವೆಯನ್ನು ಗಂಡನ ಚಿತೆಯಲ್ಲಿ ಸುಡುವ ರೂಢಿ ಪ್ರಾರಂಭಿಸಿದ್ದು, ಅಂಥದನ್ನೇ ಹೇಳುತ್ತದೆ. ಅಂತೆಯೇ ಶಿವಶರಣರು ಗ್ರಂಥ ಪ್ರಮಾಣ, ಆಪ್ತವಾಕ್ಯ ಪ್ರಮಾಣ, ಬಾಬಾ ವಾಕ್ಯ

ಪ್ರಮಾಣಗಳಂಥ ವೈದಿಕ ಧರ್ಮ ಪ್ರಮಾಣಗಳನ್ನು ತಿರಸ್ಕರಿಸಿ "ದೇವ ನೀನೇ ಪ್ರಮಾಣ" ಎಂದು ಅನುಭವ ಪ್ರಮಾಣವನ್ನು ಎತ್ತಿ ಹಿಡಿದರು.

ಜಾಗೃತ ಧರ್ಮ ಶಕ್ತಿಯು ಧಾರ್ಮಿಕ ರೂಢಿಗಳಲ್ಲಿ, ಸಂಸ್ಕಾರಗಳಲ್ಲಿ, ಧಾರ್ಮಿಕ ಸಂಸ್ಥೆಗಳಲ್ಲಿ, ಧರ್ಮಕ್ಕೆ ಬೆಂಬಲ ಕೊಡಬಹುದಾದ ರಾಜ್ಯ ಸಂಸ್ಥೆಯಲ್ಲಿಯೂ ಇರುವುದಿಲ್ಲ. ಧಾರ್ಮಿಕ ಜೀವನಕ್ಕೆ ಇವೆಲ್ಲವುಗಳೂ ನೆರವು ನೀಡಬಹುದು. ಸಮಾಜದಲ್ಲಿ ಧಾರ್ಮಿಕ ವಾತಾವರಣವನ್ನು ಕಾಯ್ದುಕೊಂಡು ಹೋಗುವದಕ್ಕೆ ಇವುಗಳ ಪ್ರಯೋಜನವಿರಬಹುದು. ಆದರೆ ಧರ್ಮದ ಮೂಲಶಕ್ತಿಯು, ಧರ್ಮ ಪ್ರಾಣವು ಮಹಾತ್ಮರನ್ನೇ ಆಶ್ರಯಿಸಿರುತ್ತದೆ. ಧರ್ಮದ ಮೂಲ ಆಧಾರವು ಮನುಷ್ಯನ ಹೃದಯವೇ ಆಗಿದೆ. "ಧರ್ಮಶಾಸ್ತ್ರಂ ಮಹರ್ಷೀಣಾಂ ಅಂತಃಕರಣ ಸಂಭೃತಂ" ಎಂದು ಉಪನಿಷತ್ತಿನಲ್ಲಿ ಹೇಳಿದ್ದು ಯಥಾರ್ಥವಾಗಿದೆ. ಬಸವಣ್ಣನವರು "ದಯವೇ ಧರ್ಮದ ಮೂಲವಯ್ಯಾ" ಎಂದು ಹೇಳಿದ್ದಾರೆ. ದಯವು ಹೃದಯದಿಂದ ಬರುತ್ತಿರುವದರಿಂದಲೇ ಬಸವಣ್ಣನವರು ಹೇಳಿದ ಧರ್ಮಕ್ಕೆ 'ಹೃದಯ ಧರ್ಮ' ಎಂದು ಹೇಳುತ್ತಾರೆ.

ಹೃದಯ ಧರ್ಮವು ಬುದ್ಧಿ ಪ್ರಧಾನ ಜನರ ಮಧ್ಯದಲ್ಲಿ ಸಿಕ್ಕಾಗ ಅದು ಶಿಷ್ಟ ಮಾನ್ಯವಾಗುತ್ತದೆ. ಆಗ ಧರ್ಮದ ಸಂಸ್ಥೀಭವನವಾಗುತ್ತದೆ. ಒಂದು ಚೌಕಟ್ಟಿನ ಬಂಧನಕ್ಕೊಳಗಾಗುತ್ತದೆ. ಮುಂದೆ ಧರ್ಮಶಾಸ್ತ್ರಗಳು, ದರ್ಶನ ಶಾಸ್ತ್ರಗಳು, ನಿರ್ಮಾಣವಾಗುತ್ತವೆ. ಆ ಶಾಸ್ತ್ರಗಳ ಅರ್ಥ ಮಾಡುವ ಮೀಮಾಂಸೆಗಳು ಹುಟ್ಟುತ್ತವೆ. ಅಂತಿಮ ನಿರ್ಣಯ ಕೊಡುವಂಥ ಶಾಸ್ತ್ರಜ್ಞ ವರ್ಗ ತಯಾರಾಗುತ್ತದೆ. ಅಥವಾ ಅಧಿಕಾರ ರೂಢ ವ್ಯಕ್ತಿಗಳನ್ನು ಸಮಾಜವು ಸ್ವೀಕರಿಸುತ್ತದೆ. ಇದರಿಂದ ಹೃದಯ ಧರ್ಮವು ಹೃದಯದಿಂದ ತಲೆಯ ಅಂಕಿತಕ್ಕೆ ಹೋಗುತ್ತದೆ. ಹೃದಯ ಪೀಠದಿಂದ ಪದಚ್ಯುತವಾದ ಧರ್ಮವು ತನ್ನ ಭವಿಷ್ಯೋನ್ಮುಖ ದೃಷ್ಟಿ ಕಳೆದುಕೊಂಡು ಶಿಷ್ಟ ಮಾನ್ಯತೆಯ ಸೋಗಿನಲ್ಲಿ ಮೆರೆಯ ಹತ್ತುತ್ತದೆ. ಆಗ ಅತಿ ಬುದ್ಧಿವಂತರು ತಮಗೆ ಬೇಕಾದುದೆಲ್ಲವನ್ನೂ ಧರ್ಮ ಹೇಳುತ್ತದೆಂದು ಬುದ್ಧಿಯ ಒತ್ತಾಯದಿಂದ, ತರ್ಕದ ಮೋಡಿಯಿಂದ ಜನ ಸ್ವೀಕರಿಸುವಂತೆ ಮಾಡಬಹುದಾಗಿದೆ. ಹೃದಯ ಧರ್ಮವು ಮಲಿನವಾಗುವುದಕ್ಕೂ ವಿಕೃತವಾಗುವುದಕ್ಕೂ ಇದೇ ಕಾರಣ.

ಧರ್ಮವು ಹೃದಯ ಸಿಂಹಾಸನದಿಂದ ಕೆಳಗಿಳಿದಾಗ, ಧರ್ಮತೇಜವು ಕಳೆಗುಂದುತ್ತಿರುತ್ತದೆ. ಹಾಗಾದಾಗ ಧರ್ಮೈಕ ಪರಾಯಣರನ್ನು ಹಿಂದೆ ಸರಿಸಿ, ಧರ್ಮಮಾರ್ತಾಂಡರು ಮುಂದೆ ಬರುತ್ತಾರೆ. ಅವರು ಜನ ಸಾಮಾನ್ಯರಲ್ಲಿ ಮತಾಂಧತೆಯನ್ನು ತುಂಬುತ್ತಾರೆ. ಧರ್ಮವು ಜಾತಿಯ ಮಟ್ಟಕ್ಕಿಳಿದಾಗಲಂತೂ ಜಾತ್ಯಾಂಧತೆಗೆ ಮಹಾ ಪೂರ ಬರುತ್ತದೆ. ಹೂವಿನ ಮಾಲೆಯು ಮುಕುಟವೇರುವಾಗ, ನಾರೂ

ವಿರುವಂತೆ ಸಾರ್ವಭೌಮ ಶಕ್ತಿ ಪಡೆದ ಧರ್ಮದ ಸಂಪರ್ಕದಲ್ಲಿ ಬಂದ ಜಾತಿಯೂ ಅಭಿಮಾನದ ಆವರಣದ, ದುರಭಿಮಾನದ ಆಧಾರ ಸ್ಥಂಭವಾಗಬಹುದಾಗಿದೆ. ಧೂರ್ತ ಮತಾಂಧರು ಎಂಥ ಚತುರ ಧರ್ಮ ತಜ್ಞರನ್ನೂ ಹಿಂದೆ ಸರಿಸಿ ಸಮಾಜದಲ್ಲಿ ಸಂಶಯದ ವಾತಾವರಣವನ್ನು ಹುಟ್ಟಿಸಿ ತಮ್ಮ ಕೈ ಚಳಕ ಸಾಧಿಸಬಹುದಾಗಿದೆ. ಆಗ ಸಾಮಾಜಿಕ ಕ್ಷೇತ್ರದಲ್ಲಿ ವಿಗ್ರಹದ ವಾತಾವರಣ ನಿರ್ಮಾಣ ಆಗುತ್ತದೆ. ಪುರುಷರ ವಿರುದ್ಧ ಸ್ತ್ರೀಯರು, ವೃದ್ಧರ ವಿರುದ್ಧ ಯುವಕರು, ಶ್ರೀಮಂತರ ವಿರುದ್ಧ ಬಡವರು, ಬಂಡವಾಳಿಗರ ವಿರುದ್ಧ ಕೂಲಿಕಾರರು, ಒಂದು ಜಾತಿಯವರ ವಿರುದ್ಧ ಇನ್ನೊಂದು ಜಾತಿಯವರು ಸೆಣಸಾಟಕ್ಕಿಳಿಯುವ ದೃಶ್ಯವು ಸಾಮಾನ್ಯವಾಗುತ್ತದೆ ಆಗ. ಜಾತ್ಯತೀತತೆಯನ್ನು ಧ್ಯೇಯವೆಂದು ಸ್ವೀಕರಿಸಿದ ಈ ದೇಶದಲ್ಲಿ ಜಾತೀಯ ಆಧಾರದ ಮೇಲೆ ಎಲ್ಲ ನಡೆದಿರುವದೇ ಅಂಥ ವಿಕೃತ ಸಮಾಜ ನಿರ್ಮಾಣಕ್ಕೆ ಉದಾಹರಣೆ.

ಸಮಾಜದ ಪ್ರಗತಿಗೆ ಆತಂಕವಾಗಿರುವ ಹಳೆಯದೆಲ್ಲವನ್ನೂ ಕೊಚ್ಚಿ ಒಗೆದು, ಹೊಸ ಸಮಾಜ ನಿರ್ಮಿಸುವ ವಿಚಾರವೀಗ ಮುಂದೆ ಬಂದಿದೆ. ಆದರೆ ಹಳೆಯದರ ಸ್ಥಳವನ್ನು ತುಂಬದೇ ಹಾಗೇ ಬಿಟ್ಟರೆ ಅನಾಹುತಗಳು ಸಂಭವಿಸಬಹುದಾಗಿದೆ. ಅದಕ್ಕಾಗಿ ಯಾವ ಹೊಸದನ್ನು ತರಬೇಕೆಂಬುದನ್ನು ಮೊದಲೇ ನಿರ್ಧರಿಸಿ ಮುಂದಿನ ಹೆಜ್ಜೆ ಇಡಬೇಕಾಗುತ್ತದೆ. ಈಗ ಈ ದೇಶದಲ್ಲಿ ಹೊಸ ಸಮಾಜ ವ್ಯವಸ್ಥೆ ಬರಬೇಕೆನ್ನುವವರು ಕೇವಲ ಒಂದೇ ಸಮಾಜದವರಲ್ಲ. ಇಡೀ ಭಾರತೀಯ ಜನಾಂಗವೇ ಹೊಸ ಸಮಾಜ ವ್ಯವಸ್ಥೆಯನ್ನು ಬಯಸುತ್ತದೆ. ಸಮಾಜ ವ್ಯವಸ್ಥೆಯ ಸದ್ಯದ ಯುಗಕಲ್ಪನೆಯನ್ನೂ ಗಮನಿಸಿ ನಾವು ಬಸವ ತತ್ವದ ತಳಹದಿಯ ಮೇಲೆ ಹೇಗೆ ಸಮಾಜ ವ್ಯವಸ್ಥೆಯನ್ನು ಪುನರ್ರಚಿಸಬಹುದೆಂಬ ಆಲೋಚನೆ ಮಾಡಬೇಕು. ಬಸವಣ್ಣನವರು ಹೊಸ ಸಮಾಜ ನಿರ್ಮಿಸಿ ಆದರಂತೆ ಸಮಾಜ ವ್ಯವಸ್ಥೆ ಇರಬೇಕೆಂದು ಹೇಳಲಿಲ್ಲ. ಕ್ರೂರ ಸಮಾಜ ವ್ಯವಸ್ಥೆಯನ್ನೆದುರಿಸುತ್ತಲೇ ಯುಗಕಲ್ಪನೆಯ ವ್ಯವಸ್ಥೆಯಂತೆ ಇರಲು ಮೊದಲು ಪ್ರಾರಂಭಿಸಿದರು. ಆಮೇಲೆ ಅದು ತಾನೇ ಸ್ಥಿರಗೊಳ್ಳುವಂತೆ ವ್ಯವಸ್ಥೆಗೆ ರೂಪ ಕೊಟ್ಟಿದ್ದರೆಂಬುದನ್ನು ನಾವು ಗಮನಿಸಬೇಕು.

ಸಮಾಜ ವ್ಯವಸ್ಥೆಯ ಮೂಲಭೂತ ಅಂಶಗಳೆಂದರೆ ದೇವರು, ಧರ್ಮ, ಜೀವನ, ತತ್ವ ಜ್ಞಾನಗಳೇ ಆಗಿವೆ. ಸಮಾಜ ಜೀವನವು ಒಂದು ವ್ಯವಸ್ಥೆಯಿಂದ ಇನ್ನೊಂದು ಉನ್ನತತರ ವ್ಯವಸ್ಥೆಗೆ ಮಾರ್ಪಡುವಾಗ ಈ ಮೂಲ ಭೂತ ಅಂಶಗಳನ್ನು ಗಮನಿಸಲೇ ಬೇಕಾಗುತ್ತದೆ. ಬಸವಣ್ಣನವರು ಅವರ ಕಾಲದ ಕ್ರೂರ ಸಮಾಜ ವ್ಯವಸ್ಥೆಯಿಂದ ಪಾರಾಗಬೇಕಾದರೆ ಮೊದಲನೆಯದಾಗಿ ಕಲ್ಪನೆಯ ದೇವತೆಯ ಸ್ಥಳದಲ್ಲಿ ಸರಿಯಾದ ದೇವರ ಕಲ್ಪನೆ ಕೊಟ್ಟರು. ಎರಡನೆಯದಾಗಿ ಧರ್ಮವನ್ನು ಸಾಮಾಜಿಕ ನೀತಿಯ ತಳಹದಿಯ ಮೇಲೆ ನಿಲ್ಲಿಸಿದರು. ಮೂರನೆಯದಾಗಿ ಜೀವನ ತತ್ವಜ್ಞಾನದಲ್ಲಿ

ತೀವ್ರ ಕ್ರಾಂತಿಮಾಡಿ ವೈದಿಕ ತತ್ವಜ್ಞಾನದ ಸ್ಥಳದಲ್ಲಿ ಅನುಭಾವ ತತ್ವಜ್ಞಾನವನ್ನು ಅಳವಡಿಸಿದರು. ಅವರ ಸಾಮಾಜಿಕ ಕ್ರಾಂತಿಯ ಕೊನೆಯ ಹಂತದಲ್ಲಿ ಉದ್ರಿಕ್ತ ಸ್ಥಿತಿ ಪ್ರಾಪ್ತವಾದ್ದರಿಂದ ಹಿಂಸೆಯ ಕಾಂಡವು ನಡೆದು ಅವರ ಹೊಸ ಸಮಾಜ ವ್ಯವಸ್ಥೆ ಸ್ಥಿರ ಗೊಳ್ಳಲಿಲ್ಲ. ಯಾವುದೇ ಕ್ರಾಂತಿಯ ಕಾಲಕ್ಕೆ ಹಿಂಸೆ ಪ್ರವೇಶವಾದರೆ ಅದರ ನಂತರದ ಸಮಾಜ ವ್ಯವಸ್ಥೆಯಲ್ಲಿ ಶುದ್ಧತೆ ಉಳಿಯುವದಿಲ್ಲವೆಂಬುದನ್ನು ಕ್ರಾಂತಿಗಳ ಇತಿಹಾಸವೇ ಹೇಳುತ್ತದೆ.

ರಷ್ಯಾ ದೇಶದ ಸಾಮಾಜಿಕ ಕ್ರಾಂತಿಯಿಂದಾದ ಸಮಾಜವಾದೀ ಸಮಾಜ ವ್ಯವಸ್ಥೆಯು ನಮಗೆ ಆಕರ್ಷಕವಾಗಿ ಕಂಡಾಗ, ನಮ್ಮ ದೇಶದ ಈ ಕ್ರೂರ ವ್ಯವಸ್ಥೆಯಲ್ಲಿ ಕ್ರಾಂತಿಕಾರೀ ಬದಲಾವಣೆ ತರಬಯಸಿದ ಯುವಕರಲ್ಲಿಯೂ ಕೂಡ ಹೊಸ ವ್ಯವಸ್ಥೆಯ ಬಗ್ಗೆ ಆಸ್ಥೆ ಮೂಡಿತು. ಇಂದಿನ ಮಹಾ ಕವಿ ಬೇಂದ್ರೆಯವರು ತಮ್ಮ ತಾರುಣ್ಯದ ಹುಮ್ಮಸ್ಸಿನಲ್ಲಿ "ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಕ್ಕಿ" ಕವನ ಕಟ್ಟಿ ಹಾಡಿದರು. "ಆರೋಗ್ಯಕರವಾದ ಸಮಾಜ ಸೃಷ್ಟಿಗೆ ಕಲ್ಪನೆಯ ದೇವರು ಅಪಾಯಕಾರಿ" ಅನ್ನುವ ರಶಿಯನ್ನರ ಸಂಪರ್ಕ ಬಂದಾಗಲೂ ದೇವರ ಗೋರಿ ಕಟ್ಟುವದು ಈ ದೇಶದಲ್ಲಿ ಎಷ್ಟು ಕಠಿಣವಿದೆ ಎಂಬುದು ಅನುಭವಕ್ಕೆ ಬರುತ್ತಿದೆ. ಇಂದಿಗೆ ಎಂಟುನೂರು ವರುಷಗಳ ಹಿಂದೆ ಬಸವಣ್ಣನವರು ದೇವರ ಬಗ್ಗೆ ಸರಿಯಾದ ಕಲ್ಪನೆ ಕೊಟ್ಟುದನ್ನು ಜೀವಂತವಾಗಿ ಉಳಿಸಿಕೊಂಡು ಬಂದ ವೀರಶೈವ ಸಮಾಜವು ಈಗ ಮುಂದಾಗುತ್ತಿರುವದು ಶುಭ ಸೂಚನೆಯೇ ಆಗಿದೆ. ಹೊಸ ಸಮಾಜ ವ್ಯವಸ್ಥೆಯ ಆದರ್ಶವನ್ನು ವೀರಶೈವರು ತೋರುವಲ್ಲಿ ಸಮರ್ಥರಾದರೆ ಇಡೀ ಭಾರತವೇ ಅದನ್ನು ಸ್ವೀಕರಿಸುವದರಲ್ಲಿ ಸಂಶಯವಿಲ್ಲ.

ದೇವರ ವಿಷಯದಲ್ಲಿ ಬಸವಣ್ಣನವರ ನಿಲುವು ಹೆಚ್ಚು ಸ್ಪಷ್ಟವಿರುವುದಾದರೂ ಧರ್ಮದ ವಿಷಯವಾಗಿ, ಧಾರ್ಮಿಕ ಮೌಲ್ಯಗಳ ವಿಷಯವಾಗಿ ಜನಸಾಮಾನ್ಯರಲ್ಲಿ ಅಷ್ಟು ಸ್ಪಷ್ಟ ಕಲ್ಪನೆಯಿದ್ದದ್ದು ವಸ್ತು ಸ್ಥಿತಿಯಲ್ಲಿ ಎದ್ದು ಕಾಣುವದಿಲ್ಲ. ವೈದಿಕ ಧರ್ಮದವರ ಧರ್ಮ ಕಲ್ಪನೆಗೂ, ಶಿವಶರಣರ ಧರ್ಮ ಕಲ್ಪನೆಗೂ ವ್ಯತ್ಯಾಸವಿದೆ. ಎಂಟುನೂರು ವರುಷಗಳ ಹಿಂದೂ ವ್ಯತ್ಯಾಸವಿತ್ತು, ಈಗಲೂ ಇದೆ. ಶರಣರು ಧರ್ಮವೆಂದರೆ ಜನಜೀವನದ ಒಂದು ರೀತಿ ಅನ್ನುತ್ತಿದ್ದರೆ, ವೈದಿಕರು ಹಾಗೆ ತಿಳಿಯುವದಿಲ್ಲ. ಅವರದು ರೂಢಧರ್ಮವಾಗಿದೆ. ವೈದಿಕ ಧರ್ಮಕ್ಕೆ ಎಲ್ಲವೂ ಶ್ರುತಿ, ಸ್ಮೃತಿ, ಪುರಾಣೋಕ್ತವಿರಬೇಕೆಂದಿದ್ದರೆ, ಶರಣರಿಗೆ ಎಲ್ಲವೂ ಅನುಭವಕ್ಕೆ ಬರುವಂಥದಿರಬೇಕಾಗುತ್ತದೆ. ಇದು ನೀತಿಯ ಕಲ್ಪನೆಯಲ್ಲಿ ಒಡೆದು ಕಾಣುತ್ತದೆ. ವೈದಿಕರದು ಧಾರ್ಮಿಕ ನೀತಿಯಾದರೆ, ಶರಣರದು ಸಾಮಾಜಿಕ ನೀತಿಯಾಗಿರುತ್ತದೆ. ಧಾರ್ಮಿಕ ನೀತಿಯು ಒಡೆಯ ನೀತಿ, ದಾಸ ನೀತಿ ಎಂದು ಭೇದ ಮಾಡುತ್ತದೆ. ಸಾಮಾಜಿಕ

ನೀತಿಯು ಎಲ್ಲರಿಗೂ ಒಂದೇ ನೀತಿ ಎಂದು ಹೇಳುತ್ತದೆ. ಈ ಭೇದವನ್ನು ಒಡೆದು ಹೇಳುವಂತೆಯೇ ಬಸವಣ್ಣನವರು ಕೇಳುತ್ತಾರೆ "ಏನಯ್ಯಾ ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ ? ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!" ಇಂದು ಬಸವಣ್ಣನವರು ಹೇಳಿದ ಸಾಮಾಜಿಕ ನೀತಿಯ ನೆಲೆಗಟ್ಟೇ ಹೊಸ ಸಮಾಜ ವ್ಯವಸ್ಥೆಗೆ ಭದ್ರವಾದ ಬುನಾದಿಯನ್ನೊದಗಿಸುತ್ತದೆ.

ಬಸವ ಯುಗದ ಪೂರ್ವದಲ್ಲಿದ್ದ ಜೀವನ ತತ್ವಜ್ಞಾನವು ,ಸಮಾಜ ವ್ಯವಸ್ಥೆಯಲ್ಲಿನ ಮೇಲು-ಕೀಳು, ಒಡೆಯ-ದಾಸ; ಸೇವ್ಯ-ಸೇವಕ ಎಂಬ ಸಾಮಾಜಿಕ ವಿಷಮತೆಗಳನ್ನು ಸಮರ್ಥಿಸುತ್ತಿತ್ತು. ಬಸವಣ್ಣನವರ ಜೀವನ ತತ್ವಜ್ಞಾನವು ಅಂಥದೆಲ್ಲವನ್ನೂ ಖಂಡಿಸುತ್ತದೆ. ಒಂದೇ ನೀತಿ, ಒಬ್ಬನೇ ದೇವರು ಎಂದು ದೃಢವಾಗಿ ನಂಬಿ, ಸಮಾಜ ವ್ಯವಸ್ಥೆಯಲ್ಲಿ ವರ್ಣವಿರುವದಾದರೆ ಒಂದೇ ವರ್ಣವಿರಬೇಕು; ವರ್ಗವಿರುವದಾದರೆ ಒಂದೇ ವರ್ಗವಿರಬೇಕು; ಎಂದು ಬಸವ ತತ್ವಜ್ಞಾನವು ಪ್ರತಿಪಾದಿಸುತ್ತದೆ. ಇಂದಿಗೂ ಕೂಡ ಸಾಮಾಜಿಕ ಜ್ಞಾನದ ಮೂಲಭೂತ ಅಂಶಗಳನ್ನು ಗಮನಿಸುವದಾದರೆ ಅದು ಏನು ಹೇಳುತ್ತದೆಂಬುದನ್ನು ನೋಡಬೇಕು. "ಸಮಾಜದ ಒಂದು ಗುಂಪು ಇನ್ನೊಂದು ಗುಂಪನ್ನು ದಾಸ್ಯದಲ್ಲಿಟ್ಟುಕೊಂಡು ಬಾಳುತ್ತಿದ್ದರೆ, ಅಂಥ ಸಮಾಜದ ಮೇಲ್ವರ್ಗಕ್ಕೆ ಮಾನ್ಯವಿದ್ದ ಧರ್ಮದಲ್ಲಿ, ತತ್ವಜ್ಞಾನದಲ್ಲಿ, ವಾಙ್ಮಯದಲ್ಲಿ, ದಾಸ್ಯವನ್ನು ಸಮರ್ಥಿಸುವ ಮಾತುಗಳಿದ್ದೇ ಇರುತ್ತವೆ." ಬಸವ ತತ್ವಜ್ಞಾನದಲ್ಲಿ ದಾಸ್ಯವನ್ನು ಸಮರ್ಥಿಸುವ ಒಂದೂ ಮಾತಿರುವದಿಲ್ಲವೆಂಬುದು ಗಮನಾರ್ಹವಾಗಿದೆ. ಅಂತೆಯೇ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಹೊಸತನ ಬರಬೇಕಾದರೆ ಅದಕ್ಕೆ ಬಸವ ತತ್ವದ ತಳಹದಿಯು ಅವಶ್ಯವಾಗಿದೆ. ಅಲ್ಲದೇ ಅದು ಐತಿಹಾಸಿಕ ಅವಶ್ಯಕತೆಯೂ ಆಗಿದೆ.

'ಹೌದು, ಇದೆಲ್ಲ ಸರಿ. ಪ್ರತಿಪಾದನೆಯು ಸೂಕ್ತವಾಗಿದೆ'. ಆದರೆ ಅದನ್ನು ಸಂಘಟಿತ ಪ್ರಯತ್ನದಿಂದ ಕಾರ್ಯಾಚರಣೆಗಿಳಿಸುವ ಯೋಜನೆಯೇ ಇದರಲ್ಲಿಲ್ಲವಲ್ಲ ; ಎಂಬ ಶಂಕೆ ಅನೇಕರಲ್ಲಿ ಬರಬಹುದಾಗಿದೆ. ಕಾಯಿದೆಯನ್ನು ಮಾಡುವಾಗ, ಯೋಜನೆಯನ್ನು ಮಾಡುವಾಗ, ಮೊದಲು ಅದರ ಉದ್ದೇಶವನ್ನು ನಿರ್ಧರಿಸಬೇಕಾಗುತ್ತದೆ. ಅದಾದ ಮೇಲೆ ಅವೆಲ್ಲ ಬರುತ್ತವೆ. ಒಂದು ವಾಙ್ಮಯದ ವಿಷಯವನ್ನೇ ತೆಗೆದುಕೊಳ್ಳೋಣ. ಹಿಂದಿನ ವಾಙ್ಮಯದಲ್ಲಿ ದಾಸ್ಯವನ್ನು ಸಮರ್ಥಿಸುವ ಮಾತುಗಳಿದ್ದವೆಂತಲೇ ಸಾಹಿತ್ಯದಲ್ಲಿ ಕ್ರಾಂತಿಕಾರೀ ಬದಲಾವಣೆ ಮಾಡಿ ವಚನ ವಾಙ್ಮಯವು ಹುಟ್ಟಿಬಂದಿತೆಂಬುದನ್ನು ನಾವು ಗಮನಿಸಬೇಕು. ಶತಮಾನಗಳಿಂದಲೂ ದೇವವಾಣಿ ಎಂದು ಗಣನೆಯಾಗುತ್ತಿದ್ದುದಕ್ಕೆ ಜನವಾಣಿಯಾಗುವುದು ಸಾಧ್ಯವಾದಾಗ ಶರಣರು ಜನವಾಣಿಯನ್ನೇ ದೇವವಾಣಿಯನ್ನಾಗಿ ಪರಿವರ್ತಿಸಬೇಕಾಯಿತೆಂಬ ಮಾತಿನ ಅಂತರಾರ್ಥವು ಅದೇ ಆಗಿದೆ.


ಇಂದು ಜಾಗತಿಕ ರಂಗದಲ್ಲಿ ಒಂದು ವರ್ಗವು ಇನ್ನೊಂದು ವರ್ಗದ ಸುಲಿಗೆ, ದಾಸ್ಯಗಳಿಂದ ಮುಕ್ತವಾಗಲು ವರ್ಗಕಲಹದ ಮಾರ್ಗ ಅನುಸರಿಸಲಾಗುತ್ತದೆ. ಇದರಿಂದ ಅವರ ಧ್ಯೇಯವು 'ಆದಷ್ಟು ಹೆಚ್ಚು ಜನರಿಗೆ ಆದಷ್ಟು ಹೆಚ್ಚಿನ ಸುಖ' ಎಂಬುದಾಗಿದೆ. ಶಿವಶರಣರ ಧ್ಯೇಯವು ಸಕಲ ಪ್ರಾಣಿಗಳಿಗೆ ಲೇಸನ್ನು ಬಯಸುವದಾಗಿದೆ; ಅದಕ್ಕಾಗಿ ಅವರ ತತ್ವಾನುಷ್ಠಾನವೇ ಬೇರೆಯಾಗಿದೆ. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ದಾಸ್ಯಕ್ಕೆ ಅಥವಾ ಸುಲಿಗೆಗೆ ಒಳಗಾಗದ ಸಮಾಜ ವ್ಯವಸ್ಥೆಯನ್ನು ಅವರು ರೂಪಿಸಿದ್ದಾರೆ. ಅದಕ್ಕಾಗಿ ವ್ಯಕ್ತಿಯ ಅಂತರಂಗ ಶುದ್ಧಿಗೆ ಹೆಚ್ಚು ಮಹತ್ವ ಕೊಡಲಾಗಿದೆ. ವ್ಯಕ್ತಿಯ ಬಹಿರಂಗವು ಶುದ್ಧವಾಗಬೇಕಾದರೆ ಮೊದಲು ಅವನ ಅಂತರಂಗ ಶುದ್ಧವಾಗಿರಬೇಕೆಂಬುದನ್ನು ಹೇಳಿ, ಅದನನ್ನುಸರಿಸುವ ಕ್ರಮದ ವಿವರಣೆಯ ಕೊನೆಗೆ ಇದೇ ಅಂತರಂಗ ಶುದ್ಧಿ 'ಇದೇ ಬಹಿರಂಗ ಶುದ್ಧಿ' ಎಂದು ಶರಣ ಮಣಿಮಾಲೆಯ ಮೇರುಮಣಿಗಳಾದ ಬಸವಣ್ಣನವರು ಹೇಳಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯ ಅಂತರಂಗ ವಿಕಾಸವೇ ಸಮಾಜ ವಿಕಾಸವಾಗಿರುತ್ತದೆ. ವ್ಯಕ್ತಿಯನ್ನು ಕಡೆಗಣಿಸಿ ಸಮಾಜವನ್ನು ಕಲ್ಪಿಸಲಿಕ್ಕಾಗುವದಿಲ್ಲವೆಂಬುದು ಇದರಿಂದ ತಿಳಿದು ಬರುತ್ತದೆ.

ಬಸವಣ್ಣನವರ ಜೀವನ-ತತ್ವಗಳು ಆಚರಣೆಗೆ ತಕ್ಕವಾಗಿ, ಕಾಲಕ್ಕೆ ತಕ್ಕ ಪರಿವರ್ತನೆಗಳನ್ನು ಶಾಂತಮಾರ್ಗದಿಂದ ತರುವ ಕ್ರಮವನ್ನು ಹೇಳಿಕೊಡುವಂಥವಿರುವದು ಸರ್ವವಿದಿತವಾಗಿದೆ. ತತ್ವತಃ ಒಳ್ಳೆಯದಾಗಿದ್ದುದು ಕಾರ್ಯತಃ ಸಹ ಒಳ್ಳೆಯದಾಗಿರಲೇಬೇಕಷ್ಟೇ! 'ಸಮಾಜ ವ್ಯವಸ್ಥೆಯ ಯಾವುದೇ ಭಾಗದಲ್ಲಿ ವಿಷಮತೆಯು ಕಾಣಿಸುತ್ತಿದ್ದರೆ, ಆ ವಿಷಮತೆಯ ಮೂಲಕ್ಕೆ ಹೋಗಿ ಅದರ ಪರಿಹಾರ ಕೈಕೊಳ್ಳುವದು ಶಿವಶರಣರ ಕ್ರಮವಾಗಿರುತ್ತದೆಂಬುದನ್ನು ಅವರ ವಚನಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಸಮಾಜ ಸಂಘಟನೆಯಲ್ಲಿ ಪ್ರತಿಯೊಂದನ್ನು ಅದರಲ್ಲಿ ದಾಸ್ಯವಿದೆಯೇ ? ಸುಲಿಗೆಯಿದೆಯೇ ? ಎಂಬ ವರೆಗಲ್ಲಿಗೆ ತಿಕ್ಕಿನೋಡಿ ಸ್ವೀಕರಿಸುವ ಅಥವಾ ತಿರಸ್ಕರಿಸುವ ಕ್ರಮವನ್ನು ತಮ್ಮ ಕ್ರಾಂತಿಕಾರ್ಯದಲ್ಲಿ ಬಸವಣ್ಣನವರು ಅನುಸರಿಸಿದ್ದರು. ಇಂದು ಕೂಡ ಅದೇ ವರೆಗಲ್ಲಿಗೆ ತಿಕ್ಕಿನೋಡಿ ಹೊಸ ಸಮಾಜ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಿದೆ.

ಕೊನೆಯ ಮಾತೆಂದರೆ ಕರ್ನಾಟಕದೊಳಗಿನ ವೀರಶೈವರಿಗೆ ಹೊಸ ಸಮಾಜ ವ್ಯವಸ್ಥೆಯನ್ನು ಬಸವ ತತ್ವದ ತಳಹದಿಯ ಮೇಲೆ ರೂಪಿಸುವದು ಸುಲಭವಿದ್ದಂತೆ ಇನ್ನುಳಿದವರಿಗೆ ಅಷ್ಟು ಸುಲಭವಿಲ್ಲ. ಇಂದು ಭಾರತವೇ ಬೇಡುತ್ತಿರುವ ಹೊಸ ಸಮಾಜ ವ್ಯವಸ್ಥೆಯು ಇದೇ ಆಗಿದೆ. ನಾಳಿನ ಸಮಾಜ ವ್ಯವಸ್ಥೆಯು ಅಖಿಲ ಭಾರತ ಮಟ್ಟದಲ್ಲಿ ಬಸವತತ್ವದ ತಳಹದಿಯಮೇಲೆಯೇ ರೂಪಗೊಳ್ಳುವದು ನಿಶ್ಚಿತವಾಗುವದಾದರೆ, ವೀರಶೈವರು ಮೊದಲು ಮುಂದು ಬಂದರೆ ಅದರ ಸತ್ಫಲಗಳನ್ನು ಪಡೆವಲ್ಲಿ

ಅವರೇ ಮೊದಲಿಗರಾಗುತ್ತಾರೆ, ಇಲ್ಲವಾದರೆ ಕೊನೆಯವರಾಗಬೇಕಾಗುತ್ತದೆ. ಅದಕ್ಕಾಗಿ ವೀರಶೈವರು ಪರಿಸ್ಥಿತಿಯಿಂದಾಗಿ ತಮ್ಮ ವ್ಯಾವಹಾರಿಕ ಜೀವನದಲ್ಲಿ ಬಂದಿರಬಹುದಾದ ತೊಡಕು–ತೊಂದರೆಗಳನ್ನೇ ದೊಡ್ಡದು ಮಾಡಿಕೊಂಡು 'ಹಿಂದೆ ಬೀಳದೇ' ಮಂಗಳನ (ಶಿವನ) ಮೇಲೆ ವಿಶ್ವಾಸವಿರಿಸಿ, ವೀರತನದಿಂದ ಜೀವಿಸಿ, ಹೊಸ ಸಮಾಜ ವ್ಯವಸ್ಥೆಯ ಹರಿಕಾರರಾಗಬೇಕು.

★ ★ ★



ದೃಷ್ಟಾಂತ ಕಥೆ

'ಅಯ್ಯಾ ಎಂದಡೆ ಸ್ವರ್ಗ – ಎಲವೊ ಎಂದಡೆ ನರಕ'

ಮುದ್ದಿನ ಎಳೆಯರಿಗೆ,

ಈ ತಿಂಗಳಿಂದ ನಿಮಗೆಲ್ಲ ಪ್ರತಿ ತಿಂಗಳಿಗೆ ಸಂಚಿಕೆಗೆ ಒಂದು ದೃಷ್ಟಾಂತ ಕಥೆ ಹೇಳುವೆ. ಗಡುಚಾದ ತತ್ತ್ವಜ್ಞಾನ ಇಳಿಯದಿದ್ದವರಿಗೆ ಸಹ ಇಂಥ ಸರಳ ಕಥೆಗಳು ಗಹನ ವಿಚಾರಗಳನ್ನು ತಿಳಿಸಿಕೊಡಬಲ್ಲವು.

ಈಗ ಕೇಳಿರಿ, ಒಂದು ದೇಶ.ಅದಕ್ಕೊಬ್ಬ ರಾಜ. ಅವನಿಗೆ ಬೇಟೆಯಾಡುವ ಹವ್ಯಾಸ. ಒಂದು ದಿನ ಪರಿವಾರ ಸಮೇತ ಕಾಡಿಗೆ ಹೋದ. ಬೇರೆ ಬೇರೆ ದಿಕ್ಕಿನಲ್ಲಿ ಬೇಟೆಯಾಡುತ್ತ ಸಾಗಿದರು. ಪ್ರಾಣಿಯೊಂದನ್ನು ಬೆನ್ನುಹತ್ತಿ ರಾಜನು ಕಾಡಿನ ಒಳ ಭಾಗಕ್ಕೆ ಹೋದ ; ತನ್ನ ಸಹಚರರಿಂದ ದೂರವಾಗಿ ಬಿಟ್ಟ.

ರಾಜನ ಸಹಚರರಿಗೆ ತುಂಬಾ ಕಳವಳವಾಯಿತು. ರಾಜನನ್ನು ಅರಸುತ್ತ ಹೊರಟನು. ಇದಿರಿಗೆ ಒಂದು ಗುಡಿಸಲು, ಅದರ ಮುಂದೊಬ್ಬ ಕುರುಡನಾದ ಸನ್ಯಾಸಿ. ಧ್ಯಾನಮಗ್ನನಾಗಿ ಕುಳಿತ ಅವನನ್ನು ಸೇವಕರು ಕೇಳಿದರು, "ಎಲವೋ....ಸನ್ಯಾಸಿ ಯಾರಾದರೂ ಇತ್ತ ಕುದುರೆಯ ಮೇಲೆ ಹೋದರೆ ?" ಇಲ್ಲವೆಂಬುದಾಗಿ ಅವನು ಉತ್ತರಿಸಿದ. ಅವರು ಮುಂದೆಸಾಗಿದರು. ಕೊಂಚ ಹೊತ್ತಿನಲ್ಲಿ ಇನ್ನೋರ್ವ ಬಂದು, "ಏನಪ್ಪಾ ಸನ್ಯಾಸಿ, ಇತ್ತ ಯಾರಾದರೂ ಕುದುರೆಯ ಮೇಲೆ ಒಂಟಿಯಾಗಿ ಹೋದರೆ? "ಇಲ್ಲ....ಕೆಲವು ಸೇವಕರಷ್ಟೇ ಹೋದರು" ಎಂದನು. ಆಗಂತುಕ ಮುಂದೆ ಸಾಗಿದ. ಆ ನಂತರ ರಾಜನು ಬಂದು, "ಪೂಜ್ಯ ಸಾಧುವರ್ಯರೇ. ಇಲ್ಲಿ ಯಾರಾದರೂ ಹಾಯ್ದು ಹೋದರೆ ?" ಎಂದು ಆಗ ಕುರುಡ ಸನ್ಯಾಸಿ "ಕುಳಿತುಕೊಳ್ಳಿ ಮಹಾರಾಜರೇ, ದಣಿವಾರಿಸಿಕೊಳ್ಳಿರಿ. ಮೊದಲು ನಿಮ್ಮ ಸೇವಕರು, ಆ ನಂತರ ಮಂತ್ರಿಗಳು ಬಂದು ಹೋದರು. ತಮ್ಮನ್ನು ಅರಸುತ್ತ ಇತ್ತ ಕಡೆ ಹೋದರು. ರಾಜನು ಚಕಿತನಾಗಿ ಕೇಳಿದ. "ಸ್ವಾಮಿ, ತಾವು ಕುರುಡರು ನಾನು ರಾಜನೆಂಬುದು ತಿಳಿದುದೆಂತು. ನಾನು ಹೇಳಿ ಕೊಳ್ಳಲಿಲ್ಲವಲ್ಲಾ...."

"ನಿಜ ಸ್ವಾಮಿ, ನೀವು ಹೇಳಿಕೊಳ್ಳದಿದ್ದರೂ ನಿಮ್ಮ ಸಂಸ್ಕೃತಿಯೇ ಹೇಳುತ್ತದೆ.

(೩೭ನೆಯ ಪುಟಕ್ಕೆ)

ಒಂದು ಪ್ರಶ್ನೋತ್ತರ ಮಾಲೆ

—ಸುಯಿಧಾನಿ

೧. ದೇವರೆಂದರೆ ಯಾರು ?

* ಎಲ್ಲರಿಗೂ ಜನ್ಮದಾತ ತಂದೆ ಇರುವಂತೆ, ಈ ಜಗತ್ತಿಗೆ ತಂದೆಯಾಗಿ ತನಗೆ ಮಾತ್ರ ಅಪ್ಪನಿಲ್ಲದೆ ಇರುವ ಆದಿಕಾರಣ ಪರವಸ್ತುವೇ ದೇವರು.

೨. ದೇವರು ಮತ್ತು ದೇವತೆ ಬೇರೆ ಬೇರೆಯೇ ? ಎರಡರಲ್ಲಿಯೂ ವ್ಯತ್ಯಾಸವೇನು ?

* ಸಚರಾಚರ ಸೃಷ್ಟಿಗೆಲ್ಲ ಕಾರಣನಾದ, ನಮ್ಮ-ನಿಮ್ಮೆಲ್ಲರನ್ನು ಹುಟ್ಟಿಸಿದ ಮಹಾಶಕ್ತಿಯೇ ದೇವರು; ಪುರಾಣಕರ್ತ್ರರ ತಲೆಯಲ್ಲಿ ಕಲ್ಪಿತಗೊಂಡುದು ದೇವತೆ. ದೇವನು ಹಿಂದು, ಇಂದು, ಮುಂದುಗಳ ದಂದುಗವಿಲ್ಲದೆ ಎಂದೆಂದೂ ಇರುವವನು, ದೇವತೆ ಎಂದೂ ಇಲ್ಲದ ಕಾಲ್ಪನಿಕ ವ್ಯಕ್ತಿ.

೩. ದೇವರ ವಿಳಾಸಯಾವುದು ? ಎಲ್ಲಿಗೆ ನಾವು ಪತ್ರ ಬರೆಯಬೇಕು ?

* ಕೇರ್ ಆಫ್ ಗುರುಬಸವ. 'ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲಾ ಸಂಗನ ಬಸವಣ್ಣ' ಎಂದು ಪ್ರಭುದೇವರು ನುಡಿದಿಲ್ಲವೆ ? ಮಂತ್ರ ಪುರುಷನಾದ ಧರ್ಮದ ಆದಿಗುರುವಿನ ಮೂಲಕ ದೇವನ ಸಾಕ್ಷಾತ್ಕಾರ.

೪. ಯಾವ ವಾಹನವನ್ನೇರಿ ದೇವಸನ್ನಿಧಿ ಸೇರಬೇಕು ? ಅದಕ್ಕೆ ಬಳಸುವ ಇಂಧನವೇನು ?

* ಶಿವಯೋಗ; ಶರಣಾಗತ ಭಕ್ತಿಯೇ ಇಂಧನ.

೫. ಪಡೆಯಬಹುದಾದ ಟಿಕೆಟ್ ಯಾವುದು ?

* ಗುರುಕರುಣೆ, ದೀಕ್ಷಾ ಸಂಸ್ಕಾರ.

೬. ಬೇಕಾಗುವ ಶುಲ್ಕವೇನು ?

* ಎಡದ ಕೈಯಲ್ಲಿ ದೇವಪೂಜೆ, ಬಲದ ಕೈಯಲ್ಲಿ ಸಮಾಜಸೇವೆ.

೭. ಬ್ರಹ್ಮನ ಮನೆ ಯಾವುದು ?

* ಅಖಂಡ ಬ್ರಹ್ಮಾಂಡವೇ ಬ್ರಹ್ಮನ ಮಹಾಮನೆ.

೮. ದೇವನನ್ನು ಕಾಣುವ ತಾಣವಾವುದು ?

* ತನ್ನಂತರಂಗ. ಶರಣಸತಿ ಭಾವದಿಂದ ಮಧುರ ಭಕ್ತಿಮಾಡುವ ಭಕ್ತಿ ಯೋಗಿಗಳು ಹೃದಯ ಕಮಲವೆಂಬ ಶಯನ ಗೃಹದಲ್ಲಿಯೂ, ಪೂಜ್ಯ ಭಾವದಿಂದ ಸಾಧನೆ ಮಾಡುವ ರಾಜಯೋಗಿಗಳು ಭ್ರೂಮಧ್ಯವೆಂಬ ಸಂದರ್ಶನಾಲಯದಲ್ಲೂ ಕಾಣಬಹುದು.

೯. ದೇವರು ಎಲ್ಲೆಡೆಯಲ್ಲಿದ್ದರೆ, ಕಲ್ಲು ಮಣ್ಣು ಕಟ್ಟಿಗೆಯಲ್ಲಿ ಇಲ್ಲವೆ ?

* ತಂತಿ ಹರಿದಲ್ಲೆಲ್ಲಾ ವಿದ್ಯುತ್ ಹರಿಯುತ್ತಿದ್ದರೂ ಬಲ್ಬ್ ಇದ್ದಲ್ಲಿ ಮಾತ್ರ ಅದು ಪ್ರಕಟವಾಗುವಂತೆ, ಸಾಮಾನ್ಯ ಚೈತನ್ಯನಾಗಿ ದೇವರು ಜಗತ್ತಿನ ತುಂಬೆಲ್ಲ ಇದ್ದರೂ, ಕಲ್ಲುಮಣ್ಣು, ಕಟ್ಟಿಗೆ ಮುಂತಾದವುಗಳಲ್ಲಿ ಓತಪ್ರೋತನಾಗಿ ಇದ್ದರೂ, ಪ್ರಕಟಗೊಳ್ಳುವುದು ಪ್ರತ್ಯಗಾತ್ಮವೆಂಬ ಬಲ್ಬ್ ಇದ್ದಲ್ಲಿ ವಿಶೇಷ ಚೈತನ್ಯನಾಗಿ.

ದೃಷ್ಟಾಂತ ಕಥೆ

(೩೫ನೆಯ ಪುಟದಿಂದ ಮುಂದುವರೆದಿದೆ)

ಸೇವಕರು 'ಎಲವೋ ಸನ್ಯಾಸಿ' ಎಂದವರು ಸೇವಕರು, ಅದಕ್ಕಿಂತ ಸುಸಂಸ್ಕೃತವಾಗಿ 'ಏನಪ್ಪಾ ಸನ್ಯಾಸಿ' ಎಂದವರು ಮಂತ್ರಿ, 'ಪೂಜ್ಯ ಸಾಧುವರ್ಯರೇ' ಎಂದವರು ಮಹಾರಾಜರು ಎಂದು ಊಹಿಸಿಸುವುದು ಕಷ್ಟವಾಗಲಿಲ್ಲ. ನಾಲಿಗೆಯನ್ನು ನೋಡಿ ಹೊಟ್ಟೆಯ ಸ್ವಾಸ್ಥ್ಯವನ್ನು ತಿಳಿಯುವಂತೆ, ಆಡುವ ಮಾತಿನಿಂದ ಮನುಷ್ಯನ ವ್ಯಕ್ತಿತ್ವವನ್ನು ಅರಿಯಬಹುದು." ಎಂದ ಆ ಸಾಧು.

ಅದಕ್ಕೆಂದೇ ಬಸವಣ್ಣನವರು ಹೇಳುವರು :

"ಪುಣ್ಯ-ಪಾಪವೆಂಬವು ತಮ್ಮ ಇಷ್ಟವು ಕಂಡಿರೇ
ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ
ದೇವಾ, ಭಕ್ತಾ, ಜಯಾ, ಜೀಯಾ ಎಂಬ ನುಡಿಯೊಳಗೆ
ಕೈಲಾಸವೈದುವುದೇ ಕೂಡಲ ಸಂಗಮದೇವಾ"

ನೀವು ಅಂತಹ ಮೃದುಮಾತುಗಳನ್ನು ಆಡಿರಿ, ಗಿಳಿಗಳಿರಾ !

—ತ್ರಿನೇತ್ರಿ.

(ಸಂಗ್ರಹ)



ಹಿಂದಿನ ಸಂಚಿಕೆಯುವರೆಗೆ

(ತತ್ತ್ವ ಪ್ರಸಾರ, ವಿದೇಶಗಳ ಸಂದರ್ಶನದ ಮಣಿಹ ಹೊತ್ತು ಪೂಜ್ಯ ಮಾತೆಯವರು ೧೯೭೬ ಮೇ ೧೪ರಂದು ತಾಯ್ನಾಡಿನಿಂದ ತೆರಳಿದರು. ವಿಮಾನ ನಿಲ್ದಾಣದಲ್ಲಿಳಿದು, ಹೊರಬರುವಾಗ ತುಂಬಿತ್ತು ಒಂದು ಚಿಂತೆ, ತಮ್ಮನ್ನು ಸ್ವಾಗತಿಸಲು ಬರಬೇಕಾದವರು ಬಂದಿರಲಿಲ್ಲವಾದ ಕಾರಣ. ಮುಂದೇನು ಎಂದು ಆತಂಕಪಡುತ್ತ ಹೊರಬರುತ್ತಿದ್ದಾರೆ.)

ಧಾರಾವಾಹಿ–೨ ದಿ. ೧೫-೫-೭೬ ಜಗದ್ಗುರು ಮಾತಾಜಿ

"ಶರಣು ಮಾತಾಜಿ..." ಎಂದು ಆತುರದಿಂದ ಧಾವಿಸಿ ಬಂದ ವ್ಯಕ್ತಿಯು, ಹೂಗುಚ್ಛವೊಂದನ್ನು ಕೈಗಿತ್ತು, ಬಾಗಿ ಪಾದ ಮುಟ್ಟಿ ನಮಸ್ಕರಿಸಿತು. ಸಂಭ್ರಾಂತಳಾಗಿ ನೋಡಿದೆ. ಅವರು ಶ್ರೀದೇವಿ, ಡಾ|| ಅರುಣರ ಧರ್ಮಪತ್ನಿ.

"ಕ್ಷಮಿಸಿ ಮಾತಾಜಿ, ನಾವು ತುಂಬಾ ಬೇಗನೇ ಮನೆಯಿಂದ ಹೊರಟೆವು. ಹೀಥ್ರ್ಯೂ ಅಂತರರಾಷ್ಟ್ರೀಯ ನಿಲ್ದಾಣಕ್ಕೆ ವಾರದ ಕೊನೆಯಲ್ಲಿ ಬರುವುದೆಂದರೆ ಬಲು ಸಾಹಸ. ವಿಪರೀತ ವಾಹನ ಸಂಚಾರದಿಂದಾಗಿ ಸಮಯಕ್ಕೆ ಸರಿಯಾಗಿ ಬರಲಾಗಲಿಲ್ಲ. ಭೂಗತ ರೈಲ್ವೆಯಿಂದ ಬಂದು, ಕೊನೆಯ ನಿಲ್ದಾಣದಿಂದ ಇಲ್ಲಿಗೆ ಬರಬೇಕಾದರೆ ಲಾಂಗ್ ಕ್ಯೂ ಎದುರಿಸಬೇಕಾಯಿತು. ಈ ವಿಳಂಬಕ್ಕೆ ಕ್ಷಮೆ ಇರಲಿ. ವ್ಯತ್ಯಯದಿಂದಾಗಿ ಗಾಬರಿಗೊಂಡ ಡಾಕ್ಟರ್ ನಿಮ್ಮ ಬಗ್ಗೆ ವಿವರ ಪಡೆಯಲು ಎನ್‌ಕ್ವಯರಿ ವಿಭಾಗಕ್ಕೆ ಹೋಗಿ, ನನಗೆ ಇಲ್ಲೇ ಕಾಯ್ದಿರಲು ಹೇಳಿದ್ದಾರೆ".

ಅಷ್ಟರಲ್ಲಿ ಡಾ|| ಅರುಣರೂ ಧಾವಿಸಿ, ನಮಸ್ಕರಿಸಿದರು. "ಕ್ಷಮಿಸಿ, ಟ್ರಾಫಿಕ್ ಜಾಮ್ ಆಗಿ ತುಂಬಾ ತೊಂದರೆಯಾಯ್ತು. ನಾವು ನಿಲ್ದಾಣ ಸೇರುವುದರಲ್ಲಿ ತಾವೆಲ್ಲಿ ಗಾಬರಿಗೊಂಡು ಇಲ್ಲಿಂದ ಹೊರಟಿರುವಿರೋ, ಎಂದು ಕಳವಳವಾಯಿತು. ಒಳಗೆ ವಿಚಾರಿಸಲು ತಿಳಿಸಿದಾಗ ವಿವರಣೆಯ ವಿಭಾಗದವರು ವೀಸಾ ನೀಡಿದ ಅಧಿಕಾರಿಗಳಿಂದ ತಾವು ಬಂದ ಬಗ್ಗೆ ಖಚಿತಪಡಿಸಿದರು". ನನ್ನ ಬಲಗೈಲಿದ್ದ ಟ್ರಾಲಿ (ತಳ್ಳುಗಾಡಿ)

ಯನ್ನು ಡಾಕ್ಟರರೂ ಎಡಗೈಲಿದ್ದ ಬ್ರೀಫ್‌ಕೇಸನ್ನು ಶ್ರೀದೇವಿ ತೆಗೆದುಕೊಂಡು, ಕೈಯಿನ ಮತ್ತು ಮನಸ್ಸಿನ ಭಾರವನ್ನು ಹಗುರಗೊಳಿಸಿದರು. "ಮೇಲಕ್ಕೆ ಎತ್ತಿ ತೂರಿ ಆಳುವಾಗ ಮಗುವನ್ನು ಎತ್ತಿಕೊಳ್ಳುವ ತಂದೆಯಂತೆ, ಬಸವಣ್ಣನು ಗಾಬರಿ ಹುಟ್ಟಿಸುವಂತೆ ಮಾಡಿದರೂ, ಅದರ ಹಿಂದೆಯೇ ಪರಿಹಾರವನ್ನು ಇಟ್ಟಿರುವನಲ್ಲಾ" ಎಂದು ಸಮಾಧಾನವಾಯಿತು. ಮನದ ತುಂಬ ನಿರ್ಮಾಣವಾಗಿದ್ದ ಕಳವಳದ ಮಂಜಿನ ಕೋಟೆ ಶಿವಕರುಣೆಯ ರವಿಕಿರಣದಿಂದ ಕರಗುವುದು ಎಷ್ಟು ಹೊತ್ತು !

"ಪ್ರಯಾಣ ಆರಾಮವಾಗಿತ್ತೆ ? ಒಬ್ಬರೇ ಬರಲು ಅಂಜಿಕೆ ಎನಿಸಲಿಲ್ಲವೆ ?"

"ಅಂಜಿಕೆ ಏಕೆ ; ಮಾನವ ಲೋಕದಲ್ಲಿ ಮಾನವರು ಅಡ್ಡಾಡಲು? ! ಅದೂ ದೈವಾನುಗ್ರಹದ ಭದ್ರಕವಚವಿರುವಾಗ ಹೆದರಬೇಕೆ ? ನೀವು ಬರದೆ ಇದ್ದಾಗ ಭೀತಿಯ ಮೋಡದ ತುಣುಕೊಂದು ಕವಿದಿತ್ತು. ಕ್ಷಣಕಾಲ ಮಾತ್ರ; ದೈವೀ ನಂಬುಗೆಯ ಬಲವಾದ ಗಾಳಿ ಭೀತಿಯ ಮೋಡವನ್ನು ತೀವ್ರವೇ ಚದುರಿಸಿತು".

"ನಿಮ್ಮೊಡನೆ ಯಾರಾದರೂ ಬರುವರೆಂದು ನಿರೀಕ್ಷಿಸಿದ್ದೆವು. ತಾವೂ ಹಾಗೇ ತಿಳಿಸಿದ್ದಿರಿ".

"ಒಬ್ಬರನ್ನು ಕರೆತರಲು ಸಿದ್ಧತೆ ನಡೆದಿತ್ತು. ಆದರವರಿಗೆ ಇಲ್ಲಿಂದ ಸ್ಪಾನ್ಸರ್‌ಷಿಪ್ ಸಕಾಲಕ್ಕೆ ಬರಲಿಲ್ಲ. ನಾನು ಹೊರಡುವ ಹಿಂದಿನ ದಿನವಷ್ಟೇ ಡಾ|| ದೇವಕುಮಾರರಿಂದ ಬಂದಿತು. ಮದ್ರಾಸಿನಲ್ಲಿರುವ ಬ್ರಿಟಿಷ್ ಎಂಬೆಸ್ಸಿಯಿಂದ ಪ್ರವೇಶ ಪರವಾನಗಿ (Entry Permit) ತೆಗೆಸಲು ವ್ಯವಧಾನವಿರಲಿಲ್ಲ. ನನ್ನ ಏರ್‌ಟಿಕೆಟ್ ಬುಕ್ಕಾಗಿತ್ತು. ಹೊರಡುವ ದಿನಾಂಕ ನಿಶ್ಚಿತವಾಗಿದ್ದು, ನಾಡಿನಾದ್ಯಂತದಿಂದ ಬೀಳ್ಕೊಡಲು ಜನರು ಬಂದಿದ್ದರು. ಈ ಸಮಾರಂಭವನ್ನು ವ್ಯತ್ಯಯಮಾಡಲು ಮನಸ್ಸಾಗಲಿಲ್ಲ. ಇನ್ನೋರ್ವರಿಗೆ ಸ್ಪಾನ್ಸರ್‌ಷಿಪ್ ಬಂದಿದ್ದರೂ ಪಾಸ್‌ಪೋರ್ಟ್ ಸಿದ್ಧವಿರಲಿಲ್ಲ. ಹೇಗಿದ್ದರೂ ನೀವುಗಳೆಲ್ಲ ಇರುವಿರಿ. ನಂತರ ಕರೆಸಿಕೊಂಡರಾಯಿತು ಎಂದು ನಿರ್ಧರಿಸಿದೆವು...."

"ಒಂದು ದೃಷ್ಟಿಯಿಂದ ಒಳಿತೇ ಆಯಿತು. ಈ ದೇಶದಲ್ಲಿ ಸಹಾಯಕರು ಬೇಕಾಗುವುದೇ ಇಲ್ಲ. ಧೈರ್ಯವಿದ್ದರೆ ಸಾಕು. ಎಲ್ಲ ಅನುಕೂಲತೆಗಳನ್ನು ಕುಳಿತಲ್ಲಿಯೇ ಮಾಡಿಕೊಳ್ಳಲು ಸಾಧ್ಯವಿದೆ. ನೀವು ಇನ್ನೋರ್ವರನ್ನು ಕರೆತಂದಿದ್ದರೆ ಅಲ್ಲಿಂದ ಬಂದು ಹೋಗಲು ಸಹಸ್ರಾರು ರೂಪಾಯಿ ವ್ಯಯವಾಗುತ್ತಿದ್ದವು; ಇಲ್ಲಿಯೂ ಸಹ ವ್ಯವಸ್ಥೆಗೆ ತೊಂದರೆ ಎನಿಸುತ್ತಿತ್ತು. ಮತ್ತು ಅನವಶ್ಯಕ ಖರ್ಚಾಗುತ್ತಿತ್ತು. ಇಲ್ಲಿಯ ಜೀವನ ವಿಧಾನ ನೋಡಿದ ಬಳಿಕ ನಿಮಗೇ ಗೊತ್ತಾಗುತ್ತದೆ". ಮಾತನಾಡಿಕೊಳ್ಳುತ್ತ ಟ್ಯಾಕ್ಸಿ ಕ್ಯೂದ ಬಳಿ ಬಂದು ನಿಂತಿದ್ದೆವು. ಯಾವುದೇ ಧಾವತಿ, ಓಡುವಿಕೆಗೆ ಅವಕಾಶವಿಲ್ಲದೆ ಶಾಂತರಾಗಿ ಸಾಲು ಹಿಡಿಯಬೇಕು. ಕ್ಯೂನಲ್ಲಿರುವ ಟ್ಯಾಕ್ಸಿಗಳು ಒಂದೊಂದೇ ಬಂದು ಹತ್ತಿಸಿಕೊಳ್ಳುವುವು. ಎಲ್ಲೆಡೆಯಲ್ಲೂ ಶಿಸ್ತು. ನಮ್ಮಲ್ಲಿಯೋ ಬಿ.ಟಿ.ಎಸ್ ಬಸ್ಸಿನಿಂದ

ಹಿಡಿದು ರಿಕ್ಷಾ–ಟ್ಯಾಕ್ಸಿ ಹಿಡಿಯಲು ಸ್ಪರ್ಧೆ. ಸಿನೆಮಾಗಳಲ್ಲಿ ನೋಡುವ ಹೊಡೆದಾಟವನ್ನು, ಟಿಕೆಟ್ ಪಡೆಯಲು ನಿಂತ ಕ್ಯೂನಲ್ಲೇ ನೋಡಿ ಮನರಂಜನೆ ಪಡೆವ ಅವಕಾಶ ಉಂಟು. "ನಾನು ಒಂದು-ಎರಡು ರೂಪಾಯಿ ಜಾಸ್ತಿಕೊಡುವೆ" ಎಂದು ಆಮಿಷ ಹಚ್ಚುವ ಅವಶ್ಯಕತೆಯಾಗಲೀ, "ರೀ ನೀವು ಹೋಗುವ ಸ್ಥಳ ನಗರದ ಮೂಲೆಯಲ್ಲಿದೆ ರೀ; ನಾವು ಅಲ್ಲಿಗೆ ಬರುವುದಿಲ್ಲ; ಬರುವಾಗ ಯಾವ ಪ್ರಯಾಣಿಕರೂ ಸಿಗುವುದಿಲ್ಲ...." ಎಂದು ನಿರಾಕರಿಸುವ ವಾಹನ ಚಾಲಕರ ಠೇಂಕಾರ–ರೀವಿಗಾಗಲೀ, ಅವಕಾಶವಿಲ್ಲ. ಯಾಂತ್ರಿಕವಾಗಿ ಜನ ಟ್ಯಾಕ್ಸಿ ಹತ್ತುತ್ತಾರೆ; ಅದು ಮುಂದೆ ಹೋಗುತ್ತದೆ; ಇನ್ನೊಂದು ಟ್ಯಾಕ್ಸಿ ಮುಂದೆ ಬರುತ್ತದೆ.

ನಾವು ಒಂದು ಟ್ಯಾಕ್ಸಿ ಹತ್ತಿದೆವು. ಡಾಕ್ಟರರು ವಿಳಾಸ ನೀಡುತ್ತಿದ್ದಂತೆಯೇ ಟ್ಯಾಕ್ಸೀವಾಲ ಮುಂದೆ ಸಾಗಿದ; ಜೊತೆಗೆ ನಮ್ಮ ಮಾತು ಸಾಗಿತು.

"ಡಾ॥ ದೇವಕುಮಾರರು ಮೊನ್ನೆಯಷ್ಟೆ ಬಂದಿದ್ದರು. ತಾವೇ ಇಲ್ಲಿದ್ದು ನಿಮ್ಮನ್ನು ಸ್ವಾಗತಿಸುವುದಾಗಿ ಹೇಳಿದರು. ಅವರಿರುವ ಚೇಡಲ್ ಇಲ್ಲಿಂದ ಸುಮಾರು ಒಂದೂವರೆ ನೂರು ಮೈಲಿ. ಮೂರು ದಿವಸ ಕಾಯ್ದು ಏಕೆ ತೊಂದರೆ ಪಡಬೇಕೆಂದು, ನಾವೇ ಸ್ವಾಗತಿಸುವುದಾಗಿ ಹೇಳಿ ಅವರನ್ನು ಕಳಿಸಿದೆವು. ತಮ್ಮ ದೂರವಾಣಿ ನಂಬರ್ ಕೊಟ್ಟಿದ್ದಾರೆ. ಏನೇ ಸಹಾಯ ಬೇಕಿದ್ದರೂ ತಿಳಿಸಿರಿ ಎಂದು ಹೇಳಿ ಹೋಗಿದ್ದಾರೆ. ತಮಗೆ ಸಲ್ಲಿಸಲು ಕಾಣಿಕೆ ಸಹ ಕೊಟ್ಟು ಹೋಗಿದ್ದಾರೆ". ನನಗೆ ಹೃದಯ ತುಂಬಿ ಬಂತು. ಮಾನವ ಹೃದಯದಲ್ಲಿ ಈ ಅಭಿಮಾನ, ಆದರ, ದೈವೀಶ್ರದ್ಧೆ, ಗುರುಹಿರಿಯರಲ್ಲಿ ಭಕ್ತಿ, ಧರ್ಮಾಸಕ್ತಿ ಇವೆಯೆಂದೇ ಜಗತ್ತು ಇಷ್ಟಾದರೂ ಬದುಕಲರ್ಹವಾಗಿ ಉಳಿದಿದೆ ಎನಿಸುತ್ತದೆ. ಡಾ॥ ಅರುಣಕುಮಾರ್, ಶ್ರೀದೇವಿ ಸೌಜನ್ಯಶೀಲ ದಂಪತಿಗಳು. ಉಭಯತರೂ ಎಂ.ಬಿ.ಬಿ.ಎಸ್. ಆಗಿ, ಪತಿಯು ಕೆಲಸದಲ್ಲಿದ್ದರು; ಕೆಲವೇ ತಿಂಗಳ ಹಿಂದೆ ಮದುವೆಯಾಗಿ ಹೋದ ಶ್ರೀದೇವಿ ಅಲ್ಲಿಯ ಪ್ರವೇಶ ಪರೀಕ್ಷೆಯೊಂದಕ್ಕೆ ಅಭ್ಯಸಿಸುತ್ತಿದ್ದರು. ಆ ಪರೀಕ್ಷೆಯನ್ನು ಪೂರೈಸದೆ ವೈದ್ಯವೃತ್ತಿ ಕೈಗೊಳ್ಳಲು ಬರುವಂತಿರಲಿಲ್ಲ. ಎರಡು ಮೂರು ವರುಷಗಳಿಂದ ಈ ದೇಶದಲ್ಲಿದ್ದರೂ ಸ್ವಲ್ಪವಾದರೂ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಡಾ॥ ಅರುಣರಾಗಲೀ, ಶ್ರೀದೇವಿಯಾಗಲೀ ಈಡಾಗಿರಲಿಲ್ಲ. ತುಂಬಿದ ಕೊಡದಂತಹ ಗಾಂಭೀರ್ಯ–ಸೌಜನ್ಯ, ಜೊತೆಗೆ ಸಹೃದಯತೆ. ಡಾ॥ ದೇವಕುಮಾರರೂ ಅಷ್ಟೇ; ಸಾಕಷ್ಟು ಕಾಲವನ್ನು ಆ ದೇಶದಲ್ಲಿ ಕಳೆದರೂ ಅಲ್ಲಿಯ ವಿಲಕ್ಷಣ ಜನಜೀವನದ ಸೆಳವಿನಲ್ಲಿ ಕೊಚ್ಚಿಹೋಗದೆ, ಮಾತೃದೇಶದ ಸಂಸ್ಕೃತಿಯನ್ನು ಕಾಪಾಡಿಕೊಂಡವರು. ನನ್ನ ಪ್ರವಾಸಕ್ಕೆ ಮೊದಲೇ ಪತ್ರ ಬರೆದು ಸಹಾಯ–ಸಹಕಾರ ನೀಡುವ ಭರವಸೆ ಇತ್ತಿದ್ದರು.

ಲಂಡನ್ ನಗರದ ನೇರವಾದ, ಸ್ವಚ್ಛವಾದ ರಸ್ತೆಯ ಮೇಲೆ ಟ್ಯಾಕ್ಸಿ ಸಾಗುತ್ತಿ

ದ್ದಂತೆಯೇ ನಾನು ಸುತ್ತಮುತ್ತ ಕಣ್ಣು ಚೆಲ್ಲುತ್ತಿದ್ದೆ. ಭೂಮಿಯ ಮೇಲೆ ಅಡ್ಡಲಾಗಿ ಬೆಳೆಯಲು ಅಸಮರ್ಥವಾದುದಕ್ಕೆ ನಗರ, ಗಾಳಿಯಲ್ಲಿ ಬೆಳೆಯುತ್ತಿತ್ತು. ಗಗನ ಚುಂಬಿ ಕಟ್ಟಡಗಳು ಏರುತ್ತೇರುತ್ತ ಮುಗಿಲನ್ನು ಮುಟ್ಟುವ ಸಾಹಸದಲ್ಲಿ ತೊಡಗಿದ್ದವು. ಸಾಧ್ಯವಾದಷ್ಟು ಹೆಚ್ಚು ಗಾಜನ್ನೇ ಕಿಟಕಿಗಳಿಗೆ ಬಳಸಿದ್ದ ಭವನಗಳಿಗೆ ನಮ್ಮಲ್ಲಿಯಂತೆ ಕಬ್ಬಿಣದ ಗ್ರಿಲ್ಲುಗಳನ್ನು ಬಳಸಿಯೇ ಇರಲಿಲ್ಲ. ಪಾರ್ಥೇನಿಯಮ್ (ಕಾಂಗ್ರೆಸ್‌ಹುಲ್ಲು) ನಷ್ಟು ತ್ವರಿತವಾಗಿ ಕಟ್ಟಡಗಳು ಬೆಳೆದು, ನಗರವು ವಿಸ್ತಾರಗೊಳ್ಳುತ್ತಿದ್ದರೂ ಉದ್ದೇಶ ಪೂರ್ವಕವಾಗಿ ಬಿಟ್ಟ ವಿಶಾಲ ಹುಲ್ಲುಗಾವಲುಗಳು, ಸಾರ್ವಜನಿಕ ಉದ್ಯಾನಗಳೂ ಅತ್ಯಂತ ಚೇತೋಹಾರಿಯಾಗಿದ್ದವು.

ಚಳಿಗಾಲದ ಪೊರೆಯನ್ನು ಕಳಚುತ್ತ, ಬೇಸಿಗೆಯ ಸೊಬಗನ್ನು, ನವತಾರುಣ್ಯವನ್ನು ಸ್ವಾಗತಿಸುತ್ತಿತ್ತು ಸೃಷ್ಟಿ. ತೀಕ್ಷ್ಣವಲ್ಲದ ಆದರೆ ಕಾಂತಿಯುಕ್ತ ರವಿ ಕಿರಣಗಳ ಆಲಿಂಗನದಲ್ಲಿ ಮಲಗಿದ ನಿಸರ್ಗಮಾತೆ, ಅಭ್ಯಂಗನವನ್ನೆರೆದುಕೊಂಡು ಹೊಳಪಿನ ಕೂದಲನ್ನು ಬಿಸಲಲ್ಲಿ ಆರಿಸಿಕೊಳ್ಳುತ್ತಾ ನಿಂತ ಚೆಲುವೆಯಂತೆ ತೋರುತ್ತಿದ್ದಳು. ಸೂರ್ಯನ ಹೊಂಗದಿರಿನ ಅರಿಷಿಣದೆಣ್ಣೆಯ ನೀರೆರೆದುಕೊಂಡು ಹಸಿರು ದುಕೂಲವುಟ್ಟು ವಧುವಾಗಿ ನಿಂತ ಭೂದೇವಿಯನ್ನು ವಿಕಸಿತದಳಗಳಿಂದ ಮುಗುಳ್ನಗುತ್ತ ಓಲೈಸುತ್ತಿದ್ದವು ವಿವಿಧ ಬಣ್ಣಗಳ ಹೂವುಗಳು.

ಉಷ್ಣತೆಯು ಇಪ್ಪತ್ತು ಡಿಗ್ರಿ ಸೆಂಟಿಗ್ರೇಡ್ ಇದ್ದುದರಿಂದ ಮೈ ಕೊರೆವ ಚಳಿಯಾಗಲೀ, ಸುಡುವ ಬಿಸಿಲಾಗಲೀ ಎರಡೂ ಕಾಡಲಿಲ್ಲ. ಹಿತವಾದ ಸಮಶೀತೋಷ್ಣ ಹವೆ ಇದ್ದುದರಿಂದ, ಮೈ ಬೆಚ್ಚಗಿಡುವ ಉದ್ದನೆಯ ಉಣ್ಣೆಯ ಮೇಲಂಗಿಯೇನೂ ಬೇಕಾಗಲಿಲ್ಲ. ಡಿಸೆಂಬರಿನಲ್ಲಿರುವ ಬೆಂಗಳೂರಿನ ಹವೆಗೂ ಅಲ್ಲಿಗೂ ಬಹಳಷ್ಟೇನು ವ್ಯತ್ಯಾಸವೂ ಮೈಗೆ ಕಾಣಲಿಲ್ಲ.

ನಗರದ ಅಚ್ಚುಕಟ್ಟು ಬೆರಗುಗೊಳಿಸುವಂತಹುದು. ಮಕ್ಕಳಿಲ್ಲದ ಶ್ರೀಮಂತರ ಮನೆಯಂತೆ ತೋರುತ್ತಿತ್ತು. ಅಂದರೆ, ಸಿರಿವಂತರ ಮನೆಯಲ್ಲಿ ಸಕಲ ಸಂಪತ್ತನ್ನು ಪ್ರದರ್ಶನಕ್ಕೆ ಚೆನ್ನಾಗಿ ಇಟ್ಟಿರುತ್ತಾರೆ. ಎಳೆಯ ಮಕ್ಕಳಿಲ್ಲದಿದ್ದರೆ ಆ ಸಾಮಾನುಗಳನ್ನು ಅಸ್ತವ್ಯಸ್ತ ಮಾಡುವವರೇ ಇರುವುದಿಲ್ಲ. ಮಕ್ಕಳಿದ್ದ ಮನೆಯಲ್ಲಿ ಟೇಬಲ್ ಮೇಲಿನ ಹಾಸಾಗಲೀ, ಟೀಪಾಯ್ ಮೇಲಿಟ್ಟ ವೃತ್ತ ಪತ್ರಿಕೆಯಾಗಲೀ, ಸಾಲಾಗಿರಿಸಿದ ಚಪ್ಪಲಿಗಳಾಗಲೀ ಒಂದೂ ನೆಟ್ಟಗಿರುವುದಿಲ್ಲ. ನಮ್ಮ ದೇಶದ ರಸ್ತೆಗಳನ್ನು, ಅದರಲ್ಲೂ ಮುಖ್ಯವಾಗಿ ಸಿಟಿಮಾರ್ಕೆಟ್‌ನಂತಹ ಸ್ಥಳ ನೋಡಿದರೆ ಸಣ್ಣಮನೆಯುಳ್ಳ ತಾಯಿ-ತಂದೆಯರಿಗೆ ಸೇರು, ಅರ್ಧಸೇರು, ಪಾವು, ಅರೆಪಾವು, ಚಟಾಕು, ಹೀಗೆ ಮಕ್ಕಳಿದ್ದು ಮನೆ ತುಂಬ ಸಾಮಾನು ಚೆಲ್ಲಾಪಿಲ್ಲಿ ಮಾಡಿದಂತೆ! ಇಲ್ಲಿ ಒಂದು ಬಗೆಯ ಗಜಿಬಿಜಿ ನೋಡಿದರೆ, ಅಲ್ಲಿ ನೀರವ–ನಿರ್ಜನ ಎಲ್ಲೆಡೆಯಲ್ಲೂ. ಮೌನವಾಗಿ ವೀಕ್ಷಿಸುತ್ತ,

ಸುತ್ತಲಿನ ಚಿತ್ರವನ್ನು ನಿರೀಕ್ಷಣೆ (observation) ಯ ಕ್ಯಾಮಾರಾದ ಮೂಲಕ ಮೆದುಳಿನಲ್ಲಿ ಫೋಟೋ ತೆಗೆದುಕೊಳ್ಳುತ್ತ ಆ ನೆಗೆಟಿವ್ಸನ್ನು ನೆನಪಿನ ವಿಭಾಗಕ್ಕೆ ಸರಿಸುತ್ತಾ-ಸೇರಿಸುತ್ತಾ, ಮುಂದೆ ಉಪಯೋಗವಾಗಬಹುದೆಂದು, ಮುಂದೆ ಸಾಗುತ್ತಿದ್ದೆವು. ಲಂಡನ್ ನಗರದ ಉತ್ತರವಲಯ, ಹಿಲ್ ಮಾರ್ಟನ್ ರಸ್ತೆಯತ್ತ ಸಾಗಿದೆವು. ಆಗ ಶ್ರೀದೇವಿ ನುಡಿದರು, "ಮಾತಾಜಿ, ಒಂದು ವಿಷಯ. ತಮಗೆ ನಮ್ಮ ಪರಿಚಯದ ಭಾರತೀಯರೊಬ್ಬರ ಮನೆಯಲ್ಲಿ ವ್ಯವಸ್ಥೆ ಮಾಡಿದ್ದೇವೆ. ನೋಡಿ, ನಾನು ಲಗ್ನವಾಗಿ ಬಂದು ಕೆಲವು ತಿಂಗಳಾದರೂ ಮನೆಯನ್ನು ಕೊಟ್ಟಿಲ್ಲ ; ಬ್ಯಾಚಲರ್ಸ್ ರೂಮ್ ಎಂದು ಒಂದೇ ಒಂದು ಕೋಣೆ. ಅದರಲ್ಲೇ ನಾವಿದ್ದೇವೆ. ಇಲ್ಲಿಯಾದರೋ ವಿಸ್ತಾರವಾದ ಮನೆಯುಂಟು; ತಾವು ತಪ್ಪು ಭಾವಿಸಬಾರದು". ಸಂಕೋಚದಿಂದ ಮಾತನಾಡಿದರು.

"ಸಂತೋಷ, ಎಲ್ಲಿಯಾದರೇನು" ?

"ಅವರು ಸಹೃದಯರಾದ, ಆದರಾತಿಥ್ಯದ ಹಿಂದೂ ಮಹಿಳೆ. ನಮ್ಮವರೆಂದರೆ ಬಹಳಷ್ಟು ಆದರ...." ಅರುಣಕುಮಾರರು ಹೇಳಿದರು.

"ಇಲ್ಲಿ ಫೋನಿನ ಅನುಕೂಲ ಬಹಳ. ನಿಮಗೆ ಏನೇ ಬೇಕೆನಿಸಿದರೂ ಫೋನ್ ಮಾಡಿ; ನಾವುಅರ್ಧಗಂಟೆಯಲ್ಲಿ ಹಾಜರು...." ಶ್ರೀದೇವಿ ಮರುನುಡಿದರು.

ಅಷ್ಟರಲ್ಲಿ ಬಂದಿತು ನಮ್ಮ ಆತಿಥೇಯರ ಮನೆ. ಬಹಳ ನೀಟಾದ ರಸ್ತೆಗಳು, ಇಕ್ಕೆಲದಲ್ಲಿ ಬೆಳೆದ ಗೋಲಾಕಾರವಾಗಿ ಕತ್ತರಿಸಲ್ಪಟ್ಟ ಹಸಿರು ಮರಗಳು.ಪ್ರತಿಮನೆಗೂ ಗಿಡದ ಬೇಲಿ, ಹೂಗಿಡಗಳು. ಇಂಥ ಬೃಹತ್ ನಗರ, ಕಬಂಧ ಬಾಹುಗಳನ್ನು ಚಾಚುತ್ತ ಬೆಳೆಯುತ್ತಿದ್ದರೂ ಸೈಟುಗಳ ಅಳತೆಯಲ್ಲಿ ವ್ಯತ್ಯಾಸವಿಲ್ಲ ; ಮುಂಭಾಗದಲ್ಲಿ ಸಾಕಷ್ಟು ಸ್ಥಳಾವಕಾಶ. ನಿಸರ್ಗ ದೇವಿಯ ಚೆಲುವಿನ ರಕ್ಷಣೆಗೆ ಪ್ರಯತ್ನ.

ಬಾಗಿಲ ಮುಂದೆ ನಿಂತು ಕರೆಗಂಟೆ ಒತ್ತಿದಾಗ ಸ್ಥೂಲಾಕೃತಿಯ ಕೆಂಪಗಿನ ಹೆಣ್ಣುಮಗಳು ಬಾಗಿಲು ತೆರೆದಳು. ಪರಿಚಯ ಮಾಡಿಸಿಕೊಟ್ಟಾಗ ನಮಸ್ಕರಿಸಿ, ಮುಗುಳ್ನಕ್ಕಳು. ನನಗಾಗಿ ವ್ಯವಸ್ಥೆ ಮಾಡಿದ್ದ ಕೋಣೆಯನ್ನು ತೋರಿಸಿದಳು. ಇಬ್ಬರು ಇರಬಹುದಾದ ವಿಸ್ತಾರವಾದ ಡಬ್ಬಲ್ ಕೋಣೆ. ಎಲ್ಲವೂ ಸುಸಜ್ಜಿತ. ಅಗಲ ಮತ್ತು ಎತ್ತರವಾದ ನಿಲುವುಗನ್ನಡಿ. ಬರವಣಿಗೆಗೆ ಸಹಾಯಕವಾಗುವ ಮೇಜು, ಒಂದೆರಡು ಕುರ್ಚಿಗಳು, ಕೋಣೆಯ ಮಧ್ಯದಲ್ಲಿ, ಟೇಬಲ್ ಮೇಲೆ ಬೇರೆ ಬೇರೆ ದೀಪಗಳು: ಸಾಮಾನು ಜೋಡಿಸಿಕೊಳ್ಳಲು ಎತ್ತರವಾದ ಬೀರು. ವಿಶಾಲವಾದ ಗಾಜಿನ ಕಿಟಕಿಗಳು; ಕಬ್ಬಿಣದ ಸಳಿಯ ಅಥವಾ ಗ್ರಿಲ್‌ಗಳ ರಕ್ಷಣೆ ಇಲ್ಲದ ದೊಡ್ಡ ದೊಡ್ಡ ಪಡಕಗಳು. ಬೇಕೆನಿಸಿದಾಗ ಮುಚ್ಚಿಕೊಳ್ಳಲು ದಪ್ಪನೆಯ ತೆರೆಗಳು, ಚಳಿಯೆನಿಸಿದರೆ ಮೈ ಕಾಯಿಸಲು, ಕೋಣೆಯನ್ನು ಬೆಚ್ಚಗಿಡಲು ಹೀಟರ್‌ಗಳು. ಕುಳಿತರೆ ಒಂದಡಿ ಕೆಳಗೆ ಇಳಿಯುವಷ್ಟು ಮೆತ್ತನೆಯ ಗಾದಿ ಹಾಸಿದ ಮಂಚ; ಅದಕ್ಕೆ ದಪ್ಪವಾದ ಹೊದ್ದಿಕೆಗಳು, ಮೇಲೆ ರೇಶಿಮೆಯ ಹಾಸು. ನೆಲಕ್ಕೆ ರತ್ನಗಂಬಳಿ. ಎಲ್ಲವೂ ಸ್ವಚ್ಛ. ಶೀತಲಗಾಳಿಯನ್ನು ತಡೆಯುವ ದೃಷ್ಟಿಯಿಂದ ಯಾವಾಗಲೂ

ಕಿಟಕಿ-ಬಾಗಿಲನ್ನು ಮುಚ್ಚುವುದರಿಂದ ದೂಷಿತವಾಗುವ ಹವೆಯನ್ನು ಸುಗಂಧಮಯ ಮಾಡಲು ವಾಯು ಸುಗಂಧೀಕರಣ(Air freshrer)ದ್ರವ್ಯವನ್ನು ಸಿಂಪಡಿಸಿದ್ದರು.

"ಎಲ್ಲವೂ ತೃಪ್ತಿಕರವುಂಟೆ?" ಆತಿಥೇಯಳು ಕೇಳಿದಳು. ಸಂತೃಪ್ತಿಯಿಂದ ತಲೆಯನ್ನು ಅಲುಗಿಸಿದೆ.

"ಸಾಮಾನ್ಯವಾಗಿ ಇಲ್ಲಿಗೆ ಬರುವ ಭಾರತೀಯ ಸಂತರು ನಮ್ಮಲ್ಲಿಗೆ ಬರದೇ ಇರುವುದಿಲ್ಲ ". ಸಜ್ಜನ-ಮೃದುಸ್ವಭಾವದ ಸ್ತ್ರೀಯಾಕೆ, ಅಭಿಮಾನದಿಂದ ನುಡಿದಳು.

ಸ್ನಾನ-ಪೂಜೆಗೆ ಸಿದ್ಧರಾಗಬಹುದೆಂದು ಶ್ರೀದೇವಿ ಸೂಚಿಸುತ್ತಲೇ ಮಡಿವಸ್ತ್ರವನ್ನು ತೆಗೆದುಕೊಂಡು ಹೊರಟೆ. ಸ್ನಾನದ ಕೋಣೆ ತೋರಿಸಿದರು. ಅಲ್ಲಿ ಪಿಂಗಾಣಿಯ ತೊಟ್ಟಿ (tub) ಮಾತ್ರ. ಹೇಗೆ ಸ್ನಾನ ಮಾಡುವುದು? ಅದರಲ್ಲಿಯೇ ನೀರುಬಿಟ್ಟು ಮಿಂದ ಸ್ನಾನಿಸುವ ವಿಚಾರ ಗೊತ್ತಿದ್ದರೂ, ಆ ಪದ್ಧತಿಗೆ ಮನ ಅನುಮೋದಿಸದು. ಮಿಂದ ನೀರಲ್ಲೇ ಎಮ್ಮೆ ಮೀಯುವಂತೆ ಹೇಗೆ ಮೀಯುವುದು ? ನಾನು ಸಂಕೋಚ ಪಡತೊಡಗಿದಾಗ ಆತಿಥೇಯಳಿಗೆ ಅರಿವಾಯಿತು. 'ನನಗೆ ಗೊತ್ತು ಭಾರತೀಯರ ಪ್ರವೃತ್ತಿ! ಆ ಕಡೆ ಷವರ್ ಇದೆ. ತುಂತುರುಸ್ನಾನ ಗೈಯಬಹುದು' ಎಂದಾಗ ಸಮಾಧಾನವಾಯಿತು. ಒಂದು ವಿಶಿಷ್ಟ ಸಂಸ್ಕೃತಿಯಲ್ಲಿ ಬೆಳೆದವರಿಗೆ, ತೀರಾ ಭಿನ್ನವಾದ ಜೀವನ ವಿಧಾನ ಒಗ್ಗುವುದು ಎಷ್ಟು ಕಷ್ಟ ಎನ್ನಿಸಿತು. ಆಗ ನೆನಪಾಯಿತು, ಇಂಗ್ಲೆಂಡಿಗೆ ಮೊದಲಬಾರಿಗೆ ಹೋಗಿದ್ದ ಭಾರತೀಯನೋರ್ವ ಟಬ್ಬಿನ ತುಂಬ ನೀರನ್ನು ಬಿಟ್ಟು ಕೊಂಡು, ಪ್ಲಾಸ್ಟಿಕ್ ಬಕೆಟಿನಲ್ಲಿ ಮೊಗೆದು ಹೊರಗೆ ನಿಂತು ಸುರಿದುಕೊಂಡನಂತೆ. ನೀರು ಹೋಗಲು ಆಸ್ಪದವಿರುವುದಿಲ್ಲವಾದ ಕಾರಣ ನೀರು ನಿಂತು, ಹೆಚ್ಚಾಗಿ, ಬಾಗಿಲು ದಾಟಿ ಹೊರಬಂದಾಗ ಮನೆಯವರು ಗಾಬರಿಗೊಂಡು ಬಾಗಿಲು ಬಡಿದರಂತೆ. ಆ ನೀರನ್ನು ತೆಗೆಯಬೇಕಾದರೆ ಸಾಕು ಸಾಕಾಗಿರಬೇಕು!

ಎಂಥಾ ಅನಾಗರಿಕ ಪದ್ಧತಿಯಪ್ಪಾ ತೊಟ್ಟಿಯಲ್ಲಿ ಸ್ನಾನಮಾಡುವುದು ಎಂದು ನಮಗೆ ಅನ್ನಿಸದಿರದು. ಅಷ್ಟೇ ವಿಲಕ್ಷಣವಾಗಿ ಕಾಣುವುದು ಟಿಷ್ಯೂಪೇಪರನ್ನು ಉಪಯೋಗಿಸಿ ಶೌಚೇಂದ್ರಿಯಗಳನ್ನು ಸ್ವಚ್ಛ ಮಾಡಿಕೊಳ್ಳುವುದು. ಕೈಗೆ ಮೂರು ಬಾರಿ ಮಣ್ಣನ್ನೋ ಬೂದಿಯನ್ನೋ ತಿಕ್ಕಿ ಕೈತೊಳೆದು ಮಡಿ ಮಾಡುವ ಜನರಿಗಂತೂ ಅಂಥ ಪಾಪ, ಪಾತಕ ಬೇರೊಂದಿರಲಿಕ್ಕಿಲ್ಲ. ಆದರೆ ಬಯಲು ಸೀಮೆ, ಉಷ್ಣನಾಡಿನ ಜನರಿಗೆ ಅಲ್ಲಿಯ ಪರಿಸರದ ತೀಕ್ಷ್ಣತೆ ಅರ್ಥವಾಗದು. ಚಳಿಗಾಲದಲ್ಲಿ ಉಣ್ಣೆ ಬಟ್ಟೆ ತೆಗೆದು ಮೈಯನ್ನು ಹವೆಗೆ ನಿಲ್ಲಿಸಿದರೆ ರಕ್ತ ಹೆಪ್ಪುಗಟ್ಟುವಂತೆ ಆಗುವಾಗ, ಆ ಜನ ನೀರನ್ನು ಹೇಗೆ ತಾನೇ ಹೆಚ್ಚಾಗಿ ಬಳಸಿಯಾರು ? ಬಿಸಿ ನೀರಲ್ಲಿ ಪೂರ್ಣವಾಗಿ ಶರೀರವನ್ನು ಮುಳುಗಿಸಿ ಮೀಯದಿದ್ದರೆ ಚಳಿ ತಡೆಯಲು ಹೇಗಾದೀತು? ಬಹುಶಃ ಪರಿಸರದ ಒತ್ತಡವೇ ನಮ್ಮಿಂದ ತೀರ ಭಿನ್ನವಾದ ಕೆಲವು ಆಚರಣೆಗಳನ್ನು ಅವರಲ್ಲಿ ರೂಢಿಸಿರಬಹುದು.

ಬಿಸಿನೀರು ಆಗಿಂದಾಗೇ ಅನಿಲ ಸಹಾಯದಿಂದ ಕಾಯ್ದು ಬರುವುದಂತೂ ತುಂಬಾ ಹಿತಕಾರಿ. ಸದಾಕಾಲ ಬಿಸಿನೀರಿನ ಅವಶ್ಯಕತೆ ಇರುವ ಆ ಜನರು ವಿದ್ಯುತ್ ಬಾಯಿಲರನ್ನು ಆಶ್ರಯಿಸಿದರೆ ಸಾಧ್ಯವೇ ? ಒಂದೇ ತಂಬಿಗೆ ಬಿಸಿ ನೀರು ಬೇಕಾದರೂ, ನಾವು ಕಾಯಿಲ್ ಮುಳುಗುವಷ್ಟು ನೀರನ್ನು ಬಿಸಿಮಾಡಲೇಬೇಕಾಗುತ್ತೆ. ಅಲ್ಲಿ ಹಾಗಲ್ಲ ; ಒಂದೇ ತಂಬಿಗೆಯನ್ನು ಎರಡು ಸೆಕೆಂಡುಗಳಲ್ಲಿ ಬಿಸಿಗೈಯಬಹುದು. ಒಂದು ಬೇಸಿನ್ನಿಗೆ ಎರಡು ನಳದ ಜೋಡಣೆ. ಒಂದರಲ್ಲಿ ತಣ್ಣೀರು. ಇನ್ನೊಂದನ್ನು ತಿರುವುತ್ತಿದ್ದಂತೆಯೇ ಪಕ್ಕದಲ್ಲಿರುವ ಅನಿಲ ಯಂತ್ರದಲ್ಲಿ ಧಗ್ಗನೆ ಉರಿ ಏಳುತ್ತದೆ. ಆ ಉರಿಯ ಮಧ್ಯೆ ನಲ್ಲಿಯ ಕೊಳವೆ ಹಾಯ್ದಿರುತ್ತದೆ. ನೀರು ಕಾಯ್ದು ಬರುತ್ತದೆ. ನಲ್ಲಿಯನ್ನು ನಿಲ್ಲಿಸಿದ ತಕ್ಷಣ, ಅಲ್ಲಿ ಬೆಂಕಿ ಆರುತ್ತದೆ. ಸಮಯ–ಹಣ ಎರಡೂ ವ್ಯರ್ಥವಾಗವು. ನಮಗೆಷ್ಟು ಬೇಕೋ ಅಷ್ಟು ನೀರನ್ನು ಬಿಸಿ ಮಾಡಿಕೊಳ್ಳುತ್ತಲೇ ಇರಬಹುದು.

ಈಗ ಇಲ್ಲೊಂದು ಮಾತನ್ನು ಹೇಳಿ ಬಿಡುವೆ; (ಅದರ ಅನುಭವ ನಂತರ ಆಯಿತು) ಬಾಡಿಗೆಗೆ ತೆಗೆದುಕೊಂಡ ಫ್ಲ್ಯಾಟ್‌ಗಳಲ್ಲಿ ಹಣ ಹಾಕಿಯೇ ವಿದ್ಯುತ್, ಅನಿಲಗಳನ್ನು ಬಳಸುವ ಪದ್ಧತಿ ಬಹಳಷ್ಟು ಒಳ್ಳೆಯದು. ಇಲ್ಲವಾದರೆ ಎಲ್ಲವೂ ತುಟ್ಟಿ ಇರುವ ಆ ನಾಡಿನಲ್ಲಿ ಬಾಡಿಗೆದಾರರು ಮಾಲಿಕರ ರಕ್ತ ಹಿಂಡಿಯಾರು; ಸೆಲ್ಫ್–ಕಂಟೇನ್ಡ್ ಒಂದೇ ಕೋಣೆಯಿದ್ದರೂ ಅಲ್ಲಿ ವಿದ್ಯುತ್ ಮತ್ತು ಅನಿಲವಾಹಕ ಮೀಟರ್. ಐದು, ಹತ್ತು ಪೆನ್ನಿ ನಾಣ್ಯಗಳನ್ನು ಹಾಕಿದರೇನೇ ಅವು ಉಪಯೋಗಕ್ಕೆ ಅನಿಲವನ್ನು ಹರಿಯ ಬಿಡುವುದು; ವಿದ್ಯುತ್ತನ್ನು ಪ್ರವಹಿಸುವುದು. ಆ ಹಣದ ಅವಧಿ ಮುಗಿಯುತ್ತಿದ್ದಂತೆಯೇ ಚಕ್ಕನೆ ನಿಂತು ಬಿಡುವವು. ಈ ವ್ಯವಸ್ಥೆ ನೋಡಿದಾಗ ನನಗೊಂದು ವಿಚಾರ ಸ್ಫುರಿಸಿತು. ವಿದ್ಯುತ್ ಮನೆಯ ತುಂಬ ಹರಿಯುತ್ತಿದ್ದರೂ, ನಾಣ್ಯವನ್ನು ಮೀಟರಿನಲ್ಲಿ ಹಾಕದಿದ್ದರೆ ನಮ್ಮ ಪಾಲಿಗೆ ಅದು ಇಲ್ಲ. ಹಾಗೆಯೆ ದೈವೀಶಕ್ತಿಯೆಂಬುದು ಲೋಕದಲ್ಲೆಲ್ಲ ಓತಪ್ರೋತವಾಗಿ ತುಂಬಿ ತುಳುಕುತ್ತಿದ್ದರೂ, ಭಕ್ತಿ ಎಂಬ ಮೀಟರಿನಲ್ಲಿ ಸಾಧನೆ ಎಂಬ ಹಣವನ್ನು ಹಾಕದಿದ್ದರೆ ದಿವ್ಯಾನುಗ್ರಹ ನಮ್ಮ ಪಾಲಿಗೆ ಇಲ್ಲ. ಮತ್ತು ಪರಮಾತ್ಮನದು ಯಾವಾಗಲೂ ಲೇಬರ್ ಕಾಂಟ್ರ್ಯಾಕ್ಟ್, ದಿನಗೂಲಿಯಲ್ಲ. ಅಂದರೆ, ನಾವು ದುಡಿಯಲಿ ಬಿಡಲಿ ದಿನಗೂಲಿಯಂತೆ ಕರುಣೆ ಸಿಗದು ; ನಾವು ದುಡಿದಷ್ಟು ಮಾತ್ರ ಸಿಗುವುದು. ನಾಣ್ಯಕ್ಕೆ ಸಮನಾಗಿ ವಿದ್ಯುತ್ ಪಡೆವಂತೆ, ಸಾಧನೆಗೆ ತಕ್ಕಷ್ಟು ಫಲ ಪಡೆಯುವೆವು.

ತುಂತುರುಧಾರೆಯಲ್ಲಿ ಹಿತವಾಗಿ ಮಿಂದು ಪೂಜೆಗೆಂದು ಕೋಣೆಗೆ ಬಂದೆ. ಎಲ್ಲಿ ಮಾಡುವುದು? ನೆಲಕ್ಕೆಲ್ಲ ಪೂರ್ಣವಾಗಿ ರತ್ನಗಂಬಳಿ ಹಾಸಿದ್ದಾರೆ. ಒಂದು ಅಂಗುಲದಷ್ಟೂ ಜಾಗವಿಲ್ಲ. ಮಡಿ? ಪ್ರತಿನಿತ್ಯ ನೆಲವನ್ನು ನೀರಲ್ಲಿ ತೊಳೆದು, ಕುಳಿತು ಪೂಜೆ ಮಾಡುವ, ಪೂಜೆ ಮುಗಿಸುವತನಕ ಯಾವುದೇ ಮೈಲಿಗೆ ಬಟ್ಟೆ ಮುಟ್ಟದೆ ಇರುವವರು

ಮಡಿಯನ್ನು ಕಾಪಾಡಿಕೊಳ್ಳುವುದೆಂತು ? ನಗೆ ಬಂತು. 'ಮನಸ್ಸಿನ ಶುದ್ಧಿಯೇ ಮಡಿ,
ಚಿತ್ತದ ಮಲಿನತೆಯೇ ಮೈಲಿಗೆ' ಎಂಬ ತತ್ತ್ವ ಜ್ಞಾನವನ್ನು ಮನಸ್ಸಿಗೆ ಹೇಳಿ,
ಅದನ್ನು ಸಾಂತ್ವನಿಸಿ, ನಾನು ಒಯ್ದಿದ್ದ ಆಸನವೊಂದನ್ನು ಹಾಕಿಕೊಂಡು ಪೂಜಿಸಿದೆ.
ನಂತರ ಪ್ರಸಾದ ಸ್ವೀಕಾರ. ಮಧ್ಯಾಹ್ನ ಒಂದುವರೆ ಗಂಟೆ. ಐದು ತಾಸುಗಳಷ್ಟು
ಗ್ರೀನ್‌ವಿಚ್ ಟೈಮ್ ಆಧಾರದ ಮೇಲೆ ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಳ್ಳಿದ್ದ
ರಿಂದಾಗಿ, ಸುಮಾರು ಇಪ್ಪತ್ತೊಂದು ತಾಸುಗಳಿಂದ ಆಹಾರವಿಲ್ಲದೆ ಆಕ್ರಂದನ ಗೈಯು
ತ್ತಿತ್ತು ಜಠರಾಗ್ನಿ. ಪ್ರಸಾದ ಸ್ವೀಕಾರದ ನಂತರ, ಹಸಿದು ಅತ್ತು ಅತ್ತು ದಣಿದು
ಹಾಲುಸಿಕ್ಕ ನಂತರ ಶಾಂತವಾಗುವ ಕೂಸಿನಂತೆ, ಸಮಾಧಾನ ತಾಳತೊಡಗಿತು. ನನ್ನ
ಪ್ರಸಾದಾದನಂತರ ಡಾಕ್ಟರ್ ಮತ್ತು ಶ್ರೀದೇವಿ ಹೊರಟು ನಿಂತರು. ಅಲ್ಲಿ ಸಿಗುವ
ವೈವಿಧ್ಯ ಬಗೆಯ ಹಣ್ಣುಹಂಪಲನ್ನಿತ್ತು, ನಮಸ್ಕರಿಸಿ, 'ನಾವಿನ್ನು ಹೊರಡುತ್ತೇವೆ.
ಶ್ರೀ ದೇವಿಯು ಪರೀಕ್ಷೆಗೆ ಅಭ್ಯಸಿಸುತ್ತಿದ್ದಾಳೆ. ಅದಕ್ಕಿಂತ ಮಿಗಿಲಾಗಿ ನಾನು ಇಂದು
ಅರ್ಧ ದಿನದ ಬಿಡುವು ಪಡೆಯಬೇಕಾದರೆ ಆಕಾಶ–ಭೂಮಿಯನ್ನೊಂದು ಮಾಡಬೇಕಾ
ಯಿತು. ಬ್ರಿಟಿಷ್ ಮೂಲ ತರುಣರು ಹೆಚ್ಚಾಗಿ ಶ್ರಮಿಸದೆ ವಾರಾಂತ್ಯ ದಿನಗಳಲ್ಲಿ
ವಿಹಾರಕ್ಕೆ ಹೊರಟು ಹೋಗುತ್ತಾರೆ. ನಾವು ಭಾರತೀಯರು ವಿಧೇಯರು, ವಿದೇಶಿ
ಯರಾಗಿರುವ ಕಾರಣ ನಿಷ್ಠಾವಂತರಾಗಿರುತ್ತೇವೆಂದು ನಮ್ಮ ಮೇಲೆ ಹೆಚ್ಚಿನ ಭಾರ
ಹಾಕುತ್ತಾರೆ. ಆದ್ದರಿಂದ ಮಧ್ಯಾಹ್ನದ ಕರ್ತವ್ಯಕ್ಕೆ ಹೋಗಲೇ ಬೇಕಾಗಿದೆ. ಅತ್ಯ
ವಸರವಿದ್ದರೆ ಫೋನ್ ಮಾಡಿ...." ಎಂದು ದೂರವಾಣಿ ನಂಬರ್ ಕೊಟ್ಟರು.
"ಅಲ್ಲದೇ, ನಿನ್ನೆ ರಾತ್ರಿ ಇಡೀ ನಿದ್ರೆಗೆಟ್ಟು ದಣಿವಾಗಿರಬೇಕು. ವಿಶ್ರಾಂತಿ
ಪಡೆಯಿರಿ...." ಶ್ರೀದೇವಿ ನುಡಿದು, ಆತಿಥೇಯರಿಗೆ ಹೆಚ್ಚಿನ ಕಾಳಜಿ ವಹಿಸಲು
ಇನ್ನೊಮ್ಮೆ ಸೂಚನೆ ನೀಡಿ ಹೊರಟರು.

ನಾನು ಸಾಮಾನುಗಳನ್ನು ಹೊಂದಿಸುತ್ತ 'ಯಾರ್ಯಾರಿಗೆ ನಾನು ಬಂದ ವಿಷಯವನ್ನು
ತಿಳಿಸುವುದು' ಎಂದು ಆಲೋಚಿಸ ತೊಡಗಿದೆ. ಹಾಗೆಯೇ ಆರಾಮವನ್ನು ಪಡೆಯೋಣ
ವೆಂದು ಅಡ್ಡಾದೆ. ಅಷ್ಟರಲ್ಲಿ ಬಾಗಿಲ ಮೇಲೆ ಟಕ್‌ಟಕ್ ಬೇಸರದಿಂದ ಬಾಗಿಲು ತೆರೆದೆ.
ಓರ್ವ ಅಪರಿಚಿತ ತರುಣ, ಸುಮಾರು ಇಪ್ಪತ್ತೈದು ವರುಷವಾಗಿರಬೇಕು, "ಯಾರು
ಬೇಕಾಗಿತ್ತು?" ಬಹುಶಃ ಗೊತ್ತಿಲ್ಲದೆ ಬಡಿದಿರಬೇಕು ಎಂದುಕೊಂಡೆ.

"ತಾವೇ ಬೇಕಾಗಿತ್ತು, ಒಳಗೆ ಬರಲೇ ?" ಎಂದ. ನನಗೆ ತುಂಬಾ ಕಳವಳ
ವಾಯಿತು. "ನನಗೆ ಬಹಳ ದಣಿವಾಗಿದೆ. ಮಾತನಾಡಲು ಸಾಧ್ಯವೇ ಇಲ್ಲ. ನಿಂತೇ
ಹೇಳಿ, ಏನು ಕೆಲಸವಿತ್ತು?" ಅಂತರಂಗದ ವ್ಯಾಕುಲವನ್ನು ಹತ್ತಿಕ್ಕಿ ಕೊಂಡು ಸಮಾ
ಧಾನದಿಂದಲೇ ಹೇಳಿದೆ.

"ನಿಮಗೆ ಹಸ್ತಸಾಮುದ್ರಿಕೆ ಬರುತ್ತಿದ್ದರೆ ನೋಡಿ ಹೇಳಿ. ನನ್ನ ಭವಿಷ್ಯವು ಹೇಗಿದೆ ?'' ಎಂದು. ಹಿಂದುಗಳು ಯಾವ ನಾಡಿನಲ್ಲಿದ್ದರೂ ಈ ಜಾಡ್ಯ ಹೋಗಿಯೇ ಇರುವುದಿಲ್ಲವಲ್ಲಾ ಎಂದು ವಿಸ್ಮಯವಾಯಿತು. 'ಬಹುಶಃ ಶರೀರದಲ್ಲಿರುವ ವಂಶ ಲಕ್ಷಣ ವಾಹಕ 'ಜೀನ್‌ಕಣ'ಗಳಲ್ಲೇ ಇಂಥ ನಂಬಿಕೆಗಳು (ಹಿಂದುಗಳಲ್ಲಿ ಮಾತ್ರ) ಹುದುಗಿರುವವೋ' ಎಂದು ನಗೆ ಬಂದಿತು. '' ಹಸ್ತದ ಗೆರೆಗಳನ್ನು ನೋಡಿ ಭವಿಷ್ಯವನ್ನು ರೂಪಿಸುವ ಗೋಜಿಗೆ ಹೋಗುವ 'ವಿಧಿವಾದಿ' ವಿಚಾರಧಾರೆಯವರಲ್ಲ ನಾವು. ಒಂದು ವೇಳೆ ಹಸ್ತರೇಖೆಗೆ–ಭವಿಷ್ಯಕ್ಕೆ ಯಾವುದಾದರೂ ಸಂಬಂಧವಿದ್ದರೆ, ನಮ್ಮ ಬಾಳನ್ನು ರೂಪಿಸಿಕೊಂಡು ಹಸ್ತರೇಖೆ ಬದಲಿಸಬೇಕೆಂಬ ಪ್ರಯತ್ನವಾದಿಗಳು'' ಎಂದೆ.

"ನಿಮಗೆ ಧರ್ಮ-ದೇವರು, ಆತ್ಮ-ಮುಕ್ತಿ, ಈ ಯಾವುದೇ ತಾತ್ತ್ವಿಕ ವಿಚಾರಗಳು, ಸಾಧನಾ ವಿಧಾನ ಬೇಕಿದ್ದರೆ ಕೇಳಿ ತಿಳಿಸುವೆ...." ಅದೆಲ್ಲ ಬೇಡವೆಂದು ಹೊರಟು ಹೋದ. ಕಾಲ ಸರಿಯಿತು. ಹತ್ತಿರವ ಬೃಹತ್ ಕ್ರಿಸ್ತಾಲಯದ ಗೋಪುರ ಗಡಿಯಾರದಿಂದ ಹೊರಟ ನಾದದ ನಾಲ್ಕು ತುಣುಕುಗಳು ಗಂಟೆ ನಾಲ್ಕಾದುದನ್ನು ಸೂಚಿಸಿದವು. ಅಷ್ಟರಲ್ಲಿ ಬಾಗಿಲ ಬಡಿತ. ವೃದ್ಧಿಗೊಂಡ ಬೇಸರದಿಂದ ಯಾರು ? ಎನ್ನುವಾಗಲೇ ಬಾಗಿಲು ತೆರೆಯಿತು. 'ಹಾಂ, ಹೊರಗಿನಿಂದ ತೆರೆಯ ಬಹುದಲ್ಲಾ' ಎಂದು ವಿಸ್ಮಿತಳಾಗುವಾಗಲೇ ಆತಿಥೇಯಳಾದ ಶ್ರೀಮತಿ ಗುಲ್‌ಶನ್ ಪ್ರೇಮಾದೇವಿ ಬಂದಿದ್ದಳು.

''ಈಗ ನಾವೆಲ್ಲ ವಾರಾಂತ್ಯವಾದ ಕಾರಣ ಹೊರಗೆ ಹೋಗುತ್ತೇವೆ. ಲೇಡೀಸ್ ಕ್ಲಬ್ಬು, ಮತ್ತೆ ಸಂಜೆ ಸಿನೆಮಾ. ಬರ್ತೀರಾ...?'' ಎಂದಳು.

"ಇಲ್ಲ ಕ್ಷಮಿಸಿ. ನಮ್ಮ ಮೇಲೆ ನಾವೇ ಹಾಕಿಕೊಂಡ ಕೆಲವು ನಿಯಮ-ನಿಬಂಧನೆಗಳಿವೆ. ನಾನು ಚಲನ ಚಿತ್ರ ನೋಡದೆ ಹನ್ನೊಂದು ವರುಷಗಳಾದವು. ವಿದ್ಯಾರ್ಥಿ ಜೀವನದಲ್ಲಿದ್ದಾಗ ನೋಡಿದುದು. ಈಗ ನೋಡುವುದಿಲ್ಲ...."

''ಅಯ್ಯೋ, ಈ ಸಣ್ಣ ವಯಸ್ಸಿಗೇಕೆ ಇಂಥಾ ನೇಮ?" ಮರುಕ ಸೂಚಿಸಿದಳು. ಯಾವುದೋ ಸೌಭಾಗ್ಯದಿಂದ ನಾವು ವಂಚಿತರಾಗಿದ್ದೇವೆ ಎಂಬ ಭಾವದಿಂದ.

''ನಾವು ಹಿಡಿದ ವೈರಾಗ್ಯ ಪಥವೇ ಅಷ್ಟು ದುರ್ಗಮ. ಅದಕ್ಕೆ ಈ ನಿಯಮಗಳು ಅವಶ್ಯ....''

"ಇರಲಿ, ನಾನು ಒತ್ತಾಯಿಸುವುದಿಲ್ಲ. ಈಗ ನಾವೆಲ್ಲರೂ ಹೋದರೆ ಇಲ್ಲಿ ಯಾರೂ ಇರುವುದಿಲ್ಲ. ನನ್ನ ಮಗ ಒಬ್ಬನೇ ಇರುವುದು. ಸಹಾಯವೇನಾದರೂ ಬೇಕಿದ್ದರೆ ಕಾಲಿಂಗ್ ಬೆಲ್ ಒತ್ತಿದರೆ ಬರುವನು. ನಾವು ಮರಳುವುದು ಇಂದು ರಾತ್ರಿ ಹನ್ನೊಂದರ ಸುಮಾರಿಗೆ....''

ನನಗೆ ದಿಗ್ಭ್ರಾಂತಿಯಾಯಿತು. ಮಾತನಾಡಲು ಬರದಷ್ಟು ಕಳವಳವಾಯಿತು. "ಹೋಗಲೀ, ಈ ಕೋಣೆಗೆ ಒಳಗಿನಿಂದ ಚಿಲುಕ ಹಾಕಲು ಬರದೆ ?" ಈಗಲೇ ಪರೀಕ್ಷಿಸಿದ್ದ ನಾನು ಕೇಳಿದೆ.

"ಕೀಲಿ ಹಾಕಬಹುದು. ಆದರೆ ಅದರ ಒಂದು ಕೈಯಿ ನಮ್ಮ ಕೀಲಿ ಬೋರ್ಡಿನಲ್ಲಿ ಇರುತ್ತದೆ. ನೀವೇನೂ ಚಿಂತಿಸಬೇಡಿ. ಇಲ್ಲಿ ಯಾರೂ ಬರುವುದಿಲ್ಲ....'' ನಮ್ಮ– ನಿಮ್ಮ ಹೊರತು ಬೇರಾರು ತೆಗೆಯಲೂ ಆರರು....'' ನಿರಾಳವಾಗಿ ಹೇಳಿ ಆಕೆ, ಆರಾಮವಾಗಿ ಹೊರಟು ಹೋದಳು. ಅಂಜಿದವರ ಮೇಲೆ ಹಾವನ್ನೆಸೆದಂತಾಯಿತು. ಎಲ್ಲೆಡೆಯಿಂದ ಅಂಧಕಾರವು ಕವಿದಂತಾಗಿ ಕುಳಿತುಕೊಳ್ಳಲಾಗಲೀ, ನಿಂತುಕೊಳ್ಳಲಾಗಲೀ ಸಮಾಧಾನವಿಲ್ಲ. ಕಣ್ಣು ಭಗಭಗನೆ ಉರಿಯುತ್ತಿದ್ದರೂ ನಿದ್ರೆ ಸನಿಹಕ್ಕೆ ಸಾರಲು ಅಂಜುತ್ತಿದೆ. ಅಷ್ಟರಲ್ಲಿ ಗೇಟು ತೆರೆದು ಆತಿಥೇಯಳು ಕಾರನ್ನು ಹತ್ತಿ ಹೊರಟು ಬಿಟ್ಟಳು. ನನ್ನಂತರಂಗದ ತಳಮಳ ಯಾರ ಮುಂದೆ ಹೇಳಲಿ ? ನನ್ನ ಕೋಣೆಯ ಬಾಗಿಲನ್ನು ತೆರೆದು ಸ್ವಲ್ಪ ಇಣುಕಿದೆ. ಕತ್ತಲೆಯೋ ಕತ್ತಲೆ. ಅದು ಬೇಸಿಗೆಯ ಆರಂಭದ ಕಾಲವಾದ್ದರಿಂದ ಸಂಜೆ ಏಳೂವರೆಗೆ ಸೂರ್ಯಾಸ್ತ. ಒಂಬತ್ತರ ನಂತರವೇ ತಿಮಿರವು ಸಂಪೂರ್ಣವಾಗಿ ಬಳಸುತ್ತಿತ್ತು. ಆದರೆ ಕಟ್ಟಡದ ಒಳ ಭಾಗದಲ್ಲಿ ಹೆಚ್ಚು ಕಿಟಕಿಗಳಿಲ್ಲವಾದ್ದರಿಂದ, ಕೆಲವೇ ಕಿಟಕಿಗಳಿದ್ದರೂ ದಪ್ಪ ದಪ್ಪ ತೆರೆ ಬಿಟ್ಟುದರಿಂದ ಬರೀ ತಿಮಿರ. ಆ ಕೋಣೆಯಲ್ಲಿ ಕವಿದುದಕ್ಕಿಂತ ಗಾಢವಾದ ಕತ್ತಲೆ ಮನದಲ್ಲಿ.

"ಏನು ಮಾಡಲಿ ? ಶ್ರೀದೇವಿ–ಅರುಣರಿಗೆ ಫೋನ್ ಮಾಡಲೆ ? ಕರ್ತವ್ಯ ಮಗ್ನರಾದ ಅವರಿಗೆ ಏಕೆ ಹಿಂಸೆ ಕೊಡುವುದು ? ಮತ್ತು ನನ್ನ ಅರ್ಥವಿಲ್ಲದ ಭೀತಿಗೆ ಅವರು ನಗದಿರರೆ ? ರಾಮಚಂದ್ರನ್ ಎಂಬ ಪರಿಚಿತರು ಓರ್ವರು ಪತ್ರ ಮುಖೇನ ಆಹ್ವಾನ ನೀಡಿದ್ದರು. ಅವರ ಸಹಾಯವನ್ನೇಕೆ ಯಾಚಿಸಬಾರದು ? ಫೋನ್ ನಂಬರ್ ಇಲ್ಲದೆ ಹುಡುಕುವುದು ಹೇಗೆ ? ನನ್ನ ಡಯರಿ ತೆಗೆದು ದೂರವಾಣಿ ನಂಬರ್ ಹುಡುಕಿ ಮಾತನಾಡಲು ಯತ್ನಿಸಿದೆ ; ಅವರು ಊರಲ್ಲಿ ಇರಲಿಲ್ಲ. ಧೈರ್ಯ ಕುಸಿಯುವಾಗಲೇ ಉಮಾ ಮಹೇಶ್ವರಿಯ ನೆನಪಾಯಿತು. ವಿಳಾಸ ದಿನಚರಿಯಲ್ಲಿ ಅವಳ ಹೆಸರಿದ್ದರೂ, ದೂರವಾಣಿ ನಂಬರ್ ಇರಲ್ಲಲಿ. ಫೋನ್‌ಡಿರೆಕ್ಟರಿಯಲ್ಲಿ ಅವಳ ಹೆಸರು ಇರುವ ಸಾಧ್ಯತೆ ಇಲ್ಲ. ಆಕೆ ಇದ್ದುದು ಸ್ವಂತ ಮನೆಯಲ್ಲ. ಮುಳುಗುವ ಇರುವೆ ಹುಲ್ಲುಕಡ್ಡಿ ಆಸರೆಯಾಗಬಹುದೆಂಬ ಭರವಸೆ ತಾಳ್ದಂತೆ, ಅವಳನ್ನು ಸ್ಮರಿಸಿಕೊಂಡೆ. ಅಲ್ಲಿಗೆ ಹೋಗುವುದು ಹೇಗೆ ? ರೋಸಿಲಿನ್ ಹಿಲ್, ಹ್ಯಾಮ್‌ಸ್ಟೆಡ್ ; ಯಾವ ಭಾಗವೋ ಬಲ್ಲವರಾರು ? ಬೆಳ್ಳಿಯ ಪೂಜಾ ಸಾಮಾನು ಕೈಚೀಲದಲ್ಲಿ ಇರಿಸಿಕೊಂಡು, ಬಳಿಯಿದ್ದ ಹಣವನ್ನು ಭದ್ರವಾಗಿ ಬ್ರೀಫ್ ಕೇಸಿನಲ್ಲಿ ಇಟ್ಟುಕೊಂಡು ಹೊರಹೊರಟೆ.

ಅಪರಿಚಿತ ನಗರ; ಯಾವ ಆಚಾರ–ವಿಚಾರ–ವಿಧಾನಗಳ ಪರಿಚಯವಿಲ್ಲ. ಒಬ್ಬಂಟಿಗಳಾಗಿ ನಿರ್ಜನ ರಸ್ತೆಯಲ್ಲಿ ಸಾಗಿದೆ. ನನ್ನ ಆತಂಕ–ವ್ಯಥೆಗಳನ್ನು ತೋಡಿ ಕೊಳ್ಳಲು ಸಹ ಯಾರೂ ಇಲ್ಲ. ತೋಡಿಕೊಂಡರೆ ಭಾರತೀಯರಾದ ನಮ್ಮ ಆತಂಕ ಆ ಸಂಸ್ಕೃತಿಯವರಿಗೆ ವಿಲಕ್ಷಣ ಅಥವಾ ಅರ್ಥರಹಿತವಾಗಿ ಕಾಣಬಹುದು. ವಿಚಿತ್ರವಾದ ಮಾನಸಿಕ ಹಿಂಸೆ. ಮಳೆಗೆ ಸಿಕ್ಕ ಗುಬ್ಬಿಮರಿ ತೋಯಿಸಿಕೊಂಡು ಒಳಗೇ ನಡುಗುವಂತೆ, ತೀರಾ ಭಿನ್ನವಾದ ಪರಿಸರದಲ್ಲಿ ಏಕಾಂಗಿಯಾಗಿ ಸಿಕ್ಕು ; ಅಂತರಾಳದಲ್ಲೇ ನಡುಗಿದೆ. ಆದರೆ ಎಂಥ ಪ್ರಸಂಗದಲ್ಲೂ ದೀನವಾಗಿ, ಹೀನವಾಗಿ ತಲೆಬಾಗದ ಸ್ವಾಭಿಮಾನ ; ಅಧೀರಳಾಗದ ಮನೋಸ್ಥೈರ್ಯ; ಬಸವಣ್ಣನು ಬೆನ್ನಿಗೆ ಎಂಬ ದೃಢವಿಶ್ವಾಸ. ಮೌನವಾಗಿ ಚಿಂತಿಸುತ್ತ ರಸ್ತೆಯಲ್ಲಿ ನಡೆದೆ, ಹತ್ತುನಿಮಿಷ ಕಾಲ. ರಸ್ತೆಯಲ್ಲಿ ನಿರ್ಲಿಪ್ತ ವಾಗಿ ಸಾಗುವ ಟ್ಯಾಕ್ಸಿಗೆ ಕೈಮಾಡಿದೆ. ಅವನು ತುಸು ದೂರ ಮುಂದೆ ಹೋಗಿ ನಿಲ್ದಾಣ ವಿದ್ದಲ್ಲಿ ನಿಲ್ಲಿಸಿದ (ಎಲ್ಲೆಂದರಲ್ಲಿ ನಿಲ್ಲಿಸಲು ಬರದ ಕಾರಣ). ಟ್ಯಾಕ್ಸಿ ಹತ್ತಿ ಅಡ್ರೆಸ್ ಅವನ ಕೈಲಿ ಕೊಟ್ಟೆ. ಮಾತಿಲ್ಲ, ಕಥೆಯಿಲ್ಲ, ತಲೆಯಲ್ಲಾಡಿಸಿ ಹೊರಟ. ಇನ್ನೂ ಸೂರ್ಯನ ಬೆಳಕು ಚಂದವಿದ್ದುದರಿಂದ ಅಧೀರಳಾಗದೆ ಕುಳಿತಿದ್ದೆ. ಅಂತೂ ನಮ್ಮ ಟ್ಯಾಕ್ಸೀವಾಲಾಗಳಂತೆ ಅನವಶ್ಯಕವಾಗಿ, ಮೀಟರ್ ಜಾಸ್ತಿ ಓಡಲೆಂದು ಓಡಿಸದೆ, ನೇರವಾಗಿ ತಂದು, 'ಇಲ್ಲಿ ಇಳಿಯಿರಿ' ಎಂದ. 'ಮನೆ ಹುಡುಕಿಕೊಡುವೆಯಾ ?' ಎಂದರೆ 'ಕ್ಷಮಿಸಿ, ಇಲ್ಲೇ ಇದೆ. ನೋಡಬಹುದು...." ಎಂದು ಹಣ ಪಡೆದು ಹೋದ, ಮನೆ ಬೇಗ ಸಿಕ್ಕಿತು. ಕರೆಗಂಟೆ ಒತ್ತಿದಾಗ ಯಾರೋ ತೆರೆದರು. ಉಮಾ ಮಹೇಶ್ವರಿ ಇರುವಳೇ ? ಎಂದಾಗ, 'ಆ ಹೆಸರಿನವರು ಯಾರೂ ಇಲ್ಲ' ಎಂದ ಆ ವ್ಯಕ್ತಿ. ಅಬ್ಬಾ ! ಇದ್ದ ಬದ್ದ ಆಸೆಯೂ ಬತ್ತಿತು. ಆಗ ನೆನಪಾಯಿತು, ಒಂದೇ ತಿಂಗಳ ಹಿಂದೆ ಆಕೆ ಪತ್ರ ಬರೆದಿದ್ದಳು: 'ತಾನು ಫ್ರಾನ್ಸಿಗೆ ಹೋಗಲಿರುವುದಾಗಿ ಮತ್ತು ಹದಿನೈದು ದಿವಸಗಳಲ್ಲಿ ಲಂಡನ್ನಿಗೆ ಬರುವುದಾಗಿ.' 'ಹಾಗಾದರೆ ಬಂದಿರುವಳೋ ಇಲ್ಲವೊ ? ಈಗೇನು ಮಾಡಲಿ? ನಿಜಕ್ಕೂ ಬಂದಿಲ್ಲದಿದ್ದರೆ ಭಾರತದಿಂದ ಸಹಾಯಕ್ಕೆ ಯಾರನ್ನಾ ದರೂ ಕರೆಸಿಕೊಳ್ಳುವವರೆಗೆ ಹೇಗೆ ಇಲ್ಲಿ ಕಾಲ ಕಳೆಯುವುದು ? ಅಥವಾ ಉಮಾ ಅಡ್ರೆಸ್ ಬದಲು ಮಾಡಿರುವಳೊ ? ಇಷ್ಟೇಕೆ ಮಾನಸಿಕ ಕ್ಲೇಶ? ವಾಪಸ್ಸು ಏಕೆ ಹೊರಟು ಬಿಡಬಾರದು? ಹೇಗಿದ್ದರೂ ರಿಟರ್ನ್ ಟಿಕೆಟ್ ಇದೆ....!" ದುರ್ಬಲ ಮನ ತಲೆ ಎತ್ತಿ ಕೇಳಿತು.

ಸ್ವಾಭಿಮಾನ ಹೆಡೆ ಎತ್ತಿ ನಿಂತಿತು. 'ಸಾಧ್ಯವಿಲ್ಲ. ಆಮಂತ್ರಣಗಳಿವೆ. ಮುಖ್ಯ ಅತಿಥಿಯರಾಗಿ ಸಮ್ಮೇಳನಕ್ಕೆ ಆಮಂತ್ರಿಸಲ್ಪಟ್ಟು ಬಂದು ವಾಪಸ್ಸಾಗುವುದೇ ? 'ಕಳನೇರಿ ಇಳಿವುದು ವೀರಂಗೆ ಮತವಲ್ಲ. 'ಕಾದಬೇಕು', 'ಅಂಕ ಓಡಿದರೆ ತೆತ್ತಿಗಂಗೆ ಭಂಗ' ಬಸವಣ್ಣನ ವಾಣಿ ನೆನಪಾಯಿತು. ವೀರನಾದವನು 'ನಾನು ಹೆದರಿ ಹಿಮ್ಮೆಟ್ಟಿದರೆ ಅಪ್ಪ ಬಸವಣ್ಣನ ಶಕ್ತಿಗೆ ಭಂಗ'. ಎಂದುಕೊಂಡೆ.

"ನೋಡಿ; ಆಕೆ ಫ್ರೆಂಚ್ ಹುಡುಗಿ. ಅಡ್ರೆಸ್ ಹೀಗೆ ಕೊಟ್ಟಿದ್ದಾಳೆ. ವಿಳಾಸ ಎದುರು ಹಿಡಿದೆ" "ಓಹೋ....ಇವಳಾ ? ನಾವು ಮಿಸ್. ಆರ್ಯಾ ಎನ್ನುತ್ತೇವೆ. ನೀವು ಉಮಾಮಹೇಶ್ವರಿ ಎಂದಿರಿ. ನಮಗೆ ಅರ್ಥವಾಗಲಿಲ್ಲ. ಈಕೆ ೮ ನೆಯ ಕೋಣೆಯಲ್ಲಿರು ತ್ತಾಳೆ....ಎಷ್ಟೋ ಧೈರ್ಯ ಬಂದಿತು. ಮೆಲ್ಲನೆ ಒಳಗೆ ಸಾಗಿ, ಎಂಟನೆಯ ಕೋಣೆ ಹುಡುಕುತ್ತಾ ಹೊರಟೆ. ದೊಡ್ಡಭವನ ಅದು, ಹತ್ತಾರು ಕೋಣೆಗಳು ಅಲ್ಲಿ. ಉಮಾಳದು ಎರಡನೆ ಅಂತಸ್ತಿನಲ್ಲಿದ್ದಿತು. ಮಿಣುಕು ಮಿಣುಕು ಅನ್ನುವ ಆಶಾಕಿರಣ ಹೊತ್ತು, ಮೇಲೇರಿ ಕೊಠಡಿಯ ಬಾಗಿಲ ಮೇಲಿನ ಸಂಖ್ಯೆ ಎಂಟನ್ನು ನೋಡಿದಾಗ, ಹಲವು ದಿನಗಳಿಂದ ಅನ್ನ ಕಾಣದವನಿಗೆ, ಹಸಿದು ಗೋಗರೆವಾಗ, ಅಮೃತಾನ್ನ ಸಿಕ್ಕಂತಾ ಯಿತು. ಬಾಗಿಲು ಬಡಿದೆ, ಉತ್ತರವೇ ಇಲ್ಲ; ಐದು ನಿಮಿಷ ಕಾಯ್ದು, ಮತ್ತೆ ಬಡಿದೆ. ಉಹೂಂ; ಮಾರ್ದನಿಯಿಲ್ಲ. ಗಾಳಿಗೊಡ್ಡಿದ ಸೊಡರಿನಂತೆ ಹೊಯ್ದಾಡಿತು ಮನ, ಇನ್ನು ಅದೊಂದು ಆಶಾ ಕಿರಣವೂ ಆರುವಂತೆ ಕಂಡಿತು. ಪಕ್ಕದ ಕೋಣೆಯತ್ತ ಹೋದೆ. ಅಲ್ಲಿ ಬಾಗಿಲು ಬಡಿದಾಗ ತರುಣಿಯೋರ್ವಳು ಇಣುಕಿದಳು.

"ಉಮಾಮಹೇಶ್ವರಿ ಆರ್ಯಾ ಇರುವಳೇ?" ಕೇಳಿದೆ.

"ಇದು ವಾರಾಂತ್ಯ ಬೆಳಿಗ್ಗೆ ಹೋಗಿರಬೇಕು. ರಾತ್ರಿ ಹತ್ತಾಗಬಹುದು ಬರಲು...."

"ಎಲ್ಲಿ ಹೋಗಿರುವಳು ಗೊತ್ತೇ....?"

"ನಾವು ಇನ್ನೊಬ್ಬರ ವೈಯಕ್ತಿಕ ಬರಹೋಗುಗಳನ್ನು ಗಮನಿಸುವುದಿಲ್ಲ. ಕೆಲಸ ವಿದೆ, ಕ್ಷಮಿಸಿ...." ಬಾಗಿಲನ್ನು ಮುಂದಕ್ಕೆಳೆದುಕೊಂಡು ಗೂಡು ಸೇರಿದಳು.

ದಟ್ಟಾರಣ್ಯದಲ್ಲಿ ಸಿಕ್ಕ ಎಳೆಗರುವಿನಂತಾಯ್ತು ನನ್ನ ಪರಿಸ್ಥಿತಿ. "ಹೆಣ್ಣು ಮಗಳಾಗಿರುವುದಕ್ಕೆ ತಾನೇ ಇಷ್ಟು ಅಂಜಿಕೆ? ಗಂಡಸರಿಗೆ ಯಾವ ತೊಡಕೂ ಇಲ್ಲ...." ಬುದ್ಧಿ ಹೇಳಿತು.

"ಗೊತ್ತಿದ್ದೂ ಒಂಟಿಯಾಗಿ ಏಕೆ ಬಂದೆ ?" ಮನಸ್ಸು ಛೇಡಿಸಿತು, ಅವಕಾಶ ಸಿಕ್ಕಿದ್ದೇ ಸಾಕೆಂದು.

"ಇದು ಮಿತಿಮೀರಿದ ಆತ್ಮ ವಿಶ್ವಾಸ...." ದುರ್ಬಲ ಮನ ಸೋಬಾನ ಹಾಡಿತು. ಆದರೆ, ಈ ಎಲ್ಲವುಗಳ ತಲೆಮೇಲೆ ಹೊಡೆದು ಅಂತರಾತ್ಮ ಹೇಳಿತು: "ಸ್ತ್ರೀಯಾದ ರೇನು ? ಬಳೆತೊಟ್ಟ ಕೈಯಲ್ಲ, ರುದ್ರಾಕ್ಷಿ ಧರಿಸಿದ ಕೈಯಿದು...."

ಜೊತೆಗೆ ಆ ದೇಶದ ಸಂಸ್ಕಾರದ ಬಗ್ಗೆ ಜಿಗುಪ್ಸೆ ಉಕ್ಕಿ ಹರಿಯಿತು. ಕೇಳಿದ ಪ್ರಶ್ನೆಗೆ ಉತ್ತರಿಸುವ ಸೌಜನ್ಯ, ಬಂದವರ ಕಷ್ಟ-ಸುಖ ವಿಚಾರಿಸುವ ಆದರ ಬೇಡವೆ? ಎಂಥಾ ಔದಾಸೀನ್ಯ; ನಮ್ಮ ದೇಶದಲ್ಲಿಯಾದರೆ ಅಪರಿಚಿತ ದೇಶದ ಒಂದು ಹೆಣ್ಣು ಮಗಳು ಹೀಗೆ ಬಂದಾಗ ಯಾರಾದರೂ ಸರಿ, ಕರೆದು ಕುತೂಹಲದಿಂದ ಮಾತನಾಡಿಸಿ, ಏನಾದರೂ ಸಹಾಯ ಮಾಡುವರು. "ನಮ್ಮದು ಬಡರಾಷ್ಟ್ರ ಇರಬಹುದು, ಆದರೆ

ಮಾನವೀಯತೆಯಲ್ಲಿ ಬಡತನವಿಲ್ಲ. ವಿದೇಶಿಯರಿಗೆ ಎಂತಹ ಆತ್ಮೀಯತೆ ತೋರುವವರು ಶ್ರೀಸಾಮಾನ್ಯರು. ಯಾರಿಗೆ ಯಾರೂ ಸಂಬಂಧವಿಲ್ಲವೆಂಬಂತಹ ಎಂಥಾ ತುಂಡು ತುಂಡಾದ ಸಮಾಜ ವರ್ತನೆಯಿದು !" ಮನಸ್ಸಿಗೆ ಕಹಿ ಎನಿಸಿತು.

ನಭೋಮಂಡಲದಲ್ಲಿ ನಕ್ಷತ್ರಗಳು ಒಂದಕ್ಕೊಂದು ಸಂಬಂಧಿಸದೆ ಇರುವಂತೆ ಈ ಸಮಾಜವು ಕಂಡಿತು. ಭಾರತೀಯ ಸಮಾಜವೋ ಸೂರ್ಯನ ಸುತ್ತಲೂ ಏನೋ ಕಳಚಲಾರದ, ಅವಿನಾಭಾವ ಸಂಬಂಧದಿಂದ ಸೌರವ್ಯೂಹದಲ್ಲಿ ತಿರುಗುವ ಗ್ರಹಗಳ ಒಕ್ಕೂಟದಂತೆ. ಏನೋ ಕೆಲವೊಮ್ಮೆ, ಸದಾ ಇನ್ನೊಬ್ಬರ ಮನೆಯ ವಿಷಯಕ್ಕೆ, ವ್ಯವಹಾರಕ್ಕೆ ಕೈಹಾಕುವ ಭಾರತೀಯರ ಅಧಿಕ ಪ್ರಸಂಗಕ್ಕೆ, ಬೇಸರವೆನಿಸಿದರೂ ನಮ್ಮ ಸಮಾಜ ರಚನೆಯೇ ಹಿತ ಮತ್ತು ಬಂಧುರವೆನಿಸಿತು.

'ತನ್ನ ಸುತ್ತಲಿನ ವ್ಯಕ್ತಿ–ಪರಿಸರಗಳ ಆಗುಹೋಗನ್ನೇ ಗಮನಿಸದೆ, ಪ್ರತಿಕ್ರಿಯೆ ತೋರದೆ, ನಿರ್ಭಾವನೆ–ನಿರಾಸಕ್ತಿಗಳ ಯಂತ್ರದ ಗೊಂಬೆಗಳಂತೆ ಈ ಜನರು ತೋರುವರಲ್ಲಾ' ಎನ್ನಿಸಿ, ಸ್ವಲ್ಪ ಮರುಕವೂ ಹುಟ್ಟಿತು. ಹೊಸತನ್ನು ಕಂಡಾಗ ಕುತೂಹಲ; ನಿಸ್ಸಹಾಯಕರನ್ನು ಕಂಡಾಗ ಅನುಕಂಪ – ಇವು ನಿಸರ್ಗ ಸಹಜ ಹುಟ್ಟುಗುಣಗಳು ಇವುಗಳನ್ನೇ ಬತ್ತಿಸಿಕೊಂಡಂತೆ ಆಕೆ ತೋರಿದಳು.

"ಇದೆಲ್ಲಾ ಸರಿ, ಮುಂದೇನು ? ವಾಪಸ್ಸಾದರೆ ಆತಿಥೇಯಳು ಇರುವುದಿಲ್ಲ. ದೆವ್ವದಂಥಾ ಬಂಗಲೆಯಲ್ಲಿ ನಾನೋರ್ವಳೇ ! ಇಲ್ಲಿ....ಉಮಾ ಬರುವುದು ಯಾವಾಗಲೋ, ಅಲ್ಲಿಯವರೆಗೆ ಎಲ್ಲಿರಬೇಕು ? ದಿಜ್ಮೂಢತ್ವ ಪ್ರಾಪ್ತಿಯಾಯಿತು. ಬಾಳಿನಲ್ಲಿ ಒದಗುವ ಆಕಸ್ಮಿಕ ಸುಖಗಳು ಅಮೃತ ಬಿಂದುಗಳಾಗಿ ವರ್ಣನಾತೀತ ಆನಂದವನ್ನು ನೀಡುವಂತೆ ಕೆಲವೊಮ್ಮೆ ಒದಗುವ ಕಹಿ ಪ್ರಸಂಗಗಳ ಬೇವಿನ ಹನಿಗಳು ಮನಸ್ಸನ್ನು ಹಿಂಡಿಹಿಪ್ಪೆ ಮಾಡುವುದು ಸ್ವಾಭಾವಿಕವಷ್ಟೇ ! ದಟ್ಟವಾದ ಅರಣ್ಯ; ಕತ್ತಲೆ ಕವುಚುತ್ತಿದೆ. ಸವೆಸಬೇಕಾದ ದಾರಿ ಬಹಳವಿದೆ. ದೂರದಲ್ಲೆಲ್ಲೋ ಕಾಡುಮೃಗಗಳ ಗರ್ಜನೆ; ಕಾನನಕೀಟಗಳ ಜಿರ್ ಜಿರ್ ಕೊರೆತ. ಪಥಿಕನ ಮನಸ್ಸ್ಥಿತಿ ಹೇಗಿರಬಹುದು ?" ಹಾಗಾಗಿತ್ತು ನನ್ನ ಪರಿಸ್ಥಿತಿ. ಉದ್ವಿಗ್ನತೆಯ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿತ್ತು ನನ್ನ ಮನಸ್ಸು. ನಿಸ್ಸಹಾಯಕತೆ ಅಂತಗದಲ್ಲಿ ಮಡುಗಟ್ಟಿತ್ತು. (ಸಶೇಷ.)

ಪ್ರವಾಸ–ಲೋಕದರ್ಶನದ ಹೆಬ್ಬಾಗಿಲು

ಪ್ರವಾಸದ ಉಪಯುಕ್ತತೆ ಎಂದರೆ ಅದು ವಾಸ್ತವವನ್ನು ತೋರಿಸಿ ಕಲ್ಪನೆಗೆ ಕಡಿವಾಣ ಹಾಕುತ್ತದೆ; ಹೇಗಿರಬೇಕೆಂಬ ಅತ್ಯಾದರ್ಶವಾದದ ಬದಲಿಗೆ ಲೋಕವು ಹೇಗಿದೆ ಎಂಬ ವಾಸ್ತವವಾದವನ್ನು ಮನಗಾಣಿಸುತ್ತದೆ.

ಸಾಮ್ಯುಯೆಲ್ ಜಾನ್‌ಸನ್.

ಚಿಜ್ಯೋತಿ ಚನ್ನಬಸವಣ್ಣ

—ಸೋದರಿ ಕುಮುದಾ

ತ್ರಿಕಾಲಿಕ ಸಂದೇಶವನ್ನು ಜಗತ್ತಿಗೆ ಕಾಣಿಕೆಯಾಗಿತ್ತು, ಧರ್ಮಾಗಸದಲ್ಲಿ ಸೂರ್ಯಸದೃಶರಾಗಿ ತೊಳಗಿ ಬೆಳಗುತ್ತಿರುವ ವಿಶ್ವಗುರು ಬಸವಣ್ಣನವರು ಎಂಟು ನೂರು ವರ್ಷಗಳ ಹಿಂದೆ ಮಾಡಿದ ಸಮಗ್ರ ಕ್ರಾಂತಿ ಮಾನವ ಕುಲದ ಇತಿಹಾಸದಲ್ಲೇ ಅಭೂತಪೂರ್ವವಾದುದು. ಬಸವಣ್ಣನವರು ನಡೆಸಿದ ಬಹುಮುಖ ಕಾರ್ಯಗಳಿಗೆ, ರಚನಾತ್ಮಕ ಚಟುವಟಿಕೆಗಳಿಗೆ ಅವರ ಬೆನ್ನೆಲುಬಿನಂತಿದ್ದ ಅಕ್ಕನಾಗಮ್ಮನು ಸ್ಫೂರ್ತಿಯ ಸೆಲೆಯಾಗಿದ್ದಳು. ಅಲ್ಲದೆ, ಬಸವಣ್ಣನನ್ನು ನೆರಳಿನಂತೆ ಹಿಂಬಾಲಿಸಿ, ತಾಯಿಯಂತೆ ವಾತ್ಸಲ್ಯದ ಮಡಿಲಲ್ಲಿ ಪೋಷಿಸಿ, ಅಕ್ಕನಾಗಿ ಅಕ್ಕರೆಯ ಸವಿಯುಣಿಸಿ, ಮುಂದೆ ಆತನನ್ನೇ ಗುರುವಾಗಿ ಸ್ವೀಕರಿಸಿ, ಆಧ್ಯಾತ್ಮ ಸರಸಿಯಲ್ಲಿ ಪರಮಹಂಸೆಯಾಗಿ ತೇಲಾಡಿ, ಕೊನೆಗೆ ಶರಣ ಸಾಹಿತ್ಯವನ್ನುಳಿಸಲು ಖಡ್ಗ ಹಿಡಿದು ಹೋರಾಡಿದ ವೀರಮಾತೆ, ಅಕ್ಕನಾಗಮ್ಮ. ಇಂತಹ 'ಕ್ರಾಂತಿ ಗಂಗೋತ್ರಿ' ಎನಿಸಿದ ಅಕ್ಕನಾಗಮ್ಮ ಮತ್ತು ಪತಿ ಶಿವಸ್ವಾಮಿಯ ಚಿದ್ಗರ್ಭದಲ್ಲಿ ಕಾರ್ತೀಕ ಶುದ್ಧ ಪ್ರತಿಪದೆಯಂದು ಕತ್ತಲೆ ತೊಡೆಯಲು ಬರುವ ದೀಪ–ಆವಳಿಯಂತೆ ಶರಣರೆಲ್ಲರಿಂದ 'ಜ್ಞಾನದ ಮೇರು', 'ಷಟಸ್ಥಲ ನಿರ್ಣಯ ಪರಮಾವತಾರಿ' ಎಂದು ಸ್ತುತಿಸಿಕೊಂಡ ಮಹಾಜ್ಞಾನಿ ಚನ್ನಬಸವಣ್ಣನವರು ಜನ್ಮಿಸಿದರು. (ಈ ಬಗ್ಗೆ ವಿಶೇಷ ವಿಷಯವೊಂದನ್ನು ತಿಳಿಯಲು ಇದೇ ಸಂಚಿಕೆಯ ಪುಟ ೫೭ ನೋಡಿರಿ) ಬಹುಮುಖ ಪ್ರತಿಭೆಯನ್ನೊಳಗೊಂಡ ಈ ಮಹೋನ್ನತ ಚೇತನದ ಜೀವನ–ಸಂದೇಶಗಳ ಬಗ್ಗೆ ಕಿರುಪರಿಚಯ ಮಾಡುವುದೇ ಈ ಲೇಖನದ ಉದ್ದೇಶ.

ಕ್ಷೀರದೊಳಗಣ ಘೃತದಂತೆ ಬಾಲಕ ಚನ್ನಬಸವಣ್ಣನಲ್ಲಿ ಸುಪ್ತವಾಗಿದ್ದ ಪ್ರತಿಭೆಯು ತಾಯಿ ಅಕ್ಕನಾಗಮ್ಮ ಮತ್ತು ಸೋದರಮಾವ, ವಿಶ್ವಗುರು ಬಸವಣ್ಣನವರ ಸಾಂದರ್ಭಿಕ ಮಾರ್ಗದರ್ಶನದಿಂದ ವಿಕಸಿಸಿ, ಅರಿವಿನ ತುತ್ತ ತುದಿಯನ್ನೇರಲು ಸಹಾಯಕವಾಯಿತು. ತೀಕ್ಷ್ಣಮತಿಯಾಗಿದ್ದ ಚನ್ನಬಸವಣ್ಣ ಬಾಲ್ಯದಿಂದಲೂ ಸ್ವತಂತ್ರ ವಿಚಾರಿಯಾಗಿದ್ದ. ಸ್ವತಃ ತಾಯಿ ಅಕ್ಕನಾಗಮ್ಮನವರು : "ಎನ್ನ ಮನದ ಕಪಟ ಹಿಂಗಿತ್ತಯ್ಯಾ ಚನ್ನಬಸವಣ್ಣನ ಕರುಣವ ಪಡೆದೆನಾಗಿ" ಎಂದು ಅನ್ನಬೇಕಾದರೆ, ಅದೇ ರೀತಿ ಬಸವಣ್ಣನವರು "ಇಂದು ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತ್ತು," "ಬಿತ್ತದೆ ಬೆಳೆಯದೆ ಬಂದ ಹೆಬ್ಬೆಳಸಿನ ರಾಶಿ ನೋಡಾ" ಎಂದು ಉದ್ಗರಿಸಬೇಕಾದರೆ, ಚನ್ನಬಸವಣ್ಣನವರು ಆ ಕಿರಿಯ ವಯಸ್ಸಿನಲ್ಲೇ ಎಷ್ಟು ಉನ್ನತ ಜ್ಞಾನಿಗಳೆನಿಸಿ

ಕೊಂಡರು ಎಂದು ಅಚ್ಚರಿಯಾಗದಿರದು. ಶೂನ್ಯಸಿಂಹಾಸನಾಧೀಶ್ವರರಾದ, ವ್ಯೋಮ ಕಾಯಸಿದ್ಧರಾದ ಅಲ್ಲಮಪ್ರಭುಗಳು ಚನ್ನಬಸವಣ್ಣನ ಬಗ್ಗೆ ಹೇಳುತ್ತಾ,

"ಕಿರಿಯರಾದಡೇನು ? ಹಿರಿಯರಾದಡೇನು ?
ಅರಿವಿಂಗೆ ಹಿರಿದು ಕಿರಿದುಂಟೆ ?
....
ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ
ಎಂಬುದು ಕಾಣಬಂದಿತ್ತು ಕಾಣಾ ಚನ್ನಬಸವಣ್ಣ."

ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರಿಂದ ಪುನರ್ಜಾತನಾದ ಚನ್ನಬಸವಣ್ಣ, ಜ್ಞಾನದ ಪರ್ವತವಾದುದಷ್ಟೇ ಅಲ್ಲ, ಶ್ರೇಷ್ಠ ಮಟ್ಟದ ತತ್ವಜ್ಞಾನಿಯಾಗಿ, ತಾನರಿತುದನ್ನು ಕ್ರಿಯಾರೂಪಕ್ಕಿಳಿಸಿ ಮಹಾನುಭಾವಿಯಾಗಿ, ತಾನು ಕಂಡುಂಡ ಅನುಭವವನ್ನು ಸಮರ್ಪಕವಾಗಿ ಸಾಹಿತ್ಯದ ಮೂಲಕ ಕೊಟ್ಟಿರುವ ದಾರ್ಶನಿಕನೂ ಹೌದು. ವಯಸ್ಸಿನಲ್ಲಿ ಕಿರಿಯನಾದ ಚನ್ನಬಸವಣ್ಣ ಸೊನ್ನಲಾಪುರದ ಸಿದ್ಧರಾಮೇಶ್ವರರನ್ನು ದೀಕ್ಷಾ ಬೋಧೆಯಿಂದ 'ಶಿವಯೋಗಿ–ಸಿದ್ಧರಾಮ'ನನ್ನಾಗಿ ಮಾಡಿದಾಗ, ಆತ ಭಕ್ತಿ ಪೂರ್ವಕವಾಗಿ,

'ಎನ್ನ ಶುದ್ಧ ಶಿವಯೋಗಿಯ ಮಾಡಿದಾತ ಚನ್ನಬಸವಣ್ಣ
ಆನು ಚನ್ನಬಸವಣ್ಣನ ಕರುಣದಿಂದ ಶಿವಯೋಗದಲ್ಲಿ ನಿತ್ಯನಾಗಿ,
ಷಡುಸ್ಥಲಕ್ಕಧಿಕಾರಿಯಾದೆನಯ್ಯಾ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯಾ."

ಎಂದು ಸ್ಮರಿಸುವುದರಲ್ಲಿ ಚನ್ನಬಸವಣ್ಣನವರ ಯೋಗಿಕ ಔನ್ನತ್ಯದ ಅರಿವಾಗದಿರದು.

ಚನ್ನಬಸವಣ್ಣನವರು ಜ್ಞಾನದ ಉತ್ತುಂಗ ಶೃಂಗವನ್ನೇರಿದ್ದರೂ ಅಹಂಕಾರಿಯಾಗಿರಲಿಲ್ಲ. ಕಾರಣ, ಮಹಾಗುರು ಬಸವಣ್ಣನವರಿಂದ ವಿನಯವು ಬಳುವಳಿಯಾಗಿ ಬಂದಿತ್ತು. ತಾನು ದೀಕ್ಷೆಗೈದ ಗುರುವಾಗಿದ್ದರೂ ಶಿಷ್ಯನಾಗಿದ್ದ ಸಿದ್ಧರಾಮೇಶ್ವರರಿಗೆ, "ಮಾಯಾಕೋಲಾಹಲ ಸಿದ್ಧರಾಮದೇವರಿಗೆ ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೇ" ಎಂದು ಸ್ತುತಿಸುವಲ್ಲಿ, ಆತನಲ್ಲಿದ್ದ ವಿನಯದ ಭಾವ ವ್ಯಕ್ತವಾಗುತ್ತದೆ.

ಸಾವಿರಾರು ವರ್ಷಗಳಿಂದ ಚತುರ್ವರ್ಣ ಸಮಾಜ ರಚನೆಯ ತುಳಿತಕ್ಕೆ ಸಿಕ್ಕ ದೀನದಲಿತ ಜನಾಂಗಕ್ಕೆ ಅಂದಿನ ಪರಿಸರವು ಉಸಿರು ಕಟ್ಟಿಸುವಂತಿತ್ತು. ಸರ್ವರಿಗೂ ಸ್ವಾತಂತ್ರ್ಯ ಮತ್ತು ಸಮಾನತೆ ನೀಡಬಲ್ಲ ಧರ್ಮಕ್ಕಾಗಿ ಶೋಷಿತ ಜನಾಂಗ ಹಂಬಲಿಸುತ್ತಿರುವಾಗಲೇ ಅವರ ಕರೆಗೆ ಓಗೊಟ್ಟು ಬಂದರೋ ಎಂಬಂತೆ ವಿಶ್ವಗುರು ಬಸವಣ್ಣನವರು ಅವತರಿಸಿದರು. ಸಮಗ್ರ ಕ್ರಾಂತಿಗೆ ಕಾರ್ಯರಂಗವಾಗಬಲ್ಲಂತಹ ಅನುಭವ

ಮಂಟಪವನ್ನು ರೂಪಿಸಿದರು. ಅನುಭವ ಮಂಟಪದ ವೈಶಿಷ್ಟ್ಯಗಳನ್ನಾಗಿ ವಿಚಾರ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯಗಳನ್ನು ನೀಡಿದ್ದರು. ಈ ಸಂಸ್ಥೆಯು ತಾತ್ತ್ವಿಕ ವಿಚಾರಗಳ ಚಿಂತನ, ಸಾಮಾಜಿಕ ಸ್ಥಿತಿಗಳ ಮಂಥನಕ್ಕೆ ಇಂಬುಗೊಟ್ಟಿದ್ದರೂ ಅದು ಕೇವಲ ವಾದದ ಸಮರಾಂಗಣವಾಗಿರದೇ, ಸಾಧಕರ ಪ್ರಯೋಗ ಮಂದಿರವಾಗಿತ್ತು.

ಕಲ್ಯಾಣ ಕ್ರಾಂತಿಯ ಕೇಂದ್ರ ಶಕ್ತಿಯಾಗಿದ್ದ ಬಸವಣ್ಣನವರು ಕೈಗೊಂಡ ಆಂದೋಲನದಲ್ಲಿ; ಅವರ ಬಲಗೈಯಂತಿದ್ದ ಚನ್ನಬಸವಣ್ಣನವರ ಪಾತ್ರ ಪ್ರಮುಖವಾಗಿತ್ತು. ಹೊಸ ಸಮಾಜ ಸಂಘಟನೆಯಲ್ಲಿ, ನವಧರ್ಮ ಪ್ರಚಾರದಲ್ಲಿ, ಮೂಢ ನಂಬಿಕೆ ನಿರ್ಮೂಲನ ಕಾರ್ಯದಲ್ಲಿ, ಅನುಭವ ಮಂಟಪದ ಕಾರ್ಯಕಲಾಪ ನಡೆಯುವಲ್ಲಿ, ಚನ್ನಬಸವಣ್ಣನ ಸಮರ್ಥ ಸಹಕಾರ ಬಸವಣ್ಣನವರಿಗಿತ್ತೆಂದೇ ಅವರ ಕೆಲಸ ಹಗುರವಾಯಿತು. ಶಾಸ್ತ್ರಾಧ್ಯಯನ ಮತ್ತು ಸ್ವಾನುಭಾವಗಳಿಂದ ಗ್ರಹಿಸಿದ ಜ್ಞಾನವನ್ನು ಚಿಂತನ ಶೀಲತೆಯ ಚಿಪ್ಪಿನಲ್ಲಿ ಸ್ವಾಗತಿಸಿ, ತನ್ನಂತರಂಗದ ಮಂಥನದಿಂದ ಸಾರ್ವಕಾಲಿಕ ಸತ್ಯಗಳೆಂಬ ಮೌಕ್ತಿಕಗಳನ್ನು ಕಾಣಿಕೆಯಾಗಿತ್ತು ಚನ್ನಬಸವಣ್ಣನವರು ದಾರ್ಶನಿಕರ ಸಾಲಿಗೆ ಸೇರಿದರು. ಇದು ಮಾತ್ರವಲ್ಲದೆ, ಮಹಾಗುರು ಬಸವಣ್ಣನವರು ಕೊಟ್ಟ ನವಧರ್ಮಕ್ಕೆ ಶಾಸ್ತ್ರೀಯ ಚೌಕಟ್ಟನ್ನು ನೀಡಿದ ಶ್ರೇಯಸ್ಸು ಆತನಿಗೇ ಸಲ್ಲುವುದು.

ಅದನ್ನು ಬಸವಣ್ಣನವರೇ ಸ್ವತಃ ಹೇಳುವರು :

....ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟುಹೋಹುದೆಂದು
ಪರಮ ಪುರುಷಾರ್ಥಕಾರಣವಾಗಿ ಮರ್ತ್ಯದಲ್ಲಿ ಅವತರಿಸಿ,
ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದವೆಂಬ
ಪಂಚಾಚಾರಸ್ಥಲವ ನೆಲೆಗೊಳಿಸಿ
ಷಡುಸ್ಥಲವೆಂಬ ಮಹಾನುಭಾವವಂ
ಕರತಳಾಮಳಕವಾಗಿ ಸ್ಥಿತಗೊಳಿಸಿ...........
ತೋರಿದೆಯಾಗಿ ನಿನ್ನಿಂದಲಾನು ಸಂಗನ ಬಸವಣ್ಣನೆಂಬ ಹೆಸರು ಪಡೆದೆನು.

(ಬ.ಷ.ಹೆ.ವ. 1300)

ಈ ವಚನದಿಂದ, ಹೃದಯಪ್ರಧಾನ ಅನುಭವ ಜನ್ಯ ಧರ್ಮವನ್ನು ತತ್ವಜ್ಞಾನದ ಚೌಕಟ್ಟಿಗೆ ಕೂಡಿಸಿದ ಮಹಾಂತ ಚನ್ನಬಸವಣ್ಣ ಎಂಬುದು ಸ್ಫುಟವಾಗುತ್ತದೆ. ಈ ದಿಶೆಯಲ್ಲಿ 'ಕರಣ ಹಸುಗೆ', ಪದಮಂತ್ರಗೋಪ್ಯ, ಮಿಶ್ರಾರ್ಪಣ ಮತ್ತು ಕಾಲಜ್ಞಾನದ ವಚನಗಳು ಬಸವ ಧರ್ಮ ಸಾಹಿತ್ಯಕ್ಕೆ ಚನ್ನಬಸವಣ್ಣನವರ ಅಮೂಲ್ಯ ಕೊಡುಗೆಯಾಗಿವೆ ಹಾಗೂ ಯೋಗಸಾಧಕರಿಗೆ ಕೈದೀವಿಗೆಯಂತಿವೆ.

ನ್ಯಾಯನಿಷ್ಠುರಿ ಮತ್ತು ತತ್ತ್ವ ನಿಷ್ಠರಾಗಿದ್ದ ಚನ್ನಬಸವಣ್ಣನವರು, ವೇಷ ಧಾರಿಗಳು, ಉದರ ಪೋಷಕರನ್ನು ಕಂಡರೆ ಉಗ್ರವಾಗಿ ಟೀಕಿಸುತ್ತಿದ್ದರು. ವ್ಯಷ್ಟಿ–ಸಮಷ್ಟಿಯಲ್ಲಿರುವ ಲೋಪ-ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವಲ್ಲಿ ಅವರಲ್ಲಿದ್ದ ಗಣಾಚಾರವನ್ನು ಗುರುತಿಸಬಹುದು. ಮುಂದೆ ವರ್ಣಸಂಕರದ ಅಪವಾದವನ್ನು ಹೊರಿಸಿ, ಬಸವಣ್ಣನವರನ್ನು ಕಲ್ಯಾಣದಿಂದ ಗಡಿಪಾರು ಮಾಡಿ, ಅಂತರ್ಜಾತೀಯ ಮದುವೆಗೆ ಪ್ರೋತ್ಸಾಹಿಸಿದ ಶರಣರನ್ನು ವಧಿಸಿದಾಗ ಆದ ವಿಪ್ಲವದಲ್ಲಿ ಅನೇಕ ಶಿವಶರಣರು ಬಲಿಯಾದರು. ಕನ್ನಡ ಸಾಹಿತ್ಯ ಸರಸ್ವತಿಯನ್ನು ಶ್ರೀಮಂತಗೊಳಿಸಿದ ವಚನ ಸಾಹಿತ್ಯವು ಸಂಪ್ರದಾಯವಾದಿಗಳ ಕೈಯಲ್ಲಿ ಸಿಕ್ಕು ನಾಶವಾಗಬೇಕಾಗಿದ್ದಂಥಾ ಪರಿಸ್ಥಿತಿಯಲ್ಲಿ ಚನ್ನಬಸವಣ್ಣನವರು ಮುಂದಾಳತ್ವ ವಹಿಸಿಕೊಂಡು, ಸಾಹಿತ್ಯ ರಕ್ಷಣೆಗಾಗಿ ಶರಣರನ್ನು ಗುಂಪುಗೂಡಿಸಿ, ಖಡ್ಗ ಹಿಡಿದು ಹೋರಾಡಿ ಸಂರಕ್ಷಿಸಿದರು. ಇಂದು ಏನಾದರೂ ಅಲ್ಪಸ್ವಲ್ಪ ವಚನ ಶಾಸ್ತ್ರ ಕೈಗೆ ಸಿಗುತ್ತಿದರೆ, (ಬೃಹತ್ ಪ್ರಮಾಣದಲ್ಲಿ ಬರೆಯಲ್ಪಟ್ಟುದಕ್ಕೆ ವಚನಗಳಲ್ಲಿ ಉಲ್ಲೇಖವಿದೆ) ಅದು ಚನ್ನಬಸವಣ್ಣ ಮತ್ತು ಮಡಿವಾಳ ಮಾಚಿದೇವನ ಪುಣ್ಯದಿಂದ. ಈ ಕ್ರಾಂತಿಯ ಕಾಳಗದಲ್ಲಿ ಅಕ್ಕನಾಗಮ್ಮ, ಗಂಗಾಂಬಿಕೆ ಮುಂತಾದ ಶರಣೆಯರೂ ಸಹ ಪ್ರಾಣವನ್ನೇ ಒತ್ತೆಯಿಟ್ಟು ಹೋರಾಡಿದರು. ಮುಂದೆ ಅಕ್ಕನಾಗಮ್ಮ, ಚನ್ನಬಸವಣ್ಣ ಮುಂತಾದವರು ಉಳವಿಯ ಮಹಾಮನೆಯಲ್ಲಿ ಕೆಲಕಾಲವಿದ್ದು, ಧರ್ಮಪ್ರಸಾರ ಮಾಡಿ ಪರಶಿವನಲ್ಲಿ ಬಯಲಾದರು. ಇಂದಿಗೂ ಈ ದಿವ್ಯ ಚೇತನದ ಕಾರುಣ್ಯ– ಸ್ಪಂದನ ಉಳುವಿಯ ಕಾನನದಲ್ಲಿ, ಗಿರಿಗಂಹ್ವರಗಳಲ್ಲಿ ಮಿಡಿಯುವ ಅನುಭವ ಸಂದರ್ಶಿಸಿದ ಯಾತ್ರಿಕರಿಗೆ ಆಗದಿರದು.

ಸುಮಾರು ಮೂವತ್ತಾರು ವರುಷಗಳ ಕಾಲ ಶರೀರದ ಬೊಂತೆಯನ್ನು ತೊಟ್ಟು, ಚನ್ನಬಸವಣ್ಣನವರು ಮರ್ತ್ಯದಲ್ಲಿದ್ದು ಕಣ್ಮರೆಯಾದರೂ, ಧಾರ್ಮಿಕ ಪ್ರಪಂಚದಲ್ಲಿ ವಾಙ್ಮಯ ಶರೀರಿಯಾಗಿ ಎಂದೆಂದಿಗೂ ಅಮರರಾಗಿದ್ದಾರೆ. ಅವರು ನಮಗೆ ಕೊಟ್ಟಿರುವ ತತ್ತ್ವಜ್ಞಾನ ಅಪಾರ. 'ಕಾಯಸಾಹಿತ್ಯ ಎಲ್ಲಿಯಾದಡೆಯೂ ಉಂಟು, ಆತ್ಮ ಸಾಹಿತ್ಯ ಅಪೂರ್ವವಯ್ಯ' ಎಂದ ಚನ್ನಬಸವಣ್ಣನವರು, ಜಗತ್ತಿಗೆ ಬಿಟ್ಟು ಹೋದುದು ಆತ್ಮಸಾಹಿತ್ಯವನ್ನು. ಕಲ್ಪನೆಗೆ ನಿಲುಕದ ಸೂಕ್ಷ್ಮ ವಿಷಯಗಳನ್ನು ಲೌಕಿಕ ದೃಷ್ಟಾಂತಗಳ ಮೂಲಕ ಅಭಿವ್ಯಕ್ತಗೊಳಿಸುವ ಕಲೆ ಇವರಲ್ಲಿ ಅದ್ವಿತೀಯವಾಗಿದೆ. ಸಿದ್ಧಾಂತದ ನಿಗೂಢವಾದ ವಿಚಾರಗಳನ್ನು ಸೂತ್ರೀಕರಿಸಿ ಹೇಳುವಲ್ಲಿ ಅವರ ಜಾಣ್ಮೆ ಅವರ್ಣನೀಯ.

ಮಾನಸಿಕ ಪ್ರಗತಿಯ ಹಂತಗಳಾದ ಷಟ್ಸ್ಥಲಗಳ ಬಗ್ಗೆ ಸಿದ್ಧಾಂತವನ್ನು ರೂಪಿಸಿದ ತತ್ತ್ವಜ್ಞಾನಿ ಚನ್ನಬಸವಣ್ಣನವರು ಯೋಗಿಕ ಮಾರ್ಗದಲ್ಲಿ ಆತಂಕವನ್ನೊಡ್ಡುವ ಅರಿಷಡ್ವರ್ಗಗಳನ್ನು ಯಾವ ರೀತಿ ಉದಾತ್ತೀಕರಿಸಿಕೊಳ್ಳಬೇಕೆಂಬುದನ್ನು ಒಂದು ವಚನದಲ್ಲಿ ಬಹಳ ಮಾರ್ಮಿಕವಾಗಿ, ಅಷ್ಟೇ ಸರಳವಾಗಿ ಚಿತ್ರಿಸಿದ್ದಾರೆ :

ಶಿವಭಕ್ತಿಯುಳ್ಳಾತಂಗೆ ಕಾಮಬೇಡ, ಕ್ರೋಧಬೇಡ, ಲೋಭಬೇಡ
ಮೋಹಬೇಡ, ಮದಬೇಡ, ಮತ್ಸರಬೇಡ.
ಶಿವಭಕ್ತಿಯುಳ್ಳಾತಂಗೆ ಕಾಮಬೇಕು, ಕ್ರೋಧಬೇಕು, ಲೋಭಬೇಕು
ಮೋಹ ಬೇಕು, ಮದಬೇಕು, ಮತ್ಸರಬೇಕು.

ಬೇಕೆಂಬುದಕ್ಕಾವಗುಣ :

ಕಾಮಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಗಳಲ್ಲಿ
ಲೋಭಬೇಕು ಪಾದೋದಕ ಪ್ರಸಾದದಲ್ಲಿ
ಮೋಹಬೇಕು ಗುರು-ಲಿಂಗ-ಜಂಗಮದಲ್ಲಿ
ಮದಬೇಕು ಶಿವಾಚಾರ ಘನವೆಂಬಲ್ಲಿ
ಮತ್ಸರಬೇಕು ಹೆಣ್ಣು-ಹೊನ್ನು-ಮಣ್ಣುಗಳಲ್ಲಿ.

ಬೇಡವೆಂಬುದಕ್ಕಾವಗುಣ :—

ಕಾಮಬೇಡ ಪರಸ್ತ್ರೀಯರಲ್ಲಿ,
ಕ್ರೋಧಬೇಡ ಗುರುವಿನಲ್ಲಿ,
ಲೋಭಬೇಡ ತನು-ಮನ-ಧನದಲ್ಲಿ,
ಮೋಹಬೇಡ ಸಂಸಾರದಲ್ಲಿ,
ಮದಬೇಡ ಶಿವಭಕ್ತರಲ್ಲಿ,
ಮತ್ಸರಬೇಡ ಸಕಲ ಪ್ರಾಣಿಗಳಲ್ಲಿ.

ಇಂತೀ ಷಡ್ವಿಧ ಗುಣವನರಿತು ಮೆರೆಯಬಲ್ಲಡೆ
ಆತನೇ ಸದ್ಭಕ್ತ ಕಾಣಾ ಕೂಡಲ ಚನ್ನಸಂಗಮದೇವ.

ಮೊದಲ ನಾಲ್ಕು ಸಾಲುಗಳನ್ನು ಓದಿದಾಗ, ಚನ್ನಬಸವಣ್ಣನವರು ಹೀಗೇಕೆ ಬರೆದಿರುವರು ? ಎಂಬ ಆಶ್ಚರ್ಯದೊಡನೆ ಮುಂದೆ ಏನು ಹೇಳುವರೋ ಎಂಬ ಕುತೂಹಲವೂ ಜಾಗ್ರತವಾಗುವುದು. ಮುಂದೆ ಓದುತ್ತಾ ಹೋದಂತೆ ಅವರ ವಿಚಾರಧಾರೆಯನ್ನು ಕಂಡು ಓದುಗರಿಗೆ ವಿಸ್ಮಯವಾಗದಿರದು. ಸಾಮಾನ್ಯವಾಗಿ ಸಮಾಜಸೇವೆಯನ್ನು ಗುರಿಯಾಗಿರಿಸಿಕೊಂಡ ವ್ಯಕ್ತಿಗಳಿಗೆ ಅನೇಕ ಸಾಮಾಜಿಕ ವಿಘ್ನಗಳು ಎದುರಾಗುವುದು ಸಹಜವಿರುವಂತೆ, ಯೋಗಸಾಧಕನಿಗೆ ತನ್ನ ಮಾರ್ಗದಲ್ಲಿ ಕ್ರಮಿಸುವಾಗ ಅನೇಕ ರೀತಿಯ ಮಾನಸಿಕ ಅಡ್ಡಿ, ಆತಂಕಗಳು ಒದಗುವವು. ಇಂಥ ಮಾನಸಿಕ ವಿಘ್ನಗಳಲ್ಲಿ ಅರಿಷಡ್ವರ್ಗಗಳನ್ನು ಹೇಗೆ ಉದಾತ್ತೀಕರಿಸಿ ತನ್ನ ಸಾಧನೆಗೆ ಪೂರಕವಾಗಿಸಿಕೊಳ್ಳಬೇಕೆಂಬುದನ್ನು ಚನ್ನಬಸವಣ್ಣನವರು ತಮ್ಮದೇ ಆದ ಶೈಲಿಯಲ್ಲಿ ಹೇಳಿದ್ದಾರೆ.

ಎಲ್ಲರಲ್ಲಿಯೂ ಸುಪ್ತವಾಗಿ ಅಡಗಿರುವ 'ಕಾಮ' ಅರ್ಥಾತ್ 'ಬಯಕೆ' ಕ್ಷಣಿಕ ಸುಖದಲ್ಲಿ ಮೈಮರೆಯಲು ಬೇಡವಿರಬಹುದು ; ಆದರೆ, ದೈವೀ ಕರುಣೆ ಪಡೆಯಲು ಮತ್ತು ಆತ್ಮಾನಂದ ಹೊಂದಲು ಅದಮ್ಯ ಆಸೆ ಅತ್ಯಾವಶ್ಯಕ. ಕ್ರೋಧವನ್ನು ಗುರು-ಹಿರಿಯರಲ್ಲಿ ತೋರಿಸುವುದನ್ನು ಬಿಟ್ಟು ಇಂದ್ರಿಯಗಳನ್ನು ಸಾಧನೆಗೆ ಅಣಿಮಾಡುವಲ್ಲಿ ತೋರಿಸಬೇಕು. ಸದ್ಭಕ್ತನಾದವನು ತನು-ಮನ-ಧನದಿಂದ ಮಾಡುವ ಸೇವೆಯಲ್ಲಿ ಲೋಭಿಯಾಗದೇ ಔದಾರ್ಯದಿಂದಿರಬೇಕು. ಆದರೆ ದೈವೀಕರುಣೆ ಮತ್ತು ಪ್ರಸಾದ-ಪಾದೋದಕ (ಅನುಗ್ರಹ)ಗಳನ್ನು ಪಡೆವಾಗ ಅಷ್ಟೇ ಲೋಭಿಯಾಗಿರಬೇಕು. 'ನಾನು' 'ನನ್ನದು' ಎಂಬ ಮೋಹದಿಂದ ಕೂಡಿ, ಭವ ನದಿಯಲ್ಲಿ ಸಿಕ್ಕಿ ಸೆಳೆಯಲ್ಪಟ್ಟು ಘಾಸಿಯಾಗುವುದಕ್ಕಿಂತ, ಅದೇ ಮೋಹವನ್ನು ಸದ್ಗುರುವಿನಲ್ಲಿ, ಲಿಂಗ-ಜಂಗಮದಲ್ಲಿ ಹರಿಸಿದಾಗ, ಆ ಮೋಹವೇ ನಮ್ಮನ್ನು ಭವಸಾಗರದಿಂದ ಪಾರುಗಾಣಿಸುವ ದೋಣಿಯಾಗಬಲ್ಲುದು. ಶಿವಭಕ್ತರನ್ನು ಕಂಡಾಗ 'ಮದ' ತಾಳದೆ, ಬಸವಣ್ಣನವರು ಹೇಳುವಂತೆ, 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ವಿನಯವಿರಬೇಕು. ಶಿವಾಚಾರದ ಔನ್ನತ್ಯವನ್ನು ಹೇಳುವಾಗ ಅಷ್ಟೇ ಸದಭಿಮಾನವಿರಬೇಕು. ಕ್ಷುದ್ರವಾದ ಆಸೆ-ಆಕಾಂಕ್ಷೆಗಳ ತೃಪ್ತಿಗೆ, ಮತ್ತೊಬ್ಬರು ಉತ್ತಮ ಕಾರ್ಯಮಾಡುತ್ತಿರುವುದರ ಬಗೆಗೆ, ಅನ್ಯರ ಪ್ರಗತಿಯ ಬಗೆಗೆ ಮತ್ಸರ ತಾಳದೆ, ಭವ ಬಂಧನಕ್ಕೆ ಒಳಪಡಿಸುವ ಹೆಣ್ಣು-ಹೊನ್ನು-ಮಣ್ಣುಗಳಲ್ಲಿ ಮತ್ಸರ ತೋರಬೇಕು. ಅವನ್ನು ಸಹ ತನಗೆ ಬಾಧಕವೆಂದು ದೂರೀಕರಿಸದೆ, ಮಾರಕವೆಂದು ತಿರಸ್ಕರಿಸದೆ, ಸಾಧಕವಾಗಿ ಮಾಡಿಕೊಳ್ಳಬಲ್ಲವನೇ ತನ್ನ ಗುರಿಯನ್ನು ಮುಟ್ಟಬಲ್ಲ.

ಈ ರೀತಿ ಚನ್ನಬಸವಣ್ಣನವರು ಅರಿಷಡ್ವರ್ಗಗಳ ಉದಾತ್ತೀಕರಣವನ್ನು ಅರುಹುವುದರ ಮೂಲಕ ಸಾಧಕರಿಗೆ ಉತ್ತಮ ಮಾರ್ಗದರ್ಶನ ಮಾಡಿದ್ದಾರೆ. ಅವರು ಕೊಟ್ಟಿರುವ ಸಂದೇಶಸಾಗರದಲ್ಲಿ ಈ ಒಂದು ವಚನ ಹನಿಯೋಪಾದಿಯಲ್ಲಿದೆ. 'ಬಸವಣ್ಣನ ಚಮ್ಮಾವುಗೆಯ ಬಂಟ ನಾನು' ಎಂಬ ವಿನಯ ಶೋಭಿತ ಭೃತ್ಯಾಚಾರಿ ಚನ್ನಬಸವಣ್ಣನವರು, ಡಾಂಭಿಕರನ್ನು ಖಂಡಿಸುವಾಗ ಸ್ಪಷ್ಟವಾದಿಗಳಾಗಿ, 'ಸರ್ವಸಂಗ ಪರಿತ್ಯಾಗ ಮಾಡಿದ ಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ?' ಎಂದು ಪ್ರಶ್ನಿಸಿ, 'ಶರಣ ಲೋಕದಿಚ್ಛೆಯ ನುಡಿಯ, ಲೋಕದಿಚ್ಛೆಯ ನಡೆಯ' ಎಂದು ಹೇಳುತ್ತಾರೆ.

ಹೀಗೆ ನಡೆ-ನುಡಿಯೊಂದಾಗಿ ಸರ್ವಾಂಗಲಿಂಗಿಯಾದ ಚನ್ನಬಸವಣ್ಣನವರ ವ್ಯಕ್ತಿತ್ವ ಆದರ್ಶವೂ ಮತ್ತು ಅನುಕರಣೀಯವೂ ಆದುದು.

(ಕಾರ್ತೀಕ ಶುದ್ಧ ಪ್ರತಿಪದೆ ಶನಿವಾರ ದಿನಾಂಕ ೧೨-೧೧-೧೯೭೭ರಂದು ಬರುವ ಚನ್ನಬಸವ ಜಯಂತಿಯ ಸ್ಮರಣೆಗಾಗಿ ಈ ಲೇಖನ—ಸಂ.)

ಚನ್ನಬಸವಣ್ಣನ ಜನನ ವೃತ್ತಾಂತ

—ಸಂಚಾಲಕರು, **ವಿಚಾರಗೋಷ್ಠಿ.**

ಚಿನ್ಮಯ ಜ್ಞಾನಿ ಚನ್ನಬಸವಣ್ಣನು ಅಕ್ಕನಾಗಮ್ಮನ ಹೊಟ್ಟೆಯಲ್ಲಿ ಹುಟ್ಟಿದವನೆಂಬ ಪ್ರತೀತಿ ಜನಮನದಲ್ಲಿ ದೃಢವಾಗಿದೆ. ಮತ್ತು ಅವರ ಹುಟ್ಟಿನ ಬಗ್ಗೆ ಸಂದೇಹಗಳು ಇನ್ನೂ ಪರಿಹಾರವಾಗಿಲ್ಲ. ಇಂಥ ಸಂದರ್ಭದಲ್ಲಿ **ಶ್ರೀ ರಾಮನಗೌಡ ಪಾಟೀಲ, ಯಾಳವಾರ;** ಇವರು ಆಗಸ್ಟ್ ತಿಂಗಳು ೧೩ರಂದು ಬೆಂಗಳೂರು ಬಸವ ಮಂಟಪದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಹೊಸ ಸಂಗತಿಯೊಂದನ್ನು ಮಂಡಿಸಿದರು. ಇದೊಂದು ಬಗೆಯ ಹೊಸಬೆಳಕು ಚೆಲ್ಲುವದರಿಂದ ಆಸಕ್ತಿ ಇರುವ ವಿದ್ವಾಂಸರು ಈ ದಿಶೆಯಲ್ಲಿ ಸಂಶೋಧನೆ ನಡೆಸಲೆಂದು ಹಾರೈಸಿ ಈ ವಿಷಯವನ್ನು ಪ್ರಕಟಿಸುತ್ತಿಹೆವು.

ಶ್ರೀ ರಾಮನಗೌಡರ ಸಂಶೋಧನೆಯ ಪ್ರಕಾರ, ಅಕ್ಕನಾಗಮ್ಮನನ್ನು ಮದುವೆ ಮಾಡಿಕೊಟ್ಟುದು ಬ್ರಹ್ಮಪುರಿಯ ಶಿವಸ್ವಾಮಿ ಎಂಬ ಶಿವಬ್ರಾಹ್ಮಣನಿಗೆ. ಆಕೆ ಲಗ್ನವಾದುದು ನೆಪಕ್ಕಾಗಿ. ಮನಸ್ಸೆಲ್ಲ ಅಧ್ಯಾತ್ಮದ ಕಡೆಗೆ. ತೀರಾ ಲೌಕಿಕನಾಗಿದ್ದ ಶಿವಸ್ವಾಮಿಯ ಮನಸ್ಸು ಹರಿದಲ್ಲಿ ನಾಗಮ್ಮ ಹರಿಯದಾದಳು. ತನ್ನ ಸಾಧನೆಗೆ ತನ್ನನ್ನು ಬಿಟ್ಟುಕೊಟ್ಟು, ಬೇರೆ ಮದುವೆಯಾಗಲು ಸೂಚಿಸಿದಳು. ಆಗ ಪತಿಯು ಒಪ್ಪಿ, ದೇವರಸಿ ಎಂಬುವವಳನ್ನು ಕೈಹಿಡಿದನು.

ಅಷ್ಟರಲ್ಲಿ ತಮ್ಮನಾದ ಬಸವಣ್ಣನು ಕ್ರಾಂತಿಪಥ ತುಳಿಯಲು ಸಂಕಲ್ಪಿಸಿದಾಗ, ಅಕ್ಕನಾಗಮ್ಮ ಪತಿಯ ಮತ್ತು ಅವನ ಮನೆಯ ಬಂಧನ ಕಳಚಿಕೊಂಡು ತಮ್ಮನ ಹೆಜ್ಜೆಗಳನ್ನು ಹಿಂಬಾಲಿಸಿದಳು. ಇತ್ತ ದೇವರಸಿ ಒಂಭತ್ತು ಹೆಣ್ಣುಮಕ್ಕಳನ್ನು, ಹತ್ತನೆಯದನ್ನಾಗಿ ಗಂಡು ಮಗುವನ್ನು ಹೆತ್ತು, ತೀರಿಕೊಂಡಳು. ಎಳೆಯ ಮಗುವನ್ನು ಸಾಕಲಾರದ ತಂದೆಯು ಕೂಸನ್ನು ಹೊತ್ತುಕೊಂಡು ಸಾಧ್ವೀಮಣಿ, ತ್ಯಾಗಿಯಾದ ನಾಗಮ್ಮನ ಆಶ್ರಯದಲ್ಲಿ ಬಿಡಲು ಬಂದ. ಆದರೆ ಮುಖ ನೋಡುವ, ಬೇಡುವ ನೈತಿಕ ಧೈರ್ಯ ಕಳೆದುಕೊಂಡಿದ್ದ. ಅನಿತರಲ್ಲಿ ಅನುಭವ ಮಂಟಪದ ಹಿರಿಯ ಶರಣರಾಗಿದ್ದ ಡೋಹಾರ ಕಕ್ಕಯ್ಯನವರ ಮಾತಿಗೆ ಬಸವಣ್ಣನವರಾಗಲೀ, ಅಕ್ಕನಾಗಮ್ಮನಾಗಲೀ ಬೆಲೆಕೊಡುವರೆಂದು ತಿಳಿದು, ಅವರ ಮಧ್ಯಸ್ತಿಕೆ ಬಯಸಿದ.

ಲೋಕದ ಆಟವನ್ನೇ ಅರಿಯದ ಆ ಹಸುಳೆಯನ್ನು ಬಸವಣ್ಣನ ಆಶ್ರಯದಲ್ಲಿ ಬಿಡುವುದೇ ಲೇಸೆಂಬ ವಿಚಾರಕ್ಕೆ ಬಂದರು ಕಕ್ಕಯ್ಯನವರು. ಆ ಮಗುವಿನ ವಿಶೇಷ ತೇಜಸ್ಸಿನಲ್ಲಿ ದೈವೀವಲಯದಲ್ಲಿ ಅವನು ಬೆಳೆದುದಾದರೆ ಲೋಕೋತ್ತರನಾಗುವನೆಂಬ ಭವಿಷ್ಯ ಕಂಡರು. ತಾವು ಒಪ್ಪಿಸುವುದಾಗಿ ಭರವಸೆ ನೀಡಿದಾಗ ಶಿವಸ್ವಾಮಿ ಸರಿದು,

ತನ್ನೂರಿಗೆ ಮರಳಿದ. ಡೋಹಾರ ಕಕ್ಕಯ್ಯನವರು ಬಸವಣ್ಣನವರಿಗೆ ಆದರದ ಆಮಂತ್ರಣ ಕಳಿಸಿದರು. ಶರಣರ ಮನೆಯ ಬಿನ್ನಹಕ್ಕೆ ಹಾತೊರೆಯುತ್ತಿದ್ದ ಆ ಮಹಾಗುರುವು ಓಡಿ ಬಂದರು.

"ಮಹಾಗುರು ಬಸವಣ್ಣಾ....ನಿಮಗೆ ಶಿವ ಪ್ರಸಾದವೊಂದನ್ನು ನೀಡಲಿರುವೆ. ನೀವದನ್ನು ಸ್ವೀಕರಿಸಿ, ಸಂರಕ್ಷಿಸಿ, ಅಕ್ಕನಾಗಮ್ಮನವರಿಗೆ ಕೊಡಬಲ್ಲಿರಾ?" ಬಸವಣ್ಣನವರು ಶರಣರ ಮಾತನ್ನು ನಿರಾಕರಿಸುವುದುಂಟೆ? ಒಪ್ಪುತ್ತಲೇ, ಅವರ ಉತ್ತರೀಯದೊಳಕ್ಕೆ ಬಟ್ಟೆಯ ಗಂಟು ಇಳಿಯಿತು. ತೆರೆದು ನೋಡಿ ಬೆರಗುಗೊಂಡು, ಕೇಳಿದರು. ಡೋಹಾರ ಕಕ್ಕಯ್ಯನವರು ಸವಿಸ್ತಾರವಾಗಿ ಹೇಳಿದರು. ಮಾತೃಹೃದಯಿ ಬಸವಣ್ಣನವರು ಆ ಗಂಟನ್ನು ಹಾಗೆಯೇ ಹಿಡಿದು, ಮಹಾ ಮನೆಗೆ ನಡೆದು, ಅಕ್ಕನನ್ನು ಉದ್ದೇಶಿಸಿ ಹೇಳಿದರು, 'ಶರಣ ಕಕ್ಕಯ್ಯನವರಿತ್ತ ಪ್ರಸಾದವನ್ನು ತಂದಿರುವೆ ಇದನ್ನು ಸ್ವೀಕರಿಸುವೆಯಾ ?'

ಅತ್ಯಂತ ಶ್ರದ್ಧೆ-ಭಕ್ತಿಗಳಿಂದ ನಾಗಮ್ಮ ಮಡಿಲನ್ನು ಒಡ್ಡಿದಳು. ಬಟ್ಟೆಯಲ್ಲಿ ಸುತ್ತಿದ್ದ ಎಳೆಯ ಮಗುವನ್ನು ಬಸವಣ್ಣ ಹಾಕಿ, ವಸ್ತುಸ್ಥಿತಿಯನ್ನು ವಿವರಿಸಿದರು. ನಾಗಮ್ಮನು ಮಾನವೀಯತೆ-ಕರ್ತವ್ಯ ಭಾವನೆಯಿಂದ ಸ್ವೀಕರಿಸಿದಳಾ ಕೂಸನ್ನು.

ಆಗ ಬಸವಣ್ಣನವರು ಮಗುವಿಗೆ ವಿಭೂತಿಯ ಪಟ್ಟವನ್ನು ಹಾಕಿ, ಹಸ್ತಮಸ್ತಕ ಸಂಯೋಗದಿಂದ ಆಶೀರ್ವದಿಸಿದರು. ಅದರ ಉಲ್ಲೇಖವನ್ನು ಚನ್ನಬಸವಣ್ಣನವರ ವಚನದಲ್ಲಿ ಕಾಣಬಹುದು :

"ನಿಮ್ಮ ಒಕ್ಕಮಿಕ್ಕ ಶೇಷಪ್ರಸಾದದ ಕಾರುಣ್ಯದ ಶಿಶುವಾಗಿ,
ಒಡಲೊಳಗೆ ಇದ್ದಲ್ಲಿ, ವಿಭೂತಿ ಪಟ್ಟವ ಕಟ್ಟಿ,
ಹಸ್ತಮಸ್ತಕ ಸಂಯೋಗವ ಮಾಡಿ, ಎನ್ನನುಳುಹಿದರಾರಯ್ಯ ನೀವಲ್ಲದೆ? "

ವಾತ್ಸಲ್ಯದಿಂದ ಅನುಗ್ರಹಿಸಿದ ಮಗುವಿಗೆ ಹೆಸರು ಏನೆಂದು ಇಡುವುದು ? "ಚನ್ನಯ್ಯನ ಹೆಸರು ಮಾನ್ಯ. ಮಹಾಮಹಿಮ ಚೆನ್ನಯ್ಯ ಮಾದಾರನಿದ್ದರೂ, ಅನುಕರಣೀಯ. ಅದೇ ಇರಲಿ" ಬಸವಣ್ಣನವರ ಅಭಿಪ್ರಾಯ. "ಇಲ್ಲ, ಬಸವಣ್ಣನು ನಮ್ಮೆಲ್ಲರ ಗುರು. ಅವನ ಹೆಸರು ಇರಬೇಕು" ನಾಗಮ್ಮನ ಆಗ್ರಹ. ಅಲ್ಲಿಯೂ ರಾಜಿಮಾಡಿ ಚನ್ನಬಸವಣ್ಣನೆಂದು ಹೆಸರಿಸಲಾಯಿತು.

ಈ ಕಥೆಯು ಹೊಸದಾಗಿ ಹೇಳಲ್ಪಟ್ಟಿದ್ದು, ಅನೇಕ ವಿವಾದಗಳಿಗೆ ಉತ್ತರವನ್ನು ಕೊಡುವಂತೆ ಕಾಣುತ್ತದೆ. ಆದರೆ ಸಂಪೂರ್ಣವಾಗಿ ಜನಪದ ಸಾಹಿತ್ಯ ಮತ್ತು ಕಾಲಜ್ಞಾನದ ಮೇಲೆ ಆಧಾರಿತವಾಗಿರುವ ಈ ಕಥೆಗೆ ಐತಿಹಾಸಿಕ ಆಧಾರವೇನು? ಎಂಬುದರ ಬಗ್ಗೆ ಶ್ರೀ ರಾಮನಗೌಡರು ಹೆಚ್ಚಿನ ಸಂಶೋಧನೆ ಮಾಡಿದರೆ ತುಂಬಾ ಉಪಕಾರವಾಗುವುದು.

★ ★

ಜಾನಪದ ಜ್ಯೋತಿ ಕೆ. ಆರ್. ಲಿಂಗಪ್ಪ

—ಗೊ.ರು.ಚ.

ಖಾದಿ ಜುಬ್ಬ, ಕಾಸೆ ಪಂಚೆ, ಹೆಚ್ಚು ಕಡಮೆಯಲ್ಲದ ಅಚ್ಚುಕಟ್ಟಾದ ಮೈಕಟ್ಟು. ವೇದಿಕೆಯ ಮೇಲೆ ಎದ್ದು ನಿಲ್ಲುತ್ತಿದ್ದಂತೆ ಸಭೆಯ ಹರ್ಷೋದ್ಗಾರ : ಚಪ್ಪಾಳೆಯ ಮಹಾಪೂರ !

ಎದ್ದೊಂದು ಗಳಿಗೇಲಿ । ಯ್ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ । ಭೂಮಿ ತಾಯ
ಎದ್ದೊಂದು ಗಳಿಗೇ ನೆನೆದೇನು ॥

ಇದು ನಾಂದಿ ಗೀತೆ ! ಕಂಚಿನ ಕಂಠದಿಂದ ಈ ಮಣ್ಣಿನ ಹಾಡು ಕೇಳಿ ಬರುತ್ತಿದ್ದಂತೆ ಸಭೆಯು ಸದ್ದಡಗುತ್ತದೆ ; ಗಾನ ಗಂಗೆಯಲ್ಲಿ ಸ್ನಾನಮಾಡಲು ಸಿದ್ಧವಾಗುತ್ತದೆ!

ಇನ್ನು ಬೀಸುವ ತಂಗಾಳಿಯಂತೆ, ಉಲಿಯುವ ಅಲೆಯಂತೆ, ಜೇನಿನ ಝೇಂಕಾರದಂತೆ ಹಾಡುಗಳ ಸಾಲು ಸಾಲು: ರಸ ರುಚಿಯನ್ನು ಸವಿಯುವುದು ನಮ್ಮ ಪಾಲು ! ಬೀಸುವ ಪದ, ಬೀಗರ ಪದ, ಮದುವೆಯ ಹಾಡು, ಪ್ರೇಮ ಗೀತೆ, ತೊಟ್ಟಿಲ ಹಾಡು, ಸುಗ್ಗಿಯ ಹಾಡು, ಕೋಲಾಟದ ಪದ, ತತ್ತ್ವದ ಪದ, ಮಾನವಮಿ ಪದ-ಹೀಗೆ ನೂರಾರು ಸೊಲ್ಲು. ಮಕ್ಕಳಿಂದ ಮುದುಕರವರೆಗೆ ನೆಟ್ಟ ಕಣ್ಣು, ಬಿಟ್ಟ ಬಾಯಿ. ಗೀತೆಯಿಂದ ಮೈಮರೆಸಿ, ಮಾತಿನಿಂದ ಅವುದೋ ಭಾವನಾಲೋಕದಲ್ಲಿ ವಿಹಾರ. ಮನ ಸೋಲಿಸುವ ಈ ನುಡಿ ಗಾರುಡಿಗ, ಮಣ್ಣಿನ ಮಗ, ಕನ್ನಡ ನಾಡಿಗೆ ಚಿರಪರಿಚಿತ ಕೆ. ಆರ್. ಲಿಂಗಪ್ಪ.

ಹಳ್ಳಿಯ ಪಟೇಲ (ಗೌಡ)ರ ಮನೆತನ. ಹಾಸಿ ಹೊದ್ದದ್ದು ಬಡತನ. ಹಡೆದವರ ಬದುಕು ಬಡವಾದರೂ ಭಾವ ಶ್ರೀಮಂತ. ಅವರ ಎದೆಯಲ್ಲಿ ಹುಡುಕಿದರೂ ಸಿಗದ ಅಕ್ಷರ ವಿದ್ವತ್ತು ; ಲೋಕಾನುಭವವೇ ಅವರ ಸಂಪತ್ತು !

ಚರ ಆಸ್ತಿ

ಆ ಮನೆಯ ಹಿರಿಯ ಮಗ ಲಿಂಗಪ್ಪ. ತಂದೆ ರಂಗಪ್ಪ: ತಾಯಿ ಬಸಮ್ಮ. ಹಳ್ಳಿ ಕಲ್ಲೇನಹಳ್ಳಿ; ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು. ತುಣುಕು ನೆಲ, ಎರಡು ತೆಂಗಿನ ಮರ—ಇಷ್ಟೇ ಅವರ ಸ್ಥಿರ ಆಸ್ತಿ, ಲಿಂಗಪ್ಪನವರೇ ಮೊದಲ ಚರ ಆಸ್ತಿ.

ಮಗ ನಾಲ್ಕು ಜನರಂತೆ ಕಲಿತವನಾಗಬೇಕೆಂಬುದು ತಾಯಿಯ ಹಂಬಲ; ತಂದೆಯ ಬೆಂಬಲ. ಆ ಪುಟ್ಟ ಹುಡುಗ ಪಾಟಿ–ಪುಸ್ತಕ ಹಿಡಿದು ಮೊದಲ ದಿನ ಮನೆಗೆ ಬಂದಾಗ ತಾಯಿ ಬಸಮ್ಮನಿಗೆ ಹಿಗ್ಗೋ ಹಿಗ್ಗು. ಅಂದು ಅವರಿಗೆ ನಿದ್ದೆ ಬಂದುದು, ಅರಿಸಿನದ ನೀರು ಚೆಲ್ಲಿ ಮಗನ 'ಆಸರು' ನಿವಾರಿಸಿದಮೇಲೆಯೇ !

ವಿದ್ಯಾರ್ಥಿ ಲಿಂಗಪ್ಪ ಮಾಧ್ಯಮಿಕ ಶಾಲೆ ಕಲಿತುದು ಅಜ್ಜಂಪುರದಲ್ಲಿ. ಪ್ರೌಢ ಶಿಕ್ಷಣ ದಾವಣಗೆರೆಯಲ್ಲಿ. ಶಿವಮೊಗ್ಗದಲ್ಲಿ ಇಂಟರ್ ಮೀಡಿಯಟ್ ಪಾಠ : ವಾರಾನ್ನದ ಊಟ. ವಾರದಲ್ಲಿ ಒಂದು ಹೊತ್ತಾದರೂ ಉಪವಾಸ ಕಟ್ಟಿಟ್ಟ ಬುತ್ತಿ. ತುಂಗೆಯ ತಿಳಿನೀರಿನಿಂದಲೇ ತೃಪ್ತಿ. (ಬಹುಶಃ ಆ ಸಿಹಿನೀರೇ ಲಿಂಗಪ್ಪನವರ ಕಂಠವನ್ನು ಮಧುರಗೊಳಿಸಿರಬೇಕು !) ಪ್ರಭುದೇವ ಹೇಳುವಂತೆ **'ಉಗುಳ ನುಂಗಿ ಹಸಿವ ಕಳೆದು, ತೆವರ ಮಲಗಿ ನಿದ್ದೆ ಗೈಯ್ದು'** ಶರಣ ಜೀವನ ಆಗಲೇ ಮೈಗೂಡಿಕೊಂಡಿರಬೇಕು!

ಮುಂದೆ ಮೈಸೂರಿನಲ್ಲಿ ಬಿ.ಎ., ಪದವಿ ಗಳಿಕೆ. ಪಟೇಲ್ ರಂಗಪ್ಪನವರ ಚರ ಆಸ್ತಿಯ ಖಾತೆ ಪುಸ್ತಕದಲ್ಲಿ ಹೊಸ ದಾಖಲೆ-**'ಮಗ ಬಿ.ಎ. ಪಾಸು ಮಾಡ್ಯವನೆ !'** ಬೆಳಗಾವಿಯಲ್ಲಿ ಮುಂದುವರೆದ ಶಿಕ್ಷಣ-1946ರ ಸುಮಾರಿಗೆ ಲಾ ಪದವಿ. ವಕೀಲಿ ಓದಿದರೂ **'ವಕೀಲ'** ಎಂದು ಬೋರ್ಡು ಬರೆಸಲೂ ಹಣವಿಲ್ಲದ ಸ್ಥಿತಿ. ನೌಕರಿಗೆ ಶರಣಾಗತಿ.

ನೌಕರಿಯ ಮೊದಲ ನೊಗ ಹೊತ್ತುದು ಆಹಾರ ಇಲಾಖೆಯಲ್ಲಿ; ಬಿಲ್ ಕ್ಲಾರ್ಕ್ ಆಗಿ. **'ಕಲ್ಯಾಣ ಕಿರಣ'ದ** ಈ ತಿಂಗಳ ಮಂಗಳ ಮೂರ್ತಿಯಾಗಿರುವ ಲಿಂಗಪ್ಪನವರಿಗೆ ಆಗ ತಿಂಗಳಿಗೆ 25 ರೂ. ಸಂಬಳ !

ಸಾಹಿತ್ಯ–ಸಂಸ್ಕೃತಿಗಳ ಒಲವು. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಸೇವೆಗೆ ಪ್ರವೇಶ. **'ಬೆಳಕು'** ಪತ್ರಿಕೆಯ ಸಂಪಾದಕರಾಗಿ, **'ಪುಸ್ತಕ ಪ್ರಪಂಚದ'** ಉಪ ಸಂಪಾದಕರಾಗಿ ಸೇವೆ. ಕೆಲವು ದಿನ ಕಾರ್ಮಿಕ ಇಲಾಖೆಯಲ್ಲೂ ದುಡಿಮೆ.

ಹೊಸ ಬೆಳಕು

ಲಿಂಗಪ್ಪನವರನ್ನು ಸರ್ಕಾರೀ ಯಂತ್ರದಿಂದ ಬಿಡಿಸಿ ಸಾರ್ವಜನಿಕ ಕ್ಷೇತ್ರಕ್ಕೆ ಎಳತಂದವರು ತರೀಕೆರೆಯ ಕೈಲಾಸವಾಸಿ ಟಿ.ಸಿ. ಬಸಪ್ಪನವರು. ಬಸಪ್ಪನವರ ಜೀವನ ಲಿಂಗಪ್ಪನವರಿಗೆ ಮಾರ್ಗದರ್ಶನ. ತರೀಕೆರೆಯಲ್ಲಿ ವಕೀಲಿ ವೃತ್ತಿ ಆರಂಭ.

ಹೆತ್ತವರ ಹಾರೈಕೆ. ಕೆಲವೇ ದಿನಗಳಲ್ಲಿ ಕೈತುಂಬ ಕೇಸು; ಜೇಬು ತುಂಬ ಕಾಸು ! ನಿಂತ ನೆಲದ ಗುಣ, ಕೈಹಿಡಿದವರ ಕಾಲುಗುಣ ! ಬಡತನದಿಂದ ಕತ್ತಲು ಕವಿದಿದ್ದ ಕಲ್ಲೇನಹಳ್ಳಿಯ ಮನೆಯಲ್ಲಿ ಹೊಸಬೆಳಕು. **'ನನ್ನ ಹೊಟ್ಟೇಲೊಂದು ಚಿನ್ನ ಹುಟ್ಟಿತು ತಾಯಿ'** ಎಂದು ಬಸಮ್ಮ ತೊಟ್ಟಿಲು ತೂಗುವಾಗ ತನ್ನ ತಾಯಿಗೆ ಹೇಳಿದ್ದರು. ಆ ಮಾತು ಸಾರ್ಥಕವಾಯಿತು.

ಲಿಂಗಪ್ಪನವರು ಕೇವಲ ವಕೀಲರಾಗಿದ್ದರೆ ಫಿರ್ಯಾದಿ-ಅಪರಾಧಿಗಳಿಗೆ, ಜೊತೆಯ ವಕೀಲರಿಗೆ ಅಷ್ಟೇ ಪರಿಚಿತರಾಗಿ ಉಳಿಯುತ್ತಿದ್ದರೇನೋ ? ಆದರೆ ನಾಡಿನ ಉದ್ದಗಲಕ್ಕೂ ಅವರನ್ನು ಕೊಂಡೊಯ್ದುದು ಜನಪದ ಸಾಹಿತ್ಯ ಮತ್ತು ಅವರ ನಿಸರ್ಗದತ್ತ ಮಧುರ ಕಂಠ !

ಕಲ್ಲೇನಹಳ್ಳಿ ಲಿಂಗಪ್ಪ 'ಕೆ. ಆರ್. ಲಿಂಗಪ್ಪ' ಆಗಿ ಬೆಳಕಿಗೆ ಬಂದುದು ವಕೀಲರಾದ ಮೇಲಲ್ಲ. ಅದಕ್ಕೂ ಮೊದಲು; ಮೈಸೂರಿನಲ್ಲಿ ಕಾಲೇಜು ಕಲಿಯುತ್ತಿದ್ದಾಗಲೇ ಕಾಲೇಜಿನ ಸಾಹಿತ್ಯ–ಸಾಂಸ್ಕೃತಿಕ ಚಟುವಟಿಕೆಗಳೊಡನೆ ಎಡೆಬಿಡದ ಸಂಬಂಧ. ಸಭೆ ಸಮಾರಂಭಗಳಲ್ಲಿ ಲಿಂಗಪ್ಪ ಹಾಡಲೇಬೇಕು, ಅಭಿಮಾನಿಗಳು ಕೇಳಲೇಬೇಕು. ವಿದ್ಯಾರ್ಥಿ ದೆಸೆಯಲ್ಲಿ ಅಂಕುರಿಸಿದ ಈ ಹಾಡಿಕೆ, ಅಭಿಮಾನಿಗಳ ಬೇಡಿಕೆ ಇಂದು ಹೆಮ್ಮರವಾಗಿ ಬೆಳೆದಿವೆ.

ಹೊಸ ಬಯಕೆ

ಇಂಪಾದ ದನಿಯಲ್ಲಿ ಕುವೆಂಪು, ಬೇಂದ್ರೆಯವರ ಕವನಗಳನ್ನು ಹಾಡಿ ಶ್ರೋತೃಗಳನ್ನು ತಣಿಸುತ್ತಿದ್ದ ವಿದ್ಯಾರ್ಥಿ ಲಿಂಗಪ್ಪನವರಿಗೆ ಹೊಸ ಬಯಕೆ ಮೂಡಿತು. ಪಟ್ಟಣದ ಪರಿಸರದಲ್ಲಿ ಗ್ರಾಮಜೀವನದ ಉಸಿರಾಡಬೇಕೆನಿಸಿತು. ಕಲಿತ ವೇದಿಕೆಯಲ್ಲಿ ಗ್ರಾಮ ಗೀತೆಗಳಿಗೆ ದೊರೆತ ಮನ್ನಣೆ ಜಾನಪದದ ಮಹಾಸಾಗರದಲ್ಲಿ ಈಜಾಡಲು ಪ್ರೇರಣೆ.

ಮಹಾಕಾವ್ಯಗಳನ್ನು ಅಭ್ಯಾಸ ಮಾಡಿದ್ದ ಲಿಂಗಪ್ಪನವರಿಗೆ ಜನಪದ ಸಾಹಿತ್ಯದ ಅಧ್ಯಯನ ಕಷ್ಟವಾಗಲಿಲ್ಲ. ಅವರದು ತಾಯಿ ಬಸಮ್ಮನವರಿಂದ ಮೊದಲೇ ಪಡೆದು ಬಂದ ಸಂಸ್ಕಾರ. ಬೆಳೆದು ಬಂದ ಹಳ್ಳಿಯ ಪರಿಸರ, ಹಾಡಿದ ಹಾಡಿಗೆ ಜನ ನೀಡಿದ ಪುರಸ್ಕಾರ ಬೆನ್ನಿಗೆ ನೆರವಾದವು. ಅಂತೇ ಗ್ರಾಮ ಗುಡಿಸಿಲಿನ ಜನಪದ ಸಾಹಿತ್ಯವನ್ನು ಸಾರ್ವಜನಿಕ ಸೋಪಾನ ಹತ್ತಿಸುವ ಹುಚ್ಚು ಹೆಚ್ಚಾಯಿತು. ಅವರಿಗೆ ಅಂದು ಹಿಡಿದ ಹುಚ್ಚು ಇಂದಿಗೂ ಬಿಟ್ಟಿಲ್ಲ. **'ಆ ಹುಚ್ಚು'** ಬಿಟ್ಟರೆ **'ಈ ಹುಚ್ಚು'** ಹಿಡಿಯುವ ಸಂಭವವನ್ನು ತಳ್ಳಿಹಾಕುವಂತಿಲ್ಲ!

ಜನಪದ ಸಾಹಿತ್ಯ ಲಿಂಗಪ್ಪನವರ ಉದಯ ಗೀತೆ: ನೀತಿ ಸಂಹಿತೆ! ಅದಕ್ಕೆ ಕಾರಣ : ಜನಪದ ಸಾಹಿತ್ಯಕ್ಕೆ ಯಾರ ಹಂಗೂ ಇಲ್ಲ. ಅದು ಬಾಳು-ಬದುಕುಗಳಿಂದ ಒಡಮೂಡಿದ ಸತ್ಯ. ಜನಸಾಮಾನ್ಯರು ಹಚ್ಚಿದ ದೀಪದ ಬೆಳಕು. ಅದೊಂದು ಲೋಕಾನುಭವದ ಪ್ರಶಾಂತ ವಿಚಾರ ಧಾರೆ. ಮುಚ್ಚು ಮರೆಯಿಲ್ಲದ ಬಿಚ್ಚು ಮಾತು. ಸಾಮಾಜಿಕ ಬದುಕಿನ ಜೀವಂತ ಜ್ಯೋತಿ !

ಅಲ್ಲಯ್ಯನ ಅಂಗಾಲ ತೇಜೋರಾಶಿಯ ಕಂಡು ಅಚ್ಚರಿಪಟ್ಟ ಸಿದ್ಧರಾಮಣ್ಣನಂತೆ

ಜನಪದ ಸಾಹಿತ್ಯದ ಅಂತರಂಗದ ಸೌಂದರ್ಯವನ್ನು ಕಂಡು ಲಿಂಗಪ್ಪನವರು ಬೆರಗಾದರು, ಬೆರೆತುಕೊಂಡರು.

ಭಾವ ಜೀವಿ

ಜನಪದ ಸಾಹಿತ್ಯದ ಹಿರಿಮೆಯನ್ನು ಸಾರುವುದೇ ಲಿಂಗಪ್ಪನವರ ಧ್ಯೇಯ. ಅದಕ್ಕಾಗಿ ಕಂಕಣ ಬದ್ಧ. ಜಾನಪದದ ಕೆಲಸವೆಂದರೆ ಸದಾ ಸಿದ್ಧ. ಜಾನಪದ ಶ್ರೀಗೆ ಲಿಂಗಪ್ಪನವರ ಹೃದಯ ಅಚಲ ಸಿಂಹಾಸನ; ನಿಶ್ಚಲ ಮಂಟಪ. ಜನಪದ ಜೀವನಾನುಭವದ ಶ್ವೇತ ಪುಷ್ಪದಲ್ಲಿ ಭೃಂಗವಾಗಿ ಬದುಕುವ ಭಾವಜೀವಿ ಕೆ.ಆರ್. ಲಿಂಗಪ್ಪ!

ಗ್ರಾಮಗೀತೆ ಅವರಿಗೆ ಭಗವದ್ಗೀತೆ. ಆ ಹಾಡುಗಳ ವೈಜ್ಞಾನಿಕ ವಿಶ್ಲೇಷಣೆ, ಶಾಸ್ತ್ರೀಯ ವಿವೇಚನೆ, ಅನುಭವದ ಒರೆಗಲ್ಲಿಗೆ ನಿಲ್ಲುವಂತಹ ಪ್ರತಿಪಾದನೆ; ಇವನ್ನು ಅವರ ಬಾಯಿಂದಲೇ ಕೇಳಬೇಕು. ಅವರ ಮಾತು-ಗೀತೆಗಳನ್ನು ಸವಿದಷ್ಟೂ ಸವಿಯಬೇಕೆನಿಸುತ್ತದೆ. ಆ ಸೋಜಿಗದ ಸವಿನುಡಿಯ ಸಾಗರದಲ್ಲಿ ಓಲಾಡದ ಶ್ರೋತೃಗಳಿಲ್ಲ; ಅವರ ನಗೆ ಮಾತಿನ ಸರೋವರದಲ್ಲಿ ಮೀಯದ ಸಭಿಕರಿಲ್ಲ. ಕುಮಾರವ್ಯಾಸನು ಹಾಡಿದರೆ ಕಲಿಯುಗ ದ್ವಾಪರ ಯುಗವಾಗುವುದೆನ್ನುತ್ತಾರೆ. ಕೆ.ಆರ್. ಲಿಂಗಪ್ಪನವರು ಹಾಡಿದರೆ ದ್ವಾಪರವೇ ಕಲಿಯಾಗಿಬಿಡುತ್ತದೆ!

ಮೂಗೂರು ಮಲ್ಲಪ್ಪನವರ **"ಜೋಗದ ಝೋಕು"** ಲಿಂಗಪ್ಪನವರ ಕಂಠಕ್ಕಾಗಿ ಹೇಳಿ ಮಾಡಿಸಿದ ಆಭರಣ! ಅದು ಬೇರಾರಿಗೂ ಸಲ್ಲದ ಸೊಲ್ಲು! ಅವರ **"ಕೆರೆಗೆ ಹಾರ"** ಕೇಳಿದವರ ಕಣ್ಣಲ್ಲಿ ನೀರು ಧಾರಾಕಾರ. **"ಮೂಸವನಿ ಪದ"** ಮಕ್ಕಳಿಗೆ ಮುದ; ಹಿರಿಯರಿಗೆ ಹದ. 'ಸೋಬಾನೆ ಪದ'ಗಳ ಬೆಡಗೇ ಬೆಡಗು ಕೋಲು ಪದಗಳ ಚೆಲುವೇ ಚೆಲುವು. ಪ್ರೇಮಗೀತೆಗಳ ಒಲವೇ ಒಲವು!

ಲಿಂಗಪ್ಪನವರು ಜನಪದ ಸಾಹಿತ್ಯವನ್ನು ಹಳ್ಳಿಗಳಲ್ಲಿ ಹಾಡಿ ಅದರ ಸ್ವರೂಪ ದರ್ಶನ ಮಾಡಿಸಿದ್ದಾರೆ; ಪಟ್ಟಣಗಳಲ್ಲಿ ಹಾಡಿ ಅದರ ವಿಶ್ವರೂಪ ದರ್ಶನ ಮಾಡಿಸಿದ್ದಾರೆ!

ಕಿನ್ನರ ಯೋಗಿ

ಇಷ್ಟಾದರೂ ಲಿಂಗಪ್ಪನವರು ಕೇವಲ ಜಾನಪದ ಜೀವಿ ಮಾತ್ರವಲ್ಲ! ಕನ್ನಡ ಕಾವ್ಯಗಳ ಕಿನ್ನರ ಯೋಗಿಯೂ ಹೌದು. ಅವರ ಕಂಠಕ್ಕೆ ಪಂಪ ಭಾರತದ ನಂಟಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯ ನಾಲಗೆಯಲ್ಲಿ ನಲಿದಾಡಿದೆ. ಹರಿಹರನ ರಗಳೆ ಹೃದ್ಗತವಾಗಿದೆ. ವಚನ ಸಾಹಿತ್ಯದ ಬಗ್ಗೆ ಜನಪದ ಸಾಹಿತ್ಯದಷ್ಟೇ ಆಸಕ್ತಿ. ಹಳ್ಳಿಯ ನುಡಿಗೆ ವಚನದ ಬೆಡಗನ್ನು ಜೋಡಿಸುವಲ್ಲಿ ಅವರದೇ ಮೋಡಿ. (ಒಮ್ಮೆ ಕೇಳಿ ನೋಡಿ!)

ಜಾನಪದ ಕ್ಷೇತ್ರಕ್ಕೆ ಲಿಂಗಪ್ಪನವರ ಸ್ಮರಣೀಯ ಕಾಣಿಕೆ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನ ಮತ್ತು ಆ ಸಂದರ್ಭದಲ್ಲಿ ಹೊರತಂದ **"ಹೊನ್ನ ಬಿತ್ತೇವು ಹೊಲಕೆಲ್ಲ"** ಎಂಬ ಸ್ಮರಣ ಗ್ರಂಥ. ೧೯೭೦ರಲ್ಲಿ ತರೀಕೆರೆಯಲ್ಲಿ ನಡೆದ

ಸಮ್ಮೇಳನ ಈ ಲೇಖಕನ ಯೋಜನೆ. ಅದು ಫಲಕಾರಿಯಾಗಲು ಲಿಂಗಪ್ಪನವರು ವಹಿಸಿದ ಪಾತ್ರ ಅನನ್ಯ. ಜಾನಪದ 'ಹುಚ್ಚಾಸ್ಪತ್ರೆ'ಗೆ ನನ್ನನ್ನು ದಾಖಲು ಮಾಡಿದ ಕೀರ್ತಿಯೂ ಅವರದೇ! ಅವರ ಅನುಭಾವ ಅಂಟಿಸಿದ ಹಣತೆಗಳು ಹಲವಾರು.

"ಇರುವ ಕೋಗಿಲೆಯ ಕೊಲ್ಲು, ಬಡಿ, ಸಾಯಿಸು, ಸತ್ತಮೇಲೆ ಸ್ಮಾರಕಕ್ಕಾಗಿ ಹುಲ್ಲು ತುರುಕಿ ಇಡು ಕೊಂಬೆ ಮೇಲೆ" ಇದು ನಮ್ಮ ಸಮಾಜದ ನೀತಿ. ಆದರೆ ಲಿಂಗಪ್ಪನವರ ವಿಷಯದಲ್ಲಿ ಇದು ಅಪವಾದ. ಅವರಿಗೆ ನಿರಂತರ ಮನ್ನಣೆ ದೊರೆಯುತ್ತಿದೆ: ಸನ್ಮಾನದ ಸುರಿ ಮಳೆಯಾಗುತ್ತಿದೆ.

ಸಾರ್ವಜನಿಕ ಮನ್ನಣೆ

ಚಿತ್ರದುರ್ಗದ ಬೃಹನ್ಮಠ ಮತ್ತು ಬಾಳೆಹೊನ್ನೂರು ಧರ್ಮ ಪೀಠದ ಜಗದ್ಗುರುಗಳಿಂದ **'ಜನಪದ ಸಾಹಿತ್ಯ ರತ್ನ,' 'ಸಾಹಿತ್ಯ ಭಾಸ್ಕರ'** ಎಂಬ ಬಿರುದು ದೊರೆತಿವೆ. ನಾಡಿನ ನೂರಾರು ಸಂಘ ಸಂಸ್ಥೆಗಳು ಸನ್ಮಾನ ಮಾಡಿವೆ. ೧೯೭೬ ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಅವರ ಜಾನಪದ ಸೇವೆಗಾಗಿ ರಾಜ್ಯ ಪ್ರಶಸ್ತಿಯಿತ್ತು ಗೌರವಿಸಿದೆ.

ಕೆ. ಆರ್. ಲಿಂಗಪ್ಪ ಜಾನಪದದ ನಿತ್ಯ ಆರಾಧಕ. ಸಾಮಾಜಿಕ ಸೇವೆ ಅವರ ಮತ್ತೊಂದು ಕಾಯಕ. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ, ತರೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಉಪಾಧ್ಯಕ್ಷರಾಗಿ, ಸ್ಥಳೀಯ ಸಂಘ ಸಂಸ್ಥೆಗಳ ಪೋಷಕರಾಗಿ ಸೇವೆ. ಲಕ್ಕವಳ್ಳಿಯ ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಸ್ಥಾಪನೆಯಲ್ಲಿ ಲಿಂಗಪ್ಪನವರ ಪಾತ್ರ ಸ್ಮರಣೀಯ.

ಸಾಹಿತ್ಯ-ಸಂಸ್ಕೃತಿಗಳ ಸಹವಾಸದ ಜೊತೆಗೆ ಧಾರ್ಮಿಕ ಕ್ಷೇತ್ರದ ಸಂಬಂಧ. ವಿಶ್ವವಿಭೂತಿ ಬಸವಣ್ಣನವರಲ್ಲಿ ಪರಮ ಭಕ್ತಿ. ಬಸವ ಧರ್ಮ ಪ್ರಸಾರದಲ್ಲಿ ಅತ್ಯಂತ ಆಸಕ್ತಿ. ವಿಶ್ವ ಕಲ್ಯಾಣ ಮಿಷನ್ನಿನ ಸಲಹಾ ಮಂಡಲಿ ಸದಸ್ಯರು ಲಿಂಗಪ್ಪನವರು.

ನಾಡು ಋಣಿ

ಹಳ್ಳಿಯ ಬಳ್ಳಿಯೊಂದರಲ್ಲಿ ಬಿಟ್ಟ ಈ ಹೂವು ಇಂದು ಕನ್ನಡ ನಾಡಿನ ಮೂಲೆ ಮೂಲೆಯಲ್ಲೂ ಜಾನಪದ ಸುಗಂಧವನ್ನು ಬೀರಿದೆ. ಇಂತಹ ಹೂವನ್ನು ಕೊಟ್ಟ ರಂಗಪ್ಪ ಮತ್ತು ಬಸಮ್ಮನವರಿಗೆ ನಾಡು ಋಣಿಯಾಗಿದೆ.

ಲಿಂಗಪ್ಪನವರದು ತುಂಬು ಸಂಸಾರ. ಸೌಜನ್ಯ-ಸಹೃದಯಗಳ ಪ್ರತೀಕ ಧರ್ಮಪತ್ನಿ ಪಾರ್ವತಮ್ಮ. ಅವರೂ ಹಳ್ಳಿಯ ಹೆಣ್ಣೇ! ಎಂತಲೇ ಲಿಂಗಪ್ಪನವರ ಸಾಹಿತ್ಯ ಸೇವೆಗೆ ಅಷ್ಟೊಂದು ಸಹಕಾರ.

ಭಾಷಣದ ಸುಗ್ಗಿಯಲ್ಲಿ ಎಷ್ಟೋ ಭಾರಿ ವಕೀಲಿ ವೃತ್ತಿ ಸೊರಗಿದುದುಂಟು. ಆದರೂ ಕರೆದ ಕಡೆ ಇಲ್ಲವೆನ್ನದೆ ಹೋಗಿ ನುಡಿ ಸೇವೆ ಸಲ್ಲಿಸಿದ್ದಾರೆ ಲಿಂಗಪ್ಪನವರು. ಜಾನಪದ ಜೇನ ಹನಿಸಲು ಅವರು ಕಾರವಾರದಿಂದ ಕೋಲಾರದವರೆಗೆ, ಕಲ್ಯಾಣದಿಂದ

ಕೊಳ್ಳೇಗಾಲದವರೆಗೆ ಕಾಲಾಡಿದ್ದಾರೆ. "ಇವರ ಕಾಲಲ್ಲಿ ಚಕ್ರವಿರಬೇಕು" ಎನ್ನುತ್ತಾರೆ ಪಾರ್ವತಮ್ಮ ! (ಈ ಲೋಕ ಸಂಚಾರಿಯನ್ನು ನಂಬಿಕೊಂಡರೆ ಮನೆಯ ಗತಿ ಗಂಗಮ್ಮ !)

ಲಿಂಗಪ್ಪನವರು ತಮ್ಮ ಭಾಷಣದಲ್ಲಿ ಇದೊಂದು ತ್ರಿಪದಿಯನ್ನು ತಪ್ಪದೆ ಹಾಡುತ್ತಾರೆ.

ಬಡತನ ಬಹಳಿರಲಿ । ಬಹಳ ಮಕ್ಕಳಿರಲಿ
ಬಡತನದ ಚಿಂತೆ ನಿನಗಿರಲಿ । ಶಿವರಾಯ
ಮ್ಯಾಗೆ ಗುರುವಿನ ದಯವಿರಲಿ ॥

ಅವರು ಬರೀ ನುಡಿಯುವವರಲ್ಲ : ನುಡಿದಂತೆ ನಡೆಯುವವರು. ಅವರು ಎಂಟು ಮಕ್ಕಳ ತಂದೆ! ನಾಲ್ಕು ಹೆಣ್ಣು, ನಾಲ್ಕು ಗಂಡು. ಮಕ್ಕಳು ಮಡದಿಯ ಮೇಲೆ ಅಪಾರ ಕಕ್ಕುಲತೆ. ಅವರಿಗೀಗ ಬಡತನವೂ ಇಲ್ಲ; ಬಡತನದ ಚಿಂತೆಯೂ ಇಲ್ಲ. ಆದರೆ '**ಗುರುವಿನ ಕರುಣೆಗೆ ಕೊರತೆಯಿಲ್ಲ**'. ಎಂತಲೇ ಅವರ ಮನೆ ಈಗ ನೆಮ್ಮದಿಯ ನೆರಳು !

ಜಾನಪದದ ಶ್ರೀರಕ್ಷೆಯಲ್ಲಿ ಕಳೆದ ನಾಲ್ಕು ದಶಕಗಳಿಂದ ಆಡುತ್ತ, ಹಾಡುತ್ತ ಬಂದಿರುವ ಲಿಂಗಪ್ಪನವರಿಗೆ ಒಂದು ಶಾಶ್ವತ ಕಾಣಿಕೆ ನೀಡಲು ಅವರ ಅಭಿಮಾನಿಗಳ ಬಳಗ ಸಿದ್ಧತೆ ನಡೆಸಿದೆ. ನಾಡಿಗೆ "**ಹೊನ್ನ ಬಿತ್ತೇವು ಹೊಲಕೆಲ್ಲ**"ಗ್ರಂಥ ನೀಡಲು ಕಾರಣರಾದ ಅವರಿಗೆ ಅಂತಹುದೇ ಶ್ರೇಷ್ಠ ಜಾನಪದ ಗ್ರಂಥವೊಂದನ್ನು ಅರ್ಪಿಸಲು ಯೋಚಿಸಿದೆ.

ಅನುಭಾವ ಜ್ಯೋತಿ


ಜನಪದ ಸಾಹಿತ್ಯ ಸಕಲ ಸಾಹಿತ್ಯದ ಓಂಕಾರ. ಜೀವನಾನುಭವದ ಸಾಕಾರ. ಆದುದರಿಂದಲೇ ಲಿಂಗಪ್ಪನವರಿಗೆ ಅದರ ಬಗ್ಗೆ ಅಖಂಡ ವಿಶ್ವಾಸ ; ಅನಂತ ಶ್ರದ್ಧೆ. ಜಾನಪದ ಲಿಂಗಪ್ಪನವರ ಜೀವದುಸಿರು. ಜಾನಪದದ ಬಗ್ಗೆ ಅವರಿಗೆ ಜಗ್ಗದ, ಕುಗ್ಗದ ನಿಷ್ಠೆ.

ಜಾನಪದ ನಾದಬ್ರಹ್ಮವ ನುಡಿಸುತ್ತಿರುವ ಅನುಭವ ಜ್ಯೋತಿ ಕೆ. ಆರ್. ಲಿಂಗಪ್ಪ. ಅವರ ನುಡಿ ಝೇಂಕಾರದ ದನಿ ಕೇಳಿ ಭಾವಪರವಶವಾದವರ ಸಂಖ್ಯೆ ಸಹಸ್ರ ಸಹಸ್ರ.

ಅದೋ ಕೇಳಿ, ಮಣ್ಣಿನ ಹಾಡಿನ ಮಂಗಳ ವಾಸನೆಯ ತಂಗಾಳಿ ತೀಡುತ್ತಿರುವ ಲಿಂಗಪ್ಪನವರ ವಾಣಿ —

ಮಂದಿ ಮಕ್ಕಳೊಳಗೆ । ಚಂದಾಗೊಂದಿರಬೇಕ
ನಂದೀಯ ಶಿವನ ದಯದಿಂದ । ಹೋಗಾಗ
ಮಂದೀ ಬಾಯಾಗ ಇರಬೇಕ !

ಓಂ ಶ್ರೀ ಗುರುಬಸವಲಿಂಗಾಯ ನಮಃ



ಧರ್ಮಗುರು ಬಸವಣ್ಣನ ಸಾಕ್ಷಿಯಾಗಿ,

ಜಗತ್‌ಕರ್ತ ಪರಮಾತ್ಮನ ಸಾಕ್ಷಿಯಾಗಿ,

ಬಸವಧರ್ಮದ ಸರ್ವಶರಣರ ಸಾಕ್ಷಿಯಾಗಿ,

ನಾನು, ______________________ ಯು, ಆದಿಗುರು ಬಸವಣ್ಣನವರ ಷಟ್‌ಸ್ಥಲ ವಚನಗಳನ್ನೇ ಪ್ರಮಾಣವಾಗಿರಿಸಿಕೊಂಡು, ಬಸವಮಂಟಪದಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸುತ್ತೇನೆ.

೧. ಪ್ರಣವ ಪುರುಷ, ಸಮತಾವಾದಿ, ಮನುಕುಲೋದ್ಧಾರಿ, ವಿಶ್ವಗುರು ಬಸವಣ್ಣನವರನ್ನು ಬಸವಧರ್ಮದ ಆದಿಗುರುವೆಂದು, ಮಂತ್ರಪುರುಷನೆಂದು, ಶರಣಾಗತ ರಕ್ಷಕನೆಂದು, ಮೋಕ್ಷದಾಯಕ ಗುರುವೆಂದು ನಂಬಿ ಅವರ ಶ್ರೀಪಾದಕ್ಕೆ ಶರಣಾಗುತ್ತೇನೆ.

೨. ಪ್ರಥಮ ಗುರು ಬಸವಣ್ಣನವರು ಮತ್ತು ಬಸವ ಸಂಪ್ರದಾಯದ ಶರಣರು ನೀಡಿದ ವಚನಶಾಸ್ತ್ರವೊಂದನ್ನೇ ನನ್ನ ಆಚಾರ-ವಿಚಾರಗಳನ್ನು ರೂಪಿಸುವ ಧರ್ಮಶಾಸ್ತ್ರವೆಂದು ನಂಬಿ ಬಸವ ಪಥದಲ್ಲಿ ನಡೆಯುತ್ತೇನೆ.

೩. ಬಸವ ಧರ್ಮಿಯೆಂದು, ಬಸವಾಯತನೆಂದು ಇನ್ನು ಮುಂದೆ ಕರೆದುಕೊಳ್ಳುವ ನಾನು ಈ ಭಾರತೀಯ ಪರಂಪರೆಯ ಸಮಸ್ತ ಮಹಾಂತರನ್ನು ಮತ್ತು ವಿಶ್ವದ ಸಕಲ ಸಂತರನ್ನೂ ಗೌರವಿಸಿ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶರಣ ಪಥದಲ್ಲಿ ನಡೆಯುತ್ತೇನೆ.

ನೇತೃತ್ವ.. ಹೆಸರು ....

.... ಮತ್ತು ....

ಗಣಸಾಕ್ಷಿ ೧) .... ವಿಳಾಸ ....


ದಿನಾಂಕ ______________________ ....

ಮಾರ್ಗದರ್ಶನಕ್ಕೆ ಬರೆಯಿರಿ :

ಪ್ರಚಾರಕರು :-

ವಿಶ್ವ ಕಲ್ಯಾಣ ಮಿಷನ್

ಬಸವ ಮಂಟಪ, ೨೪, ಎರಡನೆಯ ಬ್ಲಾಕು ಕಾರ್ಡ್‌ರೋಡ್
ರಾಜಾಜಿನಗರ, ಬೆಂಗಳೂರು-೫೬೦೦೧೦



ಬಸವ ಮಂಟಪ

ಸ್ಥಾಪನೆ: ೧೯೭೨

Correspond to :

BASAVA MANTAPA

No. 24, Chord Road, 2nd Block, Rajajinagar,
BANGALORE-560010